ಸಂಪುಟ: 04 ಸಂಚಿಕೆ: 312 ಪುಟಗಳು: 08 ಶುಕ್ರವಾರ 24 ಜನವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

**ಮುಂಜಾನೆ ಮಾತು**

ಸಂತೋಷ ಎಂಬುದು ನಮ್ಮದೇ ಮನಸ್ಥಿತಿ ಆಗಿದೆ, ಅದು ಹೊರಗಿನ ಪ್ರಪಂಚದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ.




# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ನಾನು ಯಾರ ಬಗ್ಗೆಯೂ ವರಿಷ್ಠರಿಗೆ ಚಾಡಿ ಹೇಳಿಲ್ಲ

• ಉದಯವಾಹಿನಿ, ಬೆಂಗಳೂರು

ನನಗೆ ಯಾರ ಬಗ್ಗೆಯೂ ಚಾಡಿ ಹೇಲುವ ಅವಶ್ಯಕತೆ ಇಲ್ಲ. ಶ್ರೀರಾಮುಲು ಬಗ್ಗೆಯೂ ನಾನು ಚಾಡಿ ಹೇಳಿಲ್ಲ ಎಂದು ಗಂಗಾವತಿ ಶಾಸಕ ಜನಾರ್ಧನ ರೆಡ್ಡಿ ತಿಳಿಸಿದ್ದಾರೆ. ಸಂಡೂರು ಉಪಚುನಾವಣೆಯಲ್ಲಿ ಬಂಗಾರು ಹನುಮಂತುಗೆ ಟಿಕೆಟ್ ಕೊಡಿಸಿದ್ದು ನಾನಲ್ಲ. ಪಕ್ಷವೇ ಬಂಗಾರು ಹನುಮಂತುಗೆ ಟಿಕೆಟ್ ನೀಡಿದೆ. ಉಪಚುನಾವಣೆಯಲ್ಲಿ




ಯಾಕೆ ಸೋಲಾಗಿದೆ ಎಂಬುದು ಗೊತ್ತು. ನಾನು ಯಾವ ವರಿಷ್ಠರ ಬಳಿಯೂ ಶ್ರೀರಾಮುಲು ಬಗ್ಗೆ ಚಾಡಿ ಹೇಳಿಲ್ಲ. ಆರೋಪವನ್ನೂ ಮಾಡಿಲ್ಲ ಎಂದು ಹೇಳಿದರು. ರಾಮುಲು ನನ್ನ ಮೇಲೆ ವರಿಷ್ಠರಿಗೆ ಹೇಳಿಕೊಟ್ಟಿದ್ದೇನೆ ಎಂದಿದ್ದಾರೆ. ಆದರೆ ನಾನು ಯಾವುದೇ ವರಿಷ್ಠರಿಗೂ ಚಾಡಿ ಹೇಳಿಲ್ಲ, ನನಗೆ ಅದರ ಅವಶ್ಯಕತೆಯೂ ಇಲ್ಲ. ಇನ್ನು ಶ್ರೀರಾಮುಲು ಪಕ್ಷವನ್ನು ಬಿಡುತ್ತೇನೆ ಎಂದು ಹೇಳುವುದು ಇದೇ ಹೊಸದೇನಲ್ಲ ಹಲವು ಬಾರಿ ಅವರು ಈ ಮಾತು ಹೇಳಿದ್ದಾರೆ ಎಂದು ಟಾಂಗ್ ನೀಡಿದರು.

### ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಕೊಟ್ಟರೆ ಒಪ್ಪಿಕೊಳ್ಳುತ್ತೇನೆ

ಬಿಜೆಪಿ ರಾಜ್ಯ ಘಟಕದ ಸ್ಥಾನ ಕೊಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಹೇಳುವ ಮೂಲಕ ಮಾಜಿ ಸಚಿವ ಶ್ರೀರಾಮುಲು ರಾಜ್ಯಾಧ್ಯಕ್ಷ ಹುದ್ದೆ ಆಕಾಂಕ್ಷೆ ಹೊರ ಹಾಗಿದ್ದಾರೆ. ಬಳ್ಳಾರಿಯಲ್ಲಿ ಬೆಂಬಲಿಗರ ಸಭೆ ನಡೆಸಿರುವ ಶ್ರೀರಾಮುಲು, ರಾಜ್ಯಾಧ್ಯಕ್ಷ ಸ್ಥಾನ ಕೊಟ್ಟರೆ ಒಪ್ಪಿಕೊಳ್ಳುತ್ತೇನೆ. ಸಣ್ಣವರೆಲ್ಲಾ ರಾಜ್ಯಾಧ್ಯಕ್ಷರಾಗುತ್ತಿದ್ದಾರೆ. ಅದಕ್ಕೆ ರಾಜ್ಯಾಧ್ಯಕ್ಷ ಹುದ್ದೆಗೆ ವೋಟಿಂಗ್ ಮಾಡುತ್ತಿದ್ದಾರೆ. ನನಗೂ ರಾಜ್ಯಾಧ್ಯಕ್ಷನಾಗಬೇಕು ಎಂಬ ಆಸೆಯಿದೆ, ನೇಮಿಸಿದರೆ ಒಪ್ಪಿಕೊಳ್ಳುತ್ತೇನೆ ಎಂದರು. ಚುನಾವಣೆ ನಡೆದರೆ ಒಪ್ಪಲ್ಲ ಈಗಾಗಲೇ ನಾನು ಚುನಾವಣೆಯಲ್ಲಿ ಸೋತು ನಿರುದ್ಯೋಗಿಯಾಗಿದ್ದೇನೆ. ಮುಂದಿನ ಚುನಾವಣೆಯಲ್ಲಿ ಕೂಡ್ಲಗಿಯಿಂದ ಸ್ಪರ್ಧಿಸುತ್ತೇನೆ. ಈ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದರು.

# ಮುಡಾ ಕೇಸ್‌ನಲ್ಲಿ ಸಿದ್ದರಾಮಯ್ಯ ಮುಕ್ತ ಮುಕ್ತ




1 ಮುಡಾ ಹಗರಣದ ತನಿಖಾ ವರದಿಯನ್ನು ಲೋಕಾಯುಕ್ತ ಅಧಿಕಾರಿಗಳು ಸೋಮವಾರ ಕೋರ್ಟ್‌ಗೆ ಸಲ್ಲಿಕೆ

2 ಲೋಕಾಯುಕ್ತ ಎಸ್‌ಪಿ ಟಿಜೆ ಉದೇಶ್ ನೇತೃತ್ವದಲ್ಲಿ ತನಿಖೆ ನಡೆದು ವರದಿ ಸಿದ್ಧಪಡಿಸಲಾಗಿದೆ.

3 ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಮನವಿ ಮಾಡಿ ಸಲ್ಲಿಕೆ

4 ಜನವರಿ 27ರಂದು ಸಿಬಿಐ ತನಿಖೆ ವಿಚಾರವಾಗಿ ಹೈಕೋರ್ಟ್ ತೀರ್ಪು ನೀಡುವ ನಿರೀಕ್ಷೆ




- ಕ್ಲೈಮ್ಯಾಕ್ಸ್ ತಲುಪಿದ ಲೋಕಾಯುಕ್ತ ತನಿಖೆ
- ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗೆ ಕ್ಲೀನ್‌ಚಿಟ್
- ಲೋಕಾಯುಕ್ತ ನಿರ್ಧಾರ ಪ್ರಶ್ನಿಸಿದ ಬಿವೈ ವಿಜಯೇಂದ್ರ

• ಉದಯವಾಹಿನಿ, ಮೈಸೂರು

ರಾಜ್ಯ ರಾಜಕಾರಣದಲ್ಲಿ ಬಿರುಗಾಳಿ ಎಬ್ಬಿಸಿದ್ದ ಮುಡಾ ಹಗರಣದ ಲೋಕಾಯುಕ್ತ ತನಿಖೆ ಕ್ಲೈಮ್ಯಾಕ್ಸ್ ಹಂತ ತಲುಪಿದೆ.

ಈ ಲೋಕಾಯುಕ್ತ ವರದಿಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿ ಅವರಿಗೆ ಕ್ಲೀನ್‌ಚಿಟ್ ನೀಡಲಾಗಿದೆ ಎಂದು ಹೇಳಲಾಗುತ್ತಿದೆ. ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಪಾತ್ರವಿಲ್ಲ. ಡಿ ನೋಟಿಫೈ ಮಾಡುವಾಗ, ಭೂಪರಿವರ್ತನೆ ಮಾಡುವಾಗ ಅಧಿಕಾರಿಗಳು ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಲೋಕಾಯುಕ್ತ ತನಿಖಾ ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎಂದು ಹೇಳಲಾಗಿದೆಯಂತೆ..

**ಲೋಕಾಯುಕ್ತ ತನಿಖಾ ವರದಿ ಸೋಮವಾರ ಕೋರ್ಟ್‌ಗೆ ಸಲ್ಲಿಕೆ:** ಮುಡಾ ಹಗರಣದ ತನಿಖಾ ವರದಿಯನ್ನು ಲೋಕಾಯುಕ್ತ ಅಧಿಕಾರಿಗಳು ಸೋಮವಾರ ಕೋರ್ಟ್‌ಗೆ ಸಲ್ಲಿಕೆ ಮಾಡಲಿದ್ದಾರೆ. ಲೋಕಾಯುಕ್ತ ಎಸ್‌ಪಿ ಟಿಜೆ ಉದೇಶ್ ನೇತೃತ್ವದಲ್ಲಿ ತನಿಖೆ ನಡೆದು ವರದಿ ಸಿದ್ಧಪಡಿಸಲಾಗಿದೆ.

**ಈ ಪ್ರಕರಣದಲ್ಲಿ ಸಿಎಂ ಹಾಗೂ ಅವರ ಪತ್ನಿಯಾಗಲಿ ಭಾಗಿಯಾಗಿಲ್ಲ:** ಕೆಸರೆ ಜಮೀನು ಸರ್ವೇ ನಂ.464 ರ 3.16 ಎಕರೆ ಭೂಮಿ ಪರಿವರ್ತನೆಯ 14 ಸೈಟ್ ಗಳನ್ನ ಪಡೆದುಕೊಂಡ ನಿಯಮಾವಳಿಗಳ ಕುರಿತು ಎಲ್ಲಾ ಹಂತದಲ್ಲೂ ತನಿಖೆ ಮಾಡಲಾಗಿದೆ. ತನಿಖೆಯಲ್ಲಿ ಅಧಿಕಾರಿಗಳ ದೋಷಗಳು ಕಂಡು ಬಂದಿದೆ. ಸಿಎಂ ಹಾಗೂ ಅವರ ಪತ್ನಿಯಾಗಲಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ ಎಂದು ಹೇಳಲಾಗಿದೆ ಎನ್ನಲಾಗಿದೆ. ಲೋಕಾಯುಕ್ತರು ಅಂತಿಮ ಹಂತದ ರಿಪೋರ್ಟ್ ರೆಡಿ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಶಾಸಕ ಟಿ.ಎಸ್ ಶ್ರೀವತ್ಸ ಅವರು, ಹಗರಣದಲ್ಲಿ ಸಿದ್ದರಾಮಯ್ಯ, ಪಾರ್ವತಿ ಅವರ ತಪ್ಪಿಲ್ಲ ಅಂತ ಲೋಕಾಯುಕ್ತ ಬಿ ರಿಪೋರ್ಟ್ ಹಾಕಲು ಮುಂದಾಗಿದೆ. ಯಾವ ರೀತಿ ತನಿಖೆ ಮಾಡಿದ್ದಾರೋ ಗೊತ್ತಿಲ್ಲ. ನಾನು ಮೊದಲಿನಿಂದಲೂ ಹೇಳಿದ್ದೇನೆ., ಲೋಕಾಯುಕ್ತದಲ್ಲಿ ನ್ಯಾಯಯುತ ತನಿಖೆ ಆಗಲ್ಲ ಎಂದು ಹೇಳಿದರು.

ಸಿದ್ದರಾಮಯ್ಯ ಕೆಳಗಡೆ ಕೆಲಸ ಮಾಡುವ ಅಧಿಕಾರಿಗಳು ಸಿದ್ದರಾಮಯ್ಯ ತಪ್ಪು ಮಾಡಿದ್ದಾರೆ ಅಂತ ಹೇಗೆ ಹೇಳ್ತಾರೆ ಪಾರ್ವತಿ ಅವರ ಮೇಲೆ ನಮಗೆ ಗೌರವವಿದೆ, ಆದ್ರೆ ಅವರ ವಿಚಾರಣೆ ಗುಪ್ತ ಸ್ಥಳದಲ್ಲಿ ಆಗಿದೆ. ಲೋಕಾಯುಕ್ತ ರಿಪೋರ್ಟ್ ಕೊಡಲಿ ನಮ್ಮ ಕಾನೂನು ಹೋರಾಟ ಮುಂದುವರೆಯುತ್ತದೆ ಎಂದರು. ಬಿಜೆಪಿ ಸರ್ಕಾರದಲ್ಲಿ ರಾಜಕಾರಣಿಗಳು ಮಂತ್ರಿಗಳು ತಪ್ಪು ಮಾಡಿದ್ದಾರೆ ಅಂತ ಸಿದ್ದರಾಮಯ್ಯ ಹೇಳ್ತಾರೆ. ಅದೇ ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲಾ ತಪ್ಪನ್ನು ಅಧಿಕಾರಿಗಳ ಮೇಲೆ ಹಾಕ್ತಿದ್ದಾರೆ. ತಪ್ಪು ಮಾಡಿರುವ ಮಾಜಿ ಆಯುಕ್ತರಾದ ದಿನೇಶ್ ಕುಮಾರ್, ನಟೇಶ್ ಮೇಲೆ ಕ್ರಮ ಆಗಿಲ್ಲ ಶಾಸಕ ಶ್ರೀವತ್ಸ ಕಿಡಿಕಾರಿದರು.

### ಸಿಎಂ ಪ್ರಭಾವ ಇಲ್ಲದೆ ಸಾಧ್ಯವೇ ಇಲ್ಲ



ಲೋಕಾಯುಕ್ತ ವರದಿಯಲ್ಲಿ ಸಿಎಂ ಸಿದ್ದರಾಮಯ್ಯಗೆ ಕ್ಲೀನ್‌ಚಿಟ್ ನೀಡಲಾಗಿದೆ ಎಂಬ ವರದಿಯ ಬಗ್ಗೆ ಪ್ರತಿಕ್ರಿಯಿಸಿದ ಮುಡಾ ಹಗರಣದ ಪ್ರಮುಖ ದೂರುದಾರ ಸ್ನೇಹಮಯಿ ಕೃಷ್ಣ, ಸಿಎಂ ಪ್ರಭಾವ ಇಲ್ಲದೆ ಅಧಿಕಾರಿಗಳು ಅಕ್ರಮ ಎಸಗಲು ಸಾಧ್ಯವೇ ಇಲ್ಲ ಎಂದಿದ್ದಾರೆ. ಲೋಕಾಯುಕ್ತ ವರದಿಯಲ್ಲಿ ಸಿಎಂ ಹಾಗೂ ಅವರ ಪತ್ನಿಗೆ ಕ್ಲೀನ್‌ಚಿಟ್ ನೀಡಿರುವ ಬಗ್ಗೆ ಅಧಿಕೃತ ಮಾಹಿತಿ ನಮಗೆ ಬಂದಿಲ್ಲ. ಆದಾಗ್ಯೂ ಅದು ನಿರೀಕ್ಷಿತ. ಇದರಿಂದ ನನ್ನ ಹೋರಾಟಕ್ಕೆ ಯಾವುದೇ ಅಡ್ಡಿಯಾಗುವುದಿಲ್ಲ. ಸಿಎಂ ಪ್ರಭಾವ ಇಲ್ಲದೆ ಅಧಿಕಾರಿಗಳು ಅಪರಾಧವೆಸಗಲು ಸಾಧ್ಯವೇ ಇಲ್ಲ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಭಾವ ಬಳಸಿದ್ದಾರೆ ಎಂದು ಆರೋಪಿಸಿದ್ದಾರೆ.


### ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದು ಖಚಿತ..



ಲೋಕಾಯುಕ್ತದವರು ಸಿಎಂಗೆ ಕ್ಲೀನ್ ಚಿಟ್ ನೀಡಿದ್ದಾರೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಹೈಕೋರ್ಟ್ ತೀರ್ಪಿಗೂ ಮೊದಲೆ ಲೋಕಾಯುಕ್ತ ವರದಿ ನೀಡಿದೆ. ತನಿಖೆ ನಡೆಯುವಾಗ ಆಧಾರ ರಹಿತ ವರದಿ ನೀಡಲು ಸಾಧ್ಯವಿಲ್ಲ. ಪ್ರಕರಣದ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ.. ಇಡಿ ಅಧಿಕಾರಿಗಳು ಪತ್ರಿಕಾಗೋಷ್ಠಿ ನಡೆಸಿ, ಮುಡಾದಲ್ಲಿ ಎಷ್ಟು ಹಗರಣ ಆಗಿದೆ ಹೈಕೋರ್ಟ್ ಸಹ ಈ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ಆದರೆ, ರಾಜ್ಯ ಸರ್ಕಾರ ರಾಜ್ಯಪಾಲರನ್ನು ನಿಂದಿಸುವ ಕೆಲಸ ಮಾಡುತ್ತಿದೆ.. ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವೇನು ಎಂಬುದು ನಾಡಿನ ಜನತೆಗೆ ಗೊತ್ತಿದೆ. ಈ ವಿಚಾರವಾಗಿ ಬಿಜೆಪಿ ನಡೆಸಿದ ಹೋರಾಟದ ಬಗ್ಗೆ ಜನರಿಗೆ ಅರಿವಿದೆ. ಮುಂದೆಯೂ ಬಿಜೆಪಿ ಮುಡಾ ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಕೆಲಸ ಮಾಡಲಿದ್ದು, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದು ಖಚಿತ.. ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಗುಡುಗಿದರು.

### ಏನಿದು ಮುಡಾ ಹಗರಣ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ವಿಚಾರದಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಆರೋಪಿಸಲಾಗಿತ್ತು. 50-50 ಅನುಪಾತದಡಿ ಸರಿಯಾಗಿ ಹಂಚಿಕೆ ಮಾಡದೆ ಬೇಕಾಬಿಟ್ಟಿ ಹಂಚಿಕೆ ಮಾಡಲಾಗಿದ್ದು ಅಂದಾಜು 5 ಸಾವಿರ ಕೋಟಿಯಷ್ಟು ಭಾರೀ ಅಕ್ರಮ ನಡೆದಿದೆ ಎನ್ನುವ ಆರೋಪಗಳು ಕೇಳಿಬಂದಿದ್ದವು. ಈ ವಿಚಾರವಾಗಿ ಮೈಸೂರು ಜಿಲ್ಲಾಧಿಕಾರಿ ಕೆ ವಿ ರಾಜೇಂದ್ರ ಅವರು ನಗರಾಭಿವೃದ್ಧಿ ಇಲಾಖೆಗೆ ಕಳೆದ ಒಂದು ವರ್ಷದಿಂದ 15 ಪತ್ರಗಳನ್ನು ಬರೆದಿದ್ದರು. 50- 50 ಅನುಪಾತವನ್ನು ರದ್ದು ಪಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದರು. ಜೊತೆಗೆ ತನಿಖಾ ಸಮಿತಿ ರಚಿಸಿ ಮುಡಾ ಆಯುಕ್ತರ ವಿಚಾರಣೆ ಮಾಡುವ ಅಗತ್ಯವಿದೆ ಎಂದು ಪತ್ರದಲ್ಲಿ ತಿಳಿಸಿದ್ದರು. ಆದರೆ ಸರ್ಕಾರ ಮಾತ್ರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಯಾವುದೇ ಒಂದು ಬಡಾವಣೆ ನಿರ್ಮಾಣ ಮಾಡುವಾಗ ನಗರಾಭಿವೃದ್ಧಿ ಪ್ರಾಧಿಕಾರಿಗಳು ರೈತರನ್ನು ಒಪ್ಪಿಸಿ ಭೂಸ್ವಾಧೀನ ಮಾಡಬೇಕಾಗುತ್ತದೆ. ಹೀಗೆ ಮಾಡುವ ಸಂದರ್ಭದಲ್ಲಿ ರೈತರಿಗೆ ಪರಿಹಾರ ರೂಪದಲ್ಲಿ ಭೂಮಿಯ ಮೌಲ್ಯದಷ್ಟೇ ಹಣವನ್ನು ಅಥವಾ ಲೇಔಟ್ ಮಾಡುವಾಗ ಶೇ 50ರಷ್ಟು ನಿವೇಶನಗಳನ್ನು ನೀಡಬೇಕೆಂಬ ಒಪ್ಪಂದವಾಗುತ್ತದೆ. ಇವೆರಡೂ ಅಲ್ಲದಿದ್ದರೆ ವಶಪಡಿಸಿಕೊಂಡ ಭೂಮಿಯ ಮೌಲ್ಯದಷ್ಟೇ ಭೂಮಿಯನ್ನು ಇನ್ನೊಂದು ಕಡೆ ಗುರುತು ಮಾಡಿ ನೀಡುವುದು ಪ್ರಾಧಿಕಾರದ ಹೊಣೆಗಾರಿಕೆಯಾಗಿರುತ್ತದೆ. ಆದರೆ ಮೈಸೂರಿನಲ್ಲಿ ನಿರ್ಮಿಸಲ್ಪಟ್ಟ ಬಡಾವಣೆಗಳಲ್ಲಿ ಆ ರೀತಿ ಯಾವುದೇ ಮಾನದಂಡವನ್ನು ಅನುಸರಿಸಲಾಗಿಲ್ಲ ಎಂಬುದು ಈಗ ಕೇಳಿ ಬಂದಿರುವ ಆರೋಪವಾಗಿದೆ. ಹಲವಾರು ಪ್ರಕಣದಲ್ಲಿ ಭೂ ಮಾಲೀಕರಿಗೆ ಪರಿಹಾರ ನೀಡಿಲ್ಲ. ಶೇಕಡಾ 50ರಷ್ಟು ನಿವೇಶನಗಳನ್ನೂ ನೀಡಿಲ್ಲ, ಬೇರೆಡೆ ಭೂಮಿಯನ್ನೂ ನಿಗದಿಪಡಿಸಿಲ್ಲ. ಅದಕ್ಕೆ ಬದಲಾಗಿ ಅರ್ಜಿಗಳಲ್ಲಿನ ಹಿರಿತನ ಪರಿಗಣಿಸದೆ ಅಕ್ರಮವಾಗಿ ಸೈಟ್ ಗಳನ್ನು ನೀಡಲಾಗಿದೆ ಎಂಬುದು ಕೇಳಿ ಬಂದಿರುವ ಆರೋಪವಾಗಿದೆ. ಬದಲಿ ನಿವೇಶನ ಮಂಜೂರಾತಿ, ತುಂಡು ಜಾಗ ಹಂಚಿಕೆ, ಭೂ ಪರಿಹಾರವಾಗಿ ಜಾಗಗಳನ್ನ ನೀಡಿರುವ ಬಗ್ಗೆ ವಿವರಣೆ ನೀಡದೆ ಹಲವಾರು ಲೋಪ ಎಸಗಲಾಗಿದೆ ಎಂದು ಜಿಲ್ಲಾದಿಕಾರಿ ರಾಜೇಂದ್ರ ಅವರು 2023 ಫೆಬ್ರವರಿ 8 ರಂದು ಸರ್ಕಾರಕ್ಕೆ ಮೊದಲ ಪತ್ರ ಬರೆದಿದ್ದರು.



## 'ಕಾಡಿಚ್ಚು' ನಿಯಂತ್ರಣಕ್ಕೆ ಮುನ್ನೆಚ್ಚರಿಕೆ ವಹಿಸಲು ಸೂಚನೆ

• ಉದಯವಾಹಿನಿ, ಬೆಂಗಳೂರು

ಬೇಸಿಗೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪದೇ ಪದೇ ಕಾಡಿಚ್ಚು ಕಾಣಿಸಿಕೊಳ್ಳುವ ವಲಯ ಸೇರಿದಂತೆ ರಾಜ್ಯದ ಯಾವುದೇ ಅರಣ್ಯದಲ್ಲಿ ಕಾಡಿಚ್ಚು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ. ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಮತ್ತು ಅರಣ್ಯಪಡೆ ಮುಖ್ಯಸ್ಥರಿಗೆ ನೀಡಿರುವ ಸೂಚನೆಯಲ್ಲಿ ಕಾಡಿಚ್ಚು ನಂದಿಸಲು ಅಗ್ನಿಶಾಮಕ ಸಾಧನಗಳು ಮತ್ತು ಸಿಬ್ಬಂದಿಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರುವಂತೆ ನಿರ್ದೇಶಿಸಲೂ ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ಚಾರ್ಮಾಡಿ ಘಾಟ್ ನಲ್ಲಿ ಇತ್ತೀಚೆಗೆ ಹಬ್ಬಿದ್ದ ಕಾಡ್ಗಿಚ್ಚಿನ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಚಾರ್ಮಾಡಿ ಘಾಟ್‌ನ ಬಿದಿರುತಳ ಅರಣ್ಯ ಪ್ರದೇಶದಲ್ಲಿ ಸಂಭವಿಸಿದ ಕಾಡಿಚ್ಚಿನಿಂದ ಅರಣ್ಯಕ್ಕೆ ಆಗಿರುವ ಹಾನಿಯ ಕುರಿತಂತೆಯೂ ಅರಣ್ಯ ಸಚಿವರು ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಕೇಳಿದ್ದಾರೆ.

## ಅಶ್ಲೀಲ ಪದ ಬಳಕೆ ಕೇಸ್: ಸಿಟಿ ರವಿಗೆ ಹೈಕೋರ್ಟ್ ರಿಲೀಫ್

• ಉದಯವಾಹಿನಿ, ಬೆಂಗಳೂರು

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ವಿಧಾನಪರಿಷತ್ ಕಲಾಪದಲ್ಲಿ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರು ಅವಾಚ್ಯ ಪದ ಬಳಕೆ ಆರೋಪ ಪ್ರಕರಣದ ಸಂಬಂಧ ಸಿಟಿ ರವಿ ವಿರುದ್ಧ ಜನವರಿ 30 ರವರೆಗೆ ಬಲವಂತದ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಸೂಚಿಸಿದೆ. ಶಾಸಕರ ನಡುವೆ ಸದನದಲ್ಲಿ ನಡೆದ ವಿಚಾರಕ್ಕೆ ವಿನಾಯಿತಿ ಇದೆ ಎಂದು ಸಿಟಿ ರವಿ ಪರವಾಗಿ ಹಿರಿಯ ವಕೀಲ ಸಿವಿ ನಾಗೇಶ್ ವಾದ ಮಂಡಿಸಿದರು. ಇದಕ್ಕೆ ಪ್ರತಿಯಾಗಿ ಕ್ರಿಮಿನಲ್ ಕೃತ್ಯಗಳಿಗೆ ವಿನಾಯಿತಿ ಇಲ್ಲವೆಂದು ಎಸ್ ಪಿಪಿ ಬಿಎ ಬೆಳ್ಳಿಯಪ್ಪ ವಾದ ಮಂಡಿಸಿದರು. ತನಿಖೆ ವ್ಯಾಪ್ತಿಯ ಪ್ರಶ್ನೆಯನ್ನು ನಾವು ತೀರ್ಮಾನಿಸಬೇಕಿದೆ ಎಂದ ಹೈಕೋರ್ಟ್, ಬಲವಂತದ ಕ್ರಮ ಕೈಗೊಳ್ಳದಂತೆ ಆದೇಶ ನೀಡಿದೆ. ಸಿಟಿ ರವಿ ವಾಯ್ಸ್ ಸ್ಯಾಂಪಲ್ ತೆಗೆದುಕೊಳ್ಳಬೇಕಿದೆ ಎಂದು ಎಸ್‌ಪಿಪಿ ವಾದ ಮಂಡಿಸಿದರು.

## ರಾಮನಗರದ ಶಾಸಕ ಇಕ್ಬಾಲ್ ಹುಸೇನ್‌ರಿಂದ ಜಮೀನು ಲೂಟಿ

• ಉದಯವಾಹಿನಿ, ಬೆಂಗಳೂರು

ರಾಮನಗರದ ಶಾಸಕ ಇಟ್ಬಾಲ್ ಹುಸೇನ್ನವರು ಯಡಮಾರನಹಳ್ಳಿ ಗ್ರಾಮದಲ್ಲಿ 67 ಎಕರೆ 66 ಗುಂಟೆ ಜಾಗವನ್ನು ಅಕ್ರಮವಾಗಿ ನೋಂದಣಿ ಮಾಡಿಕೊಂಡು ರೈತರ ಜಮೀನನ್ನು ಲೂಟಿ ಹೊಡೆದಿದ್ದಾರೆ ಎಂದು ಜೆಡಿಎಸ್ ಆರೋಪಿಸಿದೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ಶಾಸಕ ಇಕ್ಯಾಲ್ ಹುಸೇನ್ ಒಂದು ಇಡೀ ಗ್ರಾಮವನ್ನೇ ಖರೀದಿ ಮಾಡಿರುವ ಬಗ್ಗೆ ರೈತ ಹೋರಾಟಗಾರರು ಲೋಕಾಯುಕ್ತಗೆ ದೂರು ನೀಡಿದ್ದಾರೆ ಎಂದು ಹೇಳಿದೆ. ಯಡಮಾರನಹಳ್ಳಿ ಗ್ರಾಮದಲ್ಲಿ 50-60 ವರ್ಷಗಳಿಂದ ಅಲ್ಲಿ ವ್ಯವಸಾಯ ಮಾಡಿಕೊಂಡು ಬಂದಿರುವ ರೈತರು ಶಾಸಕನ ಕಿರುಕುಳಕ್ಕೆ ದಯಾ ಮರಣದ ಮೊರೆ ಹೋಗುತ್ತಿದ್ದಾರೆ ಎಂದು ತಿಳಿಸಿದೆ.

## ಎಲ್ಲಾ ಗೊಂದಲಗಳಿಗೆ ಸದ್ಯದಲ್ಲೇ ಉತ್ತರ ಸಿಗಲಿದೆ

• ಉದಯವಾಹಿನಿ, ಶಿವಮೊಗ್ಗ

ರಾಜ್ಯಾಧ್ಯಕ್ಷರ ವಿಚಾರವಾಗಿ ಐದಾರು ಪ್ರಮುಖ ನಾಯಕರು ನನ್ನ ವಿರುದ್ಧ ಹೇಳಿಕೆ ಕೊಡುತ್ತಿದ್ದಾರೆ. ಸಭೆಯಲ್ಲಿ 80 ರಿಂದ 90% ಬಹುತೇಕರು ರಾಜ್ಯಾಧ್ಯಕ್ಷ ಚೆನ್ನಾಗಿ ಕೆಲಸ ಮಾಡಿದ್ದಾರೆಂದು ಹೇಳಿದ್ದಾರೆ. ಮತ್ತೊಮ್ಮೆ ಬಿವೈ ವಿಜಯೇಂದ್ರ ಅವರನ್ನೇ ಮುಂದುವರಿಸಿ ಅಂದಿದ್ದಾರೆ. ಅಸಮಾಧಾನ ಇರುವುದು ಕೆಲವರಿಗೆ ಮಾತ್ರ. ಎಲ್ಲಾ ಗೊಂದಲಗಳಿಗೆ ಸದ್ಯದಲ್ಲೇ ಉತ್ತರ ಸಿಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲ ಬೆಳವಣಿಗೆಗಳು ನನಗೂ ಬೇಸರ ತರಿಸಿವೆ, ಈ ವಿಚಾರ ಸಂತೋಷ ತಂದಿಲ್ಲ, ಕಾರ್ಯಕರ್ತರಿಗೂ ಬೇಸರ ಇದೆ. ನನ್ನ ಅಧ್ಯಕ್ಷಗಿರಿಯ ಬಗ್ಗೆ ಕಾರ್ಯಕರ್ತರಿಗೂ ಸಮಾಧಾನವಿದೆ. ಬಣ ಬೆಳವಣಿಗೆಗಳ ಬಗ್ಗೆ ಕಾರ್ಯಕರ್ತರಿಗೆ ಅಸಮಾಧಾನವಿದೆ. ಎಲ್ಲಾ ವಿಚಾರಗಳು ಸರಿಯಾಗಬೇಕಿದೆ. ಇದರ ಬಗ್ಗೆ ಗಮನ ಹರಿಸಬೇಕಿದೆ. ಯಡಿಯೂರಪ್ಪನವರ ಬಗ್ಗೆ ಅಪಮಾನ ಆಗುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಇದರಿಂದ ಕಾರ್ಯಕರ್ತರು ಸಹ ನೊಂದಿದ್ದಾರೆ. ಈ ವಿಚಾರವಾಗಿ ನಾನು ಹೈ ಕಮಾಂಡ್ ಜೊತೆ ಮಾತಾಡಿದ್ದೇನೆ ಎಂದರು.

## ಮೈಕ್ರೋ ಫೈನಾನ್ಸ್‌ಗಳಿಂದ ಸಾರ್ವಜನಿಕರಿಗೆ ತೊಂದರೆ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲವು ದಿನಗಳಿಂದ ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕುರಿತು ದಿನನಿತ್ಯ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಅಲ್ಲದೇ ಮೈಕ್ರೋ ಫೈನಾನ್ಸ್ ನವರ ಕಾಟಕ್ಕೆ ಈಗಾಗಲೇ ಹಲವರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಯೂ ನಡೆದಿದೆ. ಈ ಹಿನ್ನಲೆಯಲ್ಲಿ ಇದಕ್ಕೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ಸರ್ಕಾರ, ಹೊಸ ಕಾನೂನಿನ ಮೂಲಕ ಮೀಟರ್ ಬಡ್ಡಿ ಮಾಫಿಯಾ, ಖಾಸಗಿ ಹಣಕಾಸು ಸಂಸ್ಥೆಗಳ ದಂಧೆಗೆ ಕಡಿವಾಣ ಹಾಕಲು ನಿರ್ಧರಿಸಿತ್ತು. ನಿಗದಿತ ಬಡ್ಡಿ ದರಕ್ಕಿಂತ ಹೆಚ್ಚಿನ ಬಡ್ಡಿ ವಿಧಿಸುವಂತಿಲ್ಲ. ಸಾಲ ವಸೂಲಿಗೆ ಕಿರುಕುಳ ನೀಡಿದಲ್ಲಿ ಕನಿಷ್ಠ 10 ವರ್ಷ ಜೈಲು, ಲಕ್ಷಾಂತರ ರೂ. ದಂಡ ವಿಧಿಸುವ ಬಗ್ಗೆ ಕಾನೂನು ತರಲು ಸರ್ಕಾರ ಚಿಂತನೆ ನಡೆಸಿತ್ತು. ಇದರ ಮಧ್ಯೆ ಜನವರಿ 25 ರ ಶನಿವಾರದಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೆಳಿಗ್ಗೆ 11 ಗಂಟೆಗೆ ತಮ್ಮ ಗೃಹ ಕಛೇರಿ 'ಕೃಷ್ಣಾ' ದಲ್ಲಿ ಮಹತ್ವದ ಸಭೆ ಕರೆದಿದ್ದು, ಈ ಸಭೆಯಲ್ಲಿ ರಾಜ್ಯದಲ್ಲಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಕುರಿತು ಚರ್ಚಿಸಲಾಗುತ್ತದೆ. ಈ ಸಂದರ್ಭದಲ್ಲಿ ಇದರ ಕಡಿವಾಣಕ್ಕೆ ಮಹತ್ವದ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದೆ.

## ಸ್ಥಳೀಯರು ಶಾಮೀಲು ಶಂಕೆ, ರಾಜಕೀಯ ಬೆಂಬಲವೂ ಇದೆ

• ಉದಯವಾಹಿನಿ, ಮಂಗಳೂರು

ಮಂಗಳೂರಿನ ಕೋಟೆಕಾರು ಬ್ಯಾಂಕ್ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯರೇ ಶಾಮಿಲಾಗಿದ್ದಾರೆ ಎಂದು ಬಿಜೆಪಿ ಶಾಸಕ ಭರತ್ ಶೆಟ್ಟಿ ಗಂಭೀರ ಆರೋಪ ಮಾಡಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಶಾಸಕ ಭರತ್ ಶೆಟ್ಟಿ, ಕೋಟೆಕಾರು ಬ್ಯಾಂಕ್ ದರೋಡೆಯಲ್ಲಿ



ಸ್ಥಳೀಯರೇ ಶಾಮೀಲಾಗಿದ್ದು, ಅವರಿಗೆ ರಜಕೀಯ ಬೆಂಬಲವೂ ಇದೆ ಎಂದು ಆರೋಪಿಸಿದ್ದಾರೆ. ಪೊಲೀಸರು ದರೋಡೆಕೋರರನ್ನು ಬಂಧಿಸಿದ್ದಾರೆ. ಆದರೆ ಪ್ಲಾನಿಂಗ್ ಮಾಡಿದವರನ್ನು ಕುಮ್ಮಕ್ಕು ನೀಡಿದವರನ್ನು ಬಂಧಿಸದೇ ಬಚಾವ್ ಮಾಡಲಾಗುತ್ತಿದೆ. ಸ್ಥಳೀಯರನ್ನು ಯಾರೋ ಬಚಾವ್ ಮಾಡುತ್ತಿದ್ದಾರೆ. ಬೇರೆ ಪ್ರಕರಣಗಳಲ್ಲಿ ಶಾಮೀಲಾದವರೂ ದರೋಡೆ ಪ್ರಕರಣದಲ್ಲಿ ಇದ್ದಾರೆ ಎಂದು ಹೇಳಿದ್ದಾರೆ.

## ಬಿಜೆಪಿಯಲ್ಲಿ ಭಿನ್ನಮತವಿಲ್ಲ, ಅಣ್ಣ ತಮ್ಮಂದಿರ ಜಗಳ ಬಗೆ ಹರಿಸುವ ವಿಶ್ವಾಸ ಇದೆ

- ರೆಡ್ಡಿ ಹಾಗೂ ಶ್ರೀರಾಮುಲು ನಡುವಿನ ಭಿನ್ನಾಭಿಪ್ರಾಯ ಸಾಮಾನ್ಯ
- ಕುಚಿಕು ಅಂದ್ರೆ, ಅತ್ಯಂತ ಆತ್ಮೀಯ ಭಿನ್ನ ಭೇದಗಳು ಬರುತ್ತವೆ


• ಉದಯವಾಹಿನಿ, ಗದಗ

ಬಿಜೆಪಿಯಲ್ಲಿ ಯಾವುದೇ ಭಿನ್ನಮತವಿಲ್ಲ. ಇಲ್ಲಿ ಪ್ರಜಾಪ್ರಭುತ್ವ ಇದೆ ಇದು ಅಣ್ಣ-ತಮ್ಮರ ಜಗಳ ಹಿರಿಯರು ಕುಳಿತುಕೊಂಡು ಬಗೆ ಹರಿಸುವ ವಿಶ್ವಾಸ ಇದೆ. ಬಗೆ ಹರಿಸುವ ಎಲ್ಲಾ ಪ್ರಯತ್ನಗಳು ಆಗುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಜಿಲ್ಲೆಯ ಲಕ್ಷ್ಮೀಶ್ವರ ಪಟ್ಟಣದ ಮಾಜಿ ಶಾಸಕ ಜಿ ಎಂ ಮಹಾಂತಶೆಟ್ಟರ ನಿವಾಸದಲ್ಲಿ ಮಾಧ್ಯಮದವರ ರಾಮುಲು ಹಾಗೂ ಜನಾರ್ದನರೆಡ್ಡಿ ವಿಚಾರವಾಗಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯಲ್ಲಿ ಯಾವುದೇ ಭಿನ್ನಮತವಿಲ್ಲ ಇಲ್ಲಿ ಪ್ರಜಾಪ್ರಭುತ್ವ ಇದೆ ಇದು ಅಣ್ಣ- ತಮ್ಮರ ಜಗಳ ಹಿರಿಯರು ಕುಳಿತುಕೊಂಡು ಬಗೆ ಹರಿಸುವ ವಿಶ್ವಾಸ ಇದೆ.

**ಹಿರಿಯರು ಕುಳಿತುಕೊಂಡು ಬಗೆ ಹರಿಸುವ ವಿಶ್ವಾಸ**

ಬಗೆ ಹರಿಸುವ ಎಲ್ಲಾ ಪ್ರಯತ್ನಗಳು ಆಗುತ್ತಿವೆ ಎಂದು ಹೇಳಿದರು. ರಾಜ್ಯ ಬಿಜೆಪಿ ಮೇಲೆ ಹೈಕಮಾಂಡ್ ನಿಯಂತ್ರಣ ಕಳೆದುಕೊಂಡಿದಿಯಾ ಎಂಬ ಪ್ರಶ್ನೆಗೆ ಹೈಕಮಾಂಡ್ ಯಾವಾಗಲೂ ಹೈಕಮಾಂಡ್. ಅವರು ಏನು ಹೇಳುತ್ತಾರೆ ಅದೇ ಅಂತಿಮ ಎಂದರು.

ಶಾಸಕ ಜನಾರ್ದನ್ ರೆಡ್ಡಿ ಹಾಗೂ ಮಾಜಿ ಸಚಿವ ಶ್ರೀರಾಮುಲು ನಡುವಿನ ಭಿನ್ನಾಭಿಪ್ರಾಯದ ಬಗ್ಗೆ ಪ್ರಶ್ನೆಗೆ ಕುಚಿಕು ಅಂದ್ರೆ, ಅತ್ಯಂತ ಆತ್ಮೀಯ ಭಿನ್ನ ಭೇದಗಳು ಬರುತ್ತವೆ. ಅಂತಿಮವಾಗಿ ಅವರ ಗೆಳೆತನ ಗೆಲ್ಲುತ್ತದೆ. ಗೆಳೆಯರು, ಆತ್ಮೀಯ ಗೆಳೆಯರ ಮಧ್ಯೆನೇ ಕೆಲವು ವೇಳೆ ಹೆಚ್ಚುಕಡಿಮೆ ಇಬ್ಬರು ಒಂದಾಗುತ್ತಾರೆ. ಇಬ್ಬರು ಒಂದಾಗಿ ಬರುವ ದಿನಗಳಲ್ಲಿ ಒಗ್ಗಟ್ಟಿನಿಂದ ಬಿಜೆಪಿ ಕಟ್ಟುವ ಕೆಲಸ ಮಾಡುತ್ತಾರೆ ಎಂದರು. ಶ್ರೀರಾಮುಲು, ಜನಾರ್ದನ್ ರೆಡ್ಡಿ ಪ್ರತ್ಯೇಕ ಸುದ್ದಿಗೋಷ್ಠಿ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ ಸುದ್ದಿ ಗೋಷ್ಠಿ ಪ್ರಕ್ರಿಯೆ ಆದ ಮೇಲೆನೆ ಒಂದಾಗುವುದು. ಶ್ರೀರಾಮುಲು ಬಳಿ ನಾನು ಮಾತನಾಡಿದ್ದನೆ. ನಂತರ ಜನಾರ್ದನ್ ರೆಡ್ಡಿ ಬಳಿಯೂ ಮಾತನಾಡುತ್ತೇನೆ. ಎಲ್ಲವೂ ಸರಿಯಾಗುತ್ತದೆ.



### ನಮ್ಮ ಬಿಜೆಪಿ ಮನೆ ಬಾಗಿಲು ಒಂದೇ ಇದೆ

ಹಿಂದೆ ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ಹೆಚ್ಚು ಬಡ್ಡಿ ವಸೂಲಿ ಮಾಡುವವರ ನಿಯಂತ್ರಣಕ್ಕೆ ಕಾನೂನು ತಂದಿದ್ದರು. ಅದು ಕೋರ್ಟ್ ನಲ್ಲಿ ಸ್ಟೇ ಆಗಿದೆ. ಈ ಸರ್ಕಾರ ಕೂಡಲೇ ಅದನ್ನು ತೆರವುಗೊಳಿಸಿ ಕಠಿಣ ಕ್ರಮ ಕೈಗೊಳ್ಳುವ ಅಧಿಕಾರ ಪಡೆದು, ಮೈಕ್ರೋ ಫೈನಾನ್ಸ್ ಗಳನ್ನು ನಿಯಂತ್ರಿಸಬೇಕು ಎಂದು ಆಗ್ರಹಿಸಿದರು. ರಾಜ್ಯ ರಾಜಕಾರಣದ ಬಗ್ಗೆ ಬಹಿರಂಗವಾಗಿ ಚರ್ಚೆ ಮಾಡುವುದಿಲ್ಲ. ನಮ್ಮ ಬಿಜೆಪಿ ಮನೆ ಬಾಗಿಲು ಒಂದೇ ಇದೆ. ಬಿಜೆಪಿ ಒಂದೆ ಮನೆ, ಬಾಗಿಲು ಒಂದೆ ಇದೆ. ಈ ಬಗ್ಗೆ ಯಾರೂ ವಿಚಾರ ಮಾಡುವ ಅವಶ್ಯಕತೆ ಇಲ್ಲ. ಎಲ್ಲಾರೂ ಒಗ್ಗಟ್ಟಿನಿಂದ ಮುಂದೆ ಹೋಗುವ ಸಂಕಲ್ಪ ಮಾಡಿದ್ದವೆ. ಅದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದವೆ ಎಂದು ಹೇಳಿದರು

ರಾಜ್ಯದಲ್ಲಿ ಹೆಣ್ಣು ಮಕ್ಕಳ ತಾಳಿ ಕಿತ್ತುಕೊಳ್ಳುತ್ತಿರುವ ಮೈಕ್ರೋ ಫೈನಾನ್ಸ್ ಮೇಲೆ ಸರ್ಕಾರದ ನಿಯಂತ್ರಣ ತಪ್ಪಿದೆ. ಬಹಳಷ್ಟು ಜನರು, ಕುಟುಂಬಗಳು ಮನೆ ಬಿಟ್ಟು ಹೋಗಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಕಾನೂನು ಇದ್ದರೂ ಕೂಡ ಸರ್ಕಾರ ಕಾನೂನಿನ ಪ್ರಯೋಗ ಮಾಡುತ್ತಿಲ್ಲ. ಯಾರಿಗೂ ಭಯ ಇಲ್ಲ. ವಸೂಲಿಗೆ ರೌಡಿಗಳನ್ನು ಬಿಟ್ಟಿದ್ದಾರೆ. ಸರ್ಕಾರ ಒಂದು ಕಡೆ ಮಹಿಳೆಯರಿಗೆ ಕಾರ್ಯಕ್ರಮ ಮಾಡುತ್ತೇನೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಮಹಿಳೆಯರ ತಾಳಿ ಕಿತ್ತುಕೊಳ್ಳುತ್ತಿರುವಂತಹ ಮೈಕ್ರೋ ಫೈನಾನ್ಸ್ ನಿಯಂತ್ರಣ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಗುಡುಗಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹8,209 /Gram24ct ₹7,525/Gram22ct ಬೆಳ್ಳಿ: ₹96.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ಏತದ್ದೇಶಪ್ರಸೂತಸ್ಯ

ಸಕಾಶಾದಗ್ರಜನ್ಮನಃ
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ.

ಮನುಸ್ಮೃತಿಯ ಎರಡನೇ ಅಧ್ಯಾಯದ ಇಪ್ಪತ್ತನೆಯ ಶ್ಲೋಕ. ಸರಸ್ವತೀ ದೃಷದ್ವತೀ ನದಿಗಳ ನಡುವಿನ ದೇಶ ಬ್ರಹ್ಮಾವರ್ತ. ಕುರುಕ್ಷೇತ್ರ ಮತ್ಸ್ಯ ಪಂಚಾಲ (ಕಾನ್ಯಕುಬ್ಜ) ಶೂರಸೇನಕ (ಮಥುರಾ) ಇವು ಆಗಿನ ದೇಶವಿಶೇಷಗಳು. ಈ ಪೃಥ್ವಿಯಲ್ಲಿನ ಎಲ್ಲ ಮಾನವರು, ಈ ದೇಶಗಳಲ್ಲಿ ಮೊದಲು ಹುಟ್ಟಿದವನಿಂದ = ಬ್ರಾಹ್ಮಣನಿಂದ ತಮ್ಮ ತಮ್ಮ ಆಚಾರಗಳನ್ನು ಕಲಿತುಕೊಳ್ಳಲೇಬೇಕು. ಇದು ವಿಧಿ = ಆದೇಶ, ವಿನಂತಿಯಲ್ಲ. ಅಗ್ರಜನ್ಮ ಮೊದಲ ಹುಟ್ಟು ಹಿರಿಯ ವಯೋವೃದ್ಧ ಜ್ಞಾನವೃದ್ಧ ತಪೋವೃದ್ಧ, ಯಾವ ಜಾತಿಯಾದರೇನು ಎಂದಾದರೆ ಸೂಕ್ತ. ಆತ ಬ್ರಾಹ್ಮಣ ಜಾತಿಯವನೇ ಆಗಿರಬೇಕೆಂಬುದು ಸರಿಯಲ್ಲ. ಬ್ರಹ್ಮ ಪರಮಾತ್ಮ ತಿಳಿದವನು ಮಾತ್ರ ಬ್ರಾಹ್ಮಣ ಎನ್ನುವುದು ಬೇರೆ. ಅದಿರಲಿ, ಹಿರಿಯರು ಪಾಲಕರು ಕಿರಿಯರಿಗೆ ಮಕ್ಕಳಿಗೆ ತಮ್ಮ ತಮ್ಮ ಆದರ್ಶ ಸಂಸ್ಕಾರ ಸದಾಚಾರಗಳನ್ನು ಕಲಿಸಲೇಬೇಕು, ಅವರು ಕಲಿಯಲೇಬೇಕು. ಅದಾಗದಿದ್ದರ ಪರಿಣಾಮವನ್ನು ಸಮಾಜದಲ್ಲಿ ದುಷ್ಕೃತ್ಯ ದುರಂತರೂಪದಲ್ಲಿ ಕಾಣುತ್ತಿದ್ದೇವೆ.

## ನಾಪತ್ತೆಯಾಗಿದ್ದ ಇಬ್ಬರು ಮಕ್ಕಳು ಮಲ್ಲೈಮಹದೇಶ್ವರ ಬೆಟ್ಟದಲ್ಲಿ ಪತ್ತೆ

• ಉದಯವಾಹಿನಿ ಬೆಂಗಳೂರು

ಹಾಸನದ ಸಕಲೇಶಪುರದಿಂದ ನಾಪತ್ತೆಯಾಗಿದ್ದ ಮೂವರು. ವಿದ್ಯಾರ್ಥಿಗಳು ಮೈಸೂರಿನಲ್ಲಿ ಪತ್ತೆಯಾಗಿರುವ ಘಟನೆ ಬೆನ್ನಲ್ಲೇ ಬೆಂಗಳೂರಿನಲ್ಲಿ ನಾಪತ್ತೆಯಾಗಿದ್ದ ಇಬ್ಬರು ವಿದ್ಯಾರ್ಥಿಗಳು ಮಲ್ಲೈಮಹದೇಶ್ವರ ಬೆಟ್ಟದಲ್ಲಿ ನಡೆದಿದೆ. ಜನವರಿ 18ರಂದು ಬೆಂಗಳೂರಿನ ಜಯನಗರದ ಮೂರನೇ ಹಂತದ ಮನೆ ಬಳಿ ಆಟವಾಡುತ್ತಿದ್ದ ಪ್ರವೀಣ್ ಹಾಗೂ ರವಿ ಎಂಬ ಇಬ್ಬರು ಮಕ್ಕಳ ಇದ್ದಕ್ಕಿದ್ದಂತೆ ಕಾಣೆಯಾಗಿದ್ದರು. ಇದೀಗ ಇಬ್ಬರು ಮಕ್ಕಳು ಚಾಮರಾಜನಗರದ ಹನೂರು ತಾಲ್ಲೂಕಿನ ಮಲ್ಲೈಮಹದೇಶ್ವರ ಬೆಟ್ಟದಲ್ಲಿ ಪತ್ತೆಯಾಗಿದ್ದಾರೆ. ಜಯನಗರದ ನಿವಾಸಿಗಳಾದ ವಿದ್ಯಾಶ್ರೀ ಹಾಗೂ ಮಹೇಶ್ ದಂಪತಿಯ ಪುತ್ರ ಪ್ರವೀಣ್, ಜಯನಗರದ ಎಂಇ ಎಸ್ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದ. ಬಾಲಕ ರವಿ 9ನೇ ತರಗತಿ ಓದುತ್ತಿದ್ದ. ಮಕ್ಕಳ ನಾಪತ್ತೆ ಬಗ್ಗೆ, ಪೋಷಕರು ತಿಲಕನಗರ ಠಾಣೆಯಲ್ಲಿ ದೂರು ನೀಡಿದ್ದರು. ಜಯನಗರದಿಂದ ನಾಪತ್ತೆಯಾಗಿದ್ದ ಮಕ್ಕಳಿಬ್ಬರೂ ಮಲ್ಲೈಮಹದೇಶ್ವರ ಬೆಟ್ಟದಲ್ಲಿ ಪತ್ತೆಯಾಗಿದ್ದಾರೆ.

## ಕಾಂತಾರ-2 ಚಿತ್ರತಂಡಕ್ಕೆ ಬಿಗ್ ರಿಲೀಫ್

• ಉದಯವಾಹಿನಿ ಬೆಂಗಳೂರು

ರಿಷಬ್ ಶೆಟ್ಟಿ ಅಭಿನಯದ ಕಾಂತಾರ-2 ಚಿತ್ರತಂಡಕ್ಕೆ ಅರಣ್ಯ ಇಲಾಖೆ ಬಿಗ್ ರಿಲೀಫ್ ನೀಡಿದೆ. ಕಾಂತಾರ-2 ಚಿತ್ರತಂಡ ಯಾವುದೇ ಅರಣ್ಯ ನಿಯಮ ಉಲ್ಲಂಘನೆ ಮಾಡಿಲ್ಲ ಎಂದು ವರದಿ ನೀಡಿದೆ. ಹಾಸನ ಜಿಲ್ಲೆಯ ಸಕಲೇಶಪುರ ಬಳಿ ಅರಣ್ಯ ಪ್ರದೇಶದಲ್ಲಿ ಕಾಂತಾರ-2 ಸಿನಿಮಾ ಚಿತ್ರೀಕರಣ ಮಡಲಾಗುತ್ತಿದ್ದು, ಇದರಿಂದ ಅರಣ್ಯ ಪ್ರದೇಶಕ್ಕೆ ಹಾನಿಯಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಸಚಿವ ಈಶ್ವರ ಖಂಡ್ರೆ, ಪರಿಶೀಲನೆ ನಡೆಸಿ ವರದಿ ನೀಡುವಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಸಕಲೇಶಪುರ ಎಸಿಎಫ್ ಹಾಗೂ ಯಸಳೂರು ಆರ್ ಎಫ್ ಒ ಸ್ಥಳ ಪರಿಶೀಲನೆ ನಡೆಸಿದ್ದು ಚಿತ್ರೀಕರಣದ ವೇಳೆ ಯಾವುದೇ ನಿಯಮ ಉಲ್ಲಂಘನೆ ಮಾಡಿಲ್ಲ. ಯಾವುದೇ ಸ್ಫೋಟ ನಡೆಸಿಲ್ಲ. ಡೀಮ್ ಅರಣ್ಯ ವಲಯದಲ್ಲಿ ಮರಗಳನ್ನು ಕಡಿದಿಲ್ಲ. ಚಿತ್ರತಂಡ ಅರಣ್ಯ ನಿಯಮಗಳನ್ನು ಪಾಲಿಸಿ ಚಿತ್ರೀಕರಣ ಮಾಡಿದೆ ಎಂದು ವರದಿ ನೀಡಿದ್ದಾರೆ.

## ಕ್ಷುಲ್ಲಕ ಕಾರಣಕ್ಕೆ ಗಲಾಟೆ: ವ್ಯಕ್ತಿ ಸಾವು, ಇಬ್ಬರು ಅರೆಸ್ಟ್!

• ಉದಯವಾಹಿನಿ ಆನೇಕಲ್

ಕ್ಷುಲ್ಲಕ ಕಾರಣಕ್ಕೆ ನಡೆದ ಗಲಾಟೆಯಲ್ಲಿ ವ್ಯಕ್ತಿಯೋರ್ವ ಸಾವನ್ನಪ್ಪಿದ ಘಟನೆ ಬೆಂಗಳೂರು ಹೊರವಲಯ ಆನೇಕಲ್ ತಾಲ್ಲೂಕಿನ ಆನೇಕಲ್ನ ದೊಡ್ಡಹಾಗಡೆ ಗ್ರಾಮದಲ್ಲಿ ಜರುಗಿದೆ. ದೃಷ್ಟಿ ತೆಗೆದ ನೀರನ್ನ ರಸ್ತೆಗೆ ಹಾಕಲು ಬಂದಾಗ ವ್ಯಕ್ತಿ ಹಾಗೂ ಅಕ್ಕಪಕ್ಕದ ನಿವಾಸಿಗಳ ಮಧ್ಯೆ ಗಲಾಟೆ ಶುರುವಾಗಿದೆ. ರಾಮಚಂದ್ರಪ್ಪ(45) ಮೃತ ವ್ಯಕ್ತಿ. ರಾಮಚಂದ್ರಪ್ಪ ಸ್ವಂತ ಟ್ರ್ಯಾಕ್ಟರ್ ಇಟ್ಟುಕೊಂಡಿದ್ದರು. ಪಕ್ಕದ ಮನೆಯ ನಿವಾಸಿಗಳ ಜೊತೆ ಶುರುವಾದ ಗಲಾಟೆಯಲ್ಲಿ ಈ ಅವಘಡ ಸಂಭವಿಸಿದೆ. ದೃಷ್ಟಿ ತೆಗೆದ ನೀರನ್ನು ಸಂಜೆ ರಸ್ತೆಯಲ್ಲಿ ಹಾಕಲು ಮಹಿಳೆ ಬಂದಿದ್ದರು. ಈ ವೇಳೆ ರಾಮಚಂದ್ರಪ್ಪ ಮತ್ತು ಪಕ್ಕದ ಮನೆ ನಿವಾಸಿಗಳ ಮಧ್ಯೆ ಗಲಾಟೆ ನಡೆದಿದೆ. ಮಹಿಳೆಯರು ಗುಂಪು ಕಟ್ಟಿಕೊಂಡು ರಾಮಚಂದ್ರಪ್ಪ ಮೇಲೆ ಹಲ್ಲೆ ನಡೆದಿದೆ. ಈ ವೇಳೆ ಹಲ್ಲೆಯಿಂದ ರಾಮಚಂದ್ರಪ್ಪ ನೆಲಕ್ಕೆ ಉರುಳಿ ಬಿದ್ದಿದ್ದ. ಕೂಡಲೇ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ರಾಮಚಂದ್ರಪ್ಪ ಸಾವನ್ನಪ್ಪಿದ್ದಾನೆ. ಹಲ್ಲೆ ನಡೆಸಿದ ಇಬ್ಬರು ಮಹಿಳೆಯರು ಪೊಲೀಸರ ವಶಕ್ಕೆ ಪಡೆಯಲಾಗಿದ್ದು, ಆನೇಕಲ್ ಉಪವಿಭಾಗದ ಡಿವೈಎಸ್ಪಿ ಮೋಹನ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಆನೇಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

## 2.5 ಲಕ್ಷ ಅಕ್ರಮ ಪಂಪ್ ಸೆಟ್‌ಗಳು ಸಕ್ರಮ ಎಂದು ಘೋಷಿಸಿದ ಸರ್ಕಾರ!

• ಉದಯವಾಹಿನಿ ಬೆಂಗಳೂರು

ರಾಜ್ಯ ಇಂಧನ ಇಲಾಖೆಯು, ರೈತರಿಗೆ ಸಿಹಿ ಸುದ್ದಿ ಕೊಟ್ಟಿದೆ. 2.5 ಲಕ್ಷ ಅಕ್ರಮ ಪಂಪ್ ಸೆಟ್‌ಗಳು ಸಕ್ರಮ ಎಂದು ಘೋಷಿಸಿದೆ. ಇಂಧನ ಇಲಾಖೆಯಿಂದ 2.5 ಲಕ್ಷ ಅಕ್ರಮ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದ್ದು, ಬಾಕಿ ಇರುವ 2 ಲಕ್ಷ ಪಂಪ್ ಸೆಟ್ಗಳು ಇನ್ನೊಂದು ವರ್ಷದಲ್ಲಿ ಸಕ್ರಮಗೊಳ್ಳಲಿದೆ. ಅಕ್ರಮ ಪಂಪ್ ಸೆಟ್‌ಗಳ ಸಕ್ರಮ ಯೋಜನೆ 2004ರಿಂದಲೇ ಜಾರಿಯಲ್ಲಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಈ ಯೋಜನೆಯಡಿ 4.5 ಲಕ್ಷ ಅರ್ಜಿ ಬಾಕಿ ಇದ್ದವು. ಪ್ರಸ್ತುತ 2.5 ಲಕ್ಷ ಪಂಪ್ ಸೆಟ್ಗಳನ್ನು ಸಕ್ರಮಗೊಳಿಸಲಾಗಿದೆ. ಬಾಕಿ ಉಳಿದ ಅರ್ಜಿಗಳನ್ನು ಇತ್ಯರ್ಥಗೊಳಿಸಿದ ಬಳಿಕ ಹೊಸದಾಗಿ ಬಂದ ಅರ್ಜಿಗಳ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಜಾರ್ಜ್ ಹೇಳಿಕೆ ಕೊಟ್ಟಿದ್ದಾರೆ

## ಜಿಲ್ಲಾ ಅಂಕಿತಾಧಿಕಾರಿಗಳ ಹುದ್ದೆಯಿಂದ 19 ವೈದ್ಯರು ಬಿಡುಗಡೆ

• ಉದಯವಾಹಿನಿ ಬೆಂಗಳೂರು

ಆಹಾರ ಸುರಕ್ಷತೆ, ಗುಣಮಟ್ಟ ಇಲಾಖೆಯ ಜಿಲ್ಲಾ ಅಂಕಿತಾಧಿಕಾರಿಗಳ ಹುದ್ದೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ 19 ವೈದ್ಯರು, ವೈದ್ಯಾಧಿಕಾರಿಗಳನ್ನು ಮಾತೃ ಇಲಾಖೆಗೆ ತೆರಳುವಂತೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಗುರುವಾರ ಆದೇಶಿಸಿದೆ. ನಿಯೋಜನೆ ಅವಧಿ ಮುಕ್ತಾಯವಾದರೂ ಅದೇ ಹುದ್ದೆಯಲ್ಲಿ ಮುಂದುವರಿದಿರುವ ಹಿನ್ನೆಲೆಯಲ್ಲಿ ಕೂಡಲೆ ಜಾರಿಗೆ ಬರುವಂತೆ ನಿಯೋಜನೆ ಅವಧಿಯನ್ನು ರದ್ದುಪಡಿಸಿ ಮಾತೃ ಇಲಾಖೆಗೆ ವೈದ್ಯರನ್ನು ಹಿಂದಿರುಗಿಸಲಾಗಿದೆ. ಗುರುವಾರ ಪೂರ್ವಾಹ್ನ ಸ್ವಯಂ ಬಿಡುಗಡೆಗೊಂಡು ಮುಂದಿನ ಸ್ಥಳ ನಿಯುಕ್ತಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಆಯುಕ್ತರ ಕಚೇರಿಯಲ್ಲಿ ವರದಿ ಮಾಡಿಕೊಳ್ಳಬೇಕು. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಗೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ಅಂಕಿತಾಧಿಕಾರಿಗಳು ನಿರ್ವಹಿಸಬಾರದು.

# ಡಿಕೆಶಿಯಿಂದ ಶ್ರೀರಾಮುಲು ಅವರನ್ನು ಸೆಳೆಯಲು ಯತ್ನ: ರೆಡ್ಡಿ

### ರಾಮುಲುಗೆ ಬಳ್ಳಾರಿಯಲ್ಲಿ ಇರುವ ವಾತಾವರಣ ನೋಡಿಕೊಂಡು ಡಿಕೆಶಿ ಅವರನ್ನು ತಮ್ಮ ಪಕ್ಷಕ್ಕೆ ಕರೆದುಕೊಳ್ಳುವ ಪ್ರಯತ್ನ

• ಉದಯವಾಹಿನಿ ಬೆಂಗಳೂರು


ಶ್ರೀರಾಮುಲು ಯಾವತ್ತೂ ನನ್ನ ಸ್ನೇಹಿತರಾಗಿರುತ್ತಾರೆ. ಯಾವತ್ತೂ ಶತ್ರು ಅಂತ ನಾನು ಅವನನ್ನು ನೋಡಲ್ಲ. ಸಾಯೋವರೆಗೂ ರಾಮುಲು ನನ್ನ ಗೆಳೆಯ. ಆದರೆ ಕಾಂಗ್ರೆಸ್ ಪಕ್ಷ ಬಿಡೋದು ರಾಮುಲು ವೈಯಕ್ತಿಕ ವಿಚಾರವಾಗಿದೆ. ಅವರು ಪಕ್ಷ ಬಿಟ್ಟು ಹೋದರೆ ಹೋಗಲಿ. ಆದ್ರೆ ನನ್ನ ಮೇಲೆ ಆರೋಪ ಮಾಡಿ ಹೋಗೋದು ಸರಿಯಲ್ಲ. ಅವರು ಬಿಜೆಪಿಯಲ್ಲಿ ಇರಬೇಕಾ ಇಲ್ವಾ ಅಂತ ಅವರಿಗೆ ಬಿಟ್ಟ ವಿಚಾರ. ಅವರ ಮನಸ್ಸಿಗೆ ತೋಚಿದಂತೆ ಮಾಡಲಿ ಎಂದು ಗಾಲಿ ಜನಾರ್ದನ ರೆಡ್ಡಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮುಲುಗೆ ಬಳ್ಳಾರಿಯಲ್ಲಿ ಇರುವ ವಾತಾವರಣ ನೋಡಿಕೊಂಡು ಡಿಕೆಶಿ ಅವರನ್ನು ತಮ್ಮ ಪಕ್ಷಕ್ಕೆ ಕರೆದುಕೊಳ್ಳುವ ಪ್ರಯತ್ನ ಮಾಡ್ತಿದ್ದಾರೆ. ಹೀಗಂತ ಬಳ್ಳಾರಿ ಭಾಗದಲ್ಲೆಲ್ಲ ಜನ ಮಾತಾಡ್ತಿದ್ದಾರೆ. ಇಡೀ ಬಳ್ಳಾರಿಯಲ್ಲಿ ಇದರ ಬಗ್ಗೆ ದೊಡ್ಡ ಸುದ್ದಿ ಹಬ್ಬಿದೆ ಎಂದು ವಿವರಿಸಿದರು. ಅವರು ನಿಜಕ್ಕೂ ಪಕ್ಷ ಬಿಟ್ಟರೆ ಬಿಡಲಿ. ಆದರೆ, ನನ್ನ ಮೇಲೆ ಆರೋಪ ಮಾಡಿ ಬಿಡೋದು ಬೇಡ. ಕಾಂಗ್ರೆಸ್ ಗಾದ್ರೂ ಹೋಗಲಿ, ಎಲ್ಲಿಗಾದರೂ ಹೋಗಲಿ, ಅದು ಅವರಿಗೆ ಬಿಟ್ಟಿದ್ದು ಎಂದು ತಿರುಗೇಟು ನೀಡಿದರು. ವಿಜಯೇಂದ್ರ ರನ್ನು ರಾಜ್ಯ ದ ಅಧ್ಯಕ್ಷರನ್ನಾಗಿ ಮಾಡಿದ್ದು ಪಕ್ಷ, ನಾವೆಲ್ಲ ಅದಕ್ಕೆ ಬದ್ಧ ಇರ್ಬೇಕು. ಅಡ್ವಾಣಿಯವರು ಇದ್ದಾಗಲೇ ಮೋದಿಯವರನ್ನು ದೇಶದ ಪ್ರಧಾನಿಯಾಗಿ ಘೋಷಿಸಲಾಯ್ತು. ಆಗ ಎಲ್ರೂ ಮೋದಿಯವರನ್ನು ಬೆಂಬಲಿಸಿದರು. ಈಗ ವಿಜಯೇಂದ್ರ ರನ್ನ ಅಧ್ಯಕ್ಷ ಮಾಡಿದ ಮೇಲೆ ನಾವೆಲ್ಲ ಒಪ್ಕೊಂಡು ಕೆಲಸ ಮಾಡಬೇಕು. ನಾಲ್ಕಾರು ಜನ ಅನಗತ್ಯವಾಗಿ ಮಾತಾಡ್ತಾರೆ ಎಂದು ಕಿಡಿಕಾರಿದರು.

> ಶ್ರೀರಾಮುಲು ಯಾವತ್ತೂ ನನ್ನ ಸ್ನೇಹಿತರಾಗಿರುತ್ತಾರೆ. ಯಾವತ್ತೂ ಶತ್ರು ಅಂತ ನಾನು ಅವನನ್ನು ನೋಡಲ್ಲ ಎಂದ ಜನಾರ್ದನ ರೆಡ್ಡಿ ಸಾಯೋವರೆಗೂ ರಾಮುಲು ನನ್ನ ಗೆಳೆಯ. ಆದರೆ ಕಾಂಗ್ರೆಸ್ ಪಕ್ಷ ಬಿಡೋದು ರಾಮುಲು ವೈಯಕ್ತಿಕ ವಿಚಾರವಾಗಿದೆ ಅವರು ಪಕ್ಷ ಬಿಟ್ಟು ಹೋದರೆ ಹೋಗಲಿ. ಆದ್ರೆ ನನ್ನ ಮೇಲೆ ಆರೋಪ ಮಾಡಿ ಹೋಗೋದು ಸರಿಯಲ್ಲ. ಅವರು ಬಿಜೆಪಿಯಲ್ಲಿ ಇರಬೇಕಾ ಇಲ್ವಾ ಅಂತ ಅವರಿಗೆ ಬಿಟ್ಟ ವಿಚಾರ
> **ಶಾಸಕ ಜನಾರ್ದನ ರೆಡ್ಡಿ**

**ಜನಾರ್ದನ ರೆಡ್ಡಿ ಸ್ಫೋಟಕ ಮಾಹಿತಿ**
ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಪಕ್ಷದಲ್ಲಿ ಮಣಿಸಲು ಅದೇ ಸಮುದಾಯದ ಶ್ರೀರಾಮುಲು ಅವರನ್ನು ಕಾಂಗ್ರೆಸ್‌ಗೆ ಸೇರ್ಪಡೆಗೊಳಿಸಲು ಡಿಸಿಎಂ ಡಿಕೆ ಶಿವಕುಮಾರ್ ಅವರು ಪ್ರಯತ್ನ ನಡೆಸುತ್ತಿದ್ದಾರೆ ಎಂದು ಶಾಸಕ ಜನಾರ್ದನ ರೆಡ್ಡಿ ಸ್ಫೋಟಕ ಮಾಹಿತಿಯನ್ನು ನೀಡಿದ್ದಾರೆ.

> ಪಕ್ಷ ಕೊಟ್ಟ ಕೆಲಸ ನಾನು ಮಾಡ್ತೇನೆ. ರಾಮುಲು ಪರ ಕೆಲಸ ಮಾಡು ಅಂದ್ರೂ ಮನಃಪೂರ್ವಕವಾಗಿ ಕೆಲಸ ಮಾಡ್ತೇನೆ. ಇಪ್ಪತ್ತು ವರ್ಷದ ಹಿಂದೆ ಜನಾರ್ದನ ರೆಡ್ಡಿ ಹೇಳೋದೆಲ್ಲ ಆಗ್ತಿತ್ತು. ಅದು ಹಳೇ ಕತೆ. ಈಗ ಜನಾರ್ದನ ರೆಡ್ಡಿ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಎಂದರು.



**ಜನಾರ್ದನ ರೆಡ್ಡಿ ಹೇಳಿಕೆ**

ರಾಮುಲು ಸಹ ಅವರ ಹಾಗೆ ವಿಜಯೇಂದ್ರ, ರೆಡ್ಡಿ ಬಗ್ಗೆ ಮಾತಾಡಿ ದೊಡ್ಡವನಾಗ್ತೀನಿ ಅಂತ ಅನ್ಕೊಂಡ್ರೆ ಅದು ದಡ್ಡತನ. ರಾಜ್ಯದಲ್ಲಿ ಕಾರ್ಯಕರ್ತರು ವಿಜಯೇಂದ್ರ ರನ್ನ ಒಪ್ಕೊಂಡಿದ್ದಾರೆ ಎಂದು ಜನಾರ್ದನ ರೆಡ್ಡಿ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಪರವಾಗಿ ಬ್ಯಾಟಿಂಗ್ ಮಾಡಿದರು.

ರಾಮುಲು ನನ್ನ ವಿರುದ್ಧ ಸ್ವಾಮಿ ದ್ರೋಹ, ಆಸ್ತಿ ದ್ರೋಹ, ತಾಯಿ ದ್ರೋಹ ಮಾಡಿದ್ದಾರೆ. ಹಲವು ವಿಚಾರಗಳನ್ನು ಆಯಾಯಾ ಸಂದರ್ಭ ಬಂದಾಗ ಮಾತಾಡ್ತೇನೆ. ಆದರೆ ಯಾವುದೂ ನಮ್ಮ ಕೈಯಲ್ಲಿ ಇಲ್ಲ. ಪುರಾಣ ಕಾಲದಲ್ಲಿ ಕೃಷ್ಣಾರ್ಜುನ ಯುದ್ಧ, ರಾಮಾಯಣದಲ್ಲಿ ರಾಮಾಂಜನೇಯ ಯುದ್ಧವೂ ನಡೆದಿದೆ. ಅಲ್ಲಿಂದಲೇ ಇದೆಲ್ಲ ನಡೆದುಕೊಂಡು ಬಂದಿದೆ. ರಾಮುಲು ತಮ್ಮ ನಡುವಿನ ಸಮರ ಕೃಷ್ಣಾರ್ಜುನ, ರಾಮಾಂಜನೇಯ ಯುದ್ಧಕ್ಕೆ ರೆಡ್ಡಿ ಹೋಲಿಸಿಕೊಂಡರು. ಈ 14 ವರ್ಷದಲ್ಲಿ ರಾಮುಲು ತಮ್ಮಮೈಮೇಲೆ ಬಹಳ ಎಳೆದುಕೊಂಡಿದ್ದಾರೆ.


ಏಜೆನ್ಸಿಗಳು ತನಿಖೆ ಮಾಡಿದರೆ ಬಹಳ ವಿಚಾರಗಳು ರಾಮುಲು ಮೈಲೇಲೆ ಬರುತ್ತೆ, ಅಷ್ಟು ವಿಚಾರಗಳನ್ನು ಅವ್ರು ಮೈಮೇಲೆ ಎಳೆದುಕೊಂಡಿದ್ದಾರೆ. ಅದರ ಬಗ್ಗೆ ನಾನು ಈಗ ಮಾತಾಡಲ್ಲ, ಸಮಯ ಬಂದಾಗ ಮಾತಾಡ್ತೇನೆ. ರಾಮುಲು ವಿಚಾರದಲ್ಲಿ ಹೊಸ ವಿಚಾರ ರೆಡ್ಡಿ ಬಹಿರಂಗಪಡಿಸಿದರು.

## ಆಟೋ ಮೇಲೆ ಈ ರೀತಿ ಪೋಸ್ಟರ್ ಹಾಕಿದ್ರೆ ಬೀಳುತ್ತೆ ದಂಡ

• ಉದಯವಾಹಿನಿ ಬೆಂಗಳೂರು

ಆಟೋ ಅಂದಮೇಲೆ ಅಲ್ಲಿ ಡೈಲಾಗ್ ಇದ್ದೇ ಇರತ್ತೆ.. ತಮ್ಮ ಪ್ರೀತಿಯ ನಟನ ಫೋಟೋ ಹಾಕಿ ಅದರ ಕೆಳಗಡೆ ಮಾಸ್ ಡೈಲಾಗ್ ಬರೆದಿರುತ್ತಾರೆ. ಹಲವು ಮಂದಿ ಎಮೋಷನಲ್ ಪದ ಬಳಕೆ ಮಾಡಿ ಬರೆದಿದ್ರೆ, ಕೆಲವರು ತಾಯಿ ಬಗ್ಗೆ.. ಹೀಗೆ ನಾನಾ ರೀತಿಯ ಬರಹಗಳುಳ್ಳ ಪೋಸ್ಟರ್ ನೋಡಿರುತ್ತೇವೆ.

ಆದ್ರೆ ಹುಷಾರ್ ಇನ್ಮುಂದೆ ಹೀಗೆಲ್ಲಾ ಹಾಕಿದ್ರೆ ದಂಡದ ಜೊತೆ ಸೀಜ್ ಆಗ್ರಹುದು ನಿಮ್ಮ ವಾಹನ. ಹೌದು, ವಾಹನಗಳ ಮೇಲೆ ವಿವಾದಾತ್ಮಕ, ಕ್ರೌರ್ಯ, ಅಶ್ಲೀಲ ಪೋಸ್ಟರ್ ಹಾಕಿದರೆ ಇನ್ನು ಮುಂದೆ ದಂಡ ಬೀಳಲಿದೆ. ಇದಕ್ಕೆ ಸಂಬಂಧಿಸಿದಂತೆ ಸಾರಿಗೆ ಅಧಿಕಾರಿಗಳು ಕಣ್ಣಿಟ್ಟಿದ್ದು ದಂಡದ ಜೊತೆ ಸೀಜ್ ಮಾಡುವ ಪ್ಲಾನ್ ಮಾಡುತ್ತಿದ್ದಾರೆ. ಆಟೋ, ಟ್ಯಾಕ್ಸಿ



ಉದಯವಾಹಿನಿ ಚಿತ್ರ

ಇತರೆ ವಾಹನ ಚಾಲಕರ ಗಮನದಲ್ಲಿರಲಿ. ವಾಹನಗಳ ಮೇಲೆ ನೆಚ್ಚಿನ ನಟರ ಫೋಟೋ ಹಾಕಿ, ಯಾವುದೋ ವಿವಾದಾತ್ಮಕ ಫೋಟೋ ಅಥವಾ ಬರಹಗಳನ್ನು ಹಾಕಿ ಸಮಾಜ ದ ಸ್ವಾಸ್ಥ್ಯ ಕೆಡಿಸುವವರ ವಿರುದ್ಧ ಸಾರಿಗೆ ಇಲಾಖೆಯ ಅಧಿಕಾರಿಗಳು ಸಮರ ಸಾರಲು ಮುಂದಾಗಿದ್ದಾರೆ.

ನಟರು ಮಚ್ಚು ಹಿಡಿ ಯುವ ಪೋಸ್ಟರ್ ಅಥವಾ ಕೆಲವರ ಭಾವನೆಗಳನ್ನು ಕೆರಳಿಸುವ ಬರಹಗಳು, ಫೋಟೋಗಳನ್ನು ಹಾಕಿದರೆ ಅಧಿಕಾರಿಗಳು ದಂಡಾಸ್ತ್ರ ಪ್ರಯೋಗ ಮಾಡಲಿ

> ಅಶ್ಲೀಲ, ಅಸಭ್ಯ, ಕ್ರೌರ್ಯವನ್ನು ಬಿಂಬಿಸುವ ಬರಹಗಳು, ಕೆಲವು ಪೋಸ್ಟರ್ ಗಳನ್ನು ಆಟೋ, ಟ್ಯಾಕ್ಸಿಗಳ ಮೇಲೆ ಹಾಕಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗ್ತಿವೆ. ಇದು ನಕಾರಾತ್ಮಕ ಪರಿಣಾಮ ಬೀಳುತ್ತಿದ್ದು ಹೀಗಾಗಿ ಈ ಕ್ರಮ ಕೈಗೊಳ್ಳಲಾಗಿದೆ

ದ್ದಾರೆ. ಆಯಾ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳ ತಂಡ ಇಂತಹ ವಾಹನಗಳ ಪರಿಶೀಲನೆಗೆ ಇಳಿಯಲಿದೆ. ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದ ಚಾಲಕರು, ತಮ್ಮ ವಾಹನ ಗಳ ಮೇಲೆ ಯಾವುದಾದರೂ ಹಳೆಯ ಕೇಸುಗಳಿದ್ದರೆ ಅಂತ ವಾಹನಗಳನ್ನ ಅಧಿಕಾರಿ ಗಳು ಸೀಜ್ ಮಾಡಲಿದ್ದಾರೆ.

## ತಾಯವ್ವ ಚಲನಚಿತ್ರದ ಹಾಡುಗಳ ಬಿಡುಗಡೆ

• ಉದಯವಾಹಿನಿ ಬೆಂಗಳೂರು



ಉದಯವಾಹಿನಿ ಚಿತ್ರ

ತಾಯವ್ವ ಚಲನಚಿತ್ರದ ಮೂಲಕ ಮೊದಲ ಬಾರಿಗೆ ಹೊಸ ಪ್ರತಿಭೆ ಗೀತಪ್ರಿಯ ಚಿತ್ರರಂಗ ಪ್ರವೇಶಿಸುತ್ತಿದ್ದು ಇದೊಂದು ಅಪ್ಪಟ ಗ್ರಾಮೀಣ ತೊಡಗಿನ ಸಿನಿಮಾ ಹೆಣ್ಣು ಮಕ್ಕಳನ್ನು ಉಳಿಸಿ ಬೆಳೆಸಿ ಎಂಬ ಸಂದೇಶವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ ಆದ್ದರಿಂದಲೇ ಈ ಸಿನಿಮಾದಲ್ಲಿ ಉತ್ತಮ ಸಂದೇಶವಿದ್ದು ನಾಗರೀಕ ಸಮಾಜಕ್ಕೆ ತಲುಪುವ ಅಂತಹ ವಿಷಯವಾಗಿದ್ದು ಈ ಚಿತ್ರಕ್ಕೆ ಸುದೀಪ್ ರವರು ಬೆಂಬಲವಾಗಿ ನಿಂತಿದ್ದು ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕ ಮತ್ತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ. ಭಾ.ಮ. ಹರೀಶ್ ಮೊದಲ ಬಾರಿಗೆ ಭಾ.ಮ. ಹರೀಶ್ ಆಡಿಯೋ ಹೆಸರಿನಲ್ಲಿ ಹೊಸ ಆಡಿಯೋ ಕಂಪನಿಯನ್ನು ಪ್ರಾರಂಭಿಸಿದ್ದು.

**ಆಡಿಯೋ ಕಂಪನಿ ಪ್ರಾರಂಭ**

ಈ ಕಂಪನಿಯ ಅಡಿಯಲ್ಲಿ ತಾಯವ್ವ ಸಿನಿಮಾ ದ ಆಡಿಯೋ ಬಿಡುಗಡೆಯಾಗಿದೆ ಕಾರ್ಯಕ್ರಮದಲ್ಲಿ ನಿರ್ಮಾಪಕಿ ಪದ್ಮಾವತಿ ಚಂದ್ರಶೇಖರ್. ನಿರ್ಮಾಪಕರಾದ ಭಾ.ಮ. ಹರೀಶ್. ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯ ಅಧ್ಯಕ್ಷ ಕೃಷ್ಣಪ್ಪ . ಐಫ್ಲೆಕ್ಸ್ ಮುಖ್ಯಸ್ಥ ಗಿರೀಶ್. ಶಿಕ್ಷಣ ತಜ್ಞ ನಾಗಪಾಲ್ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು ಎಂದು ಹೇಳಲಾಗಿದೆ

## ಸಿದ್ದರಾಮಯ್ಯ ಮೇಲುಗೈ, ಸಿಎಂ ಪಟ್ಟಕ್ಕೆ ಡಿಕೆ ಶಿವಕುಮಾರ್ ಹರಸಾಹಸ

• ಉದಯವಾಹಿನಿ ಬೆಂಗಳೂರು

ಅಧಿಕಾರಕ್ಕೆ ಬಂದು ಎರಡೂವರೆ ವರ್ಷಕ್ಕೆ ಹತ್ತಿರವಾಗುತ್ತಿದ್ದಂತೆ ಮತ್ತೆ ಅಧಿಕಾರ ಹಂಚಿಕೆ ವಿಷಯ ಮುನ್ನೆಲೆಗೆ ಬಂದಿದೆ. ಅಧಿಕಾರ ಉಳಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅಧಿಕಾರ ಪಡೆದುಕೊಳ್ಳಲು ಡಿಕೆ ಶಿವಕುಮಾರ್ ಹರಸಾಹಸ ಪಡುತ್ತಿದ್ದಾರೆ. ಈ ಕುರ್ಚಿಯ ಆಟ ಒಂದು ರೀತಿಯಲ್ಲಿ ಹಾವು-ಏಣಿಯಾಟದಂತಿದ್ದರೂ ಸಿದ್ದರಾಮಯ್ಯ ಒಬ್ಬರೇ ಮೇಲುಗೈ ಸಾಧಿಸುತ್ತಿದ್ದಾರೆ. ನಿಂತಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಬಾಯಿ ಮುಚ್ಚಿಕೊಂಡಿರಬೇಕು ಎಂದು ಎಚ್ಚರಿಕೆ ನೀಡಿದ್ದಾರೆ. ಸದ್ಯಕ್ಕೆ ಹೈಕಮಾಂಡ್ ನೀಡಿದ ಕಠಿಣ ಎಚ್ಚರಿಕೆಯ



ಉದಯವಾಹಿನಿ ಚಿತ್ರ

ನಡುವೆಯೂ ಸಿಎಂ ಕೂಗು ಮುಖಂಡರು ಬಾಯಿಗೆ ಬೀಗ ಹಾಕಿಕೊಂಡಿದ್ದರಾದರೂ ಕಾರ್ಯಕರ್ತರ ಮಾಡಿಸುತ್ತಾ ಜೈಕಾರ ಹಾಕುತ್ತಲೇ ಇದ್ದಾರೆ. ಮತ್ತೊಂದೆಡೆ ಬಾಯಿ ಮುಚ್ಚಿಸುವುದು ಅಸಾಧ್ಯ. ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಮತ್ತು ಸತೀಶ್ ಜಾರಕಿಹೊಳಿ ಮೂವರ ಬೆಂಬಲಿಗರೂ ತಮ್ಮ ತಮ್ಮ ನಾಯಕ ಸಿಎಂ ಆಗಲಿ ಎಂದು ಬಹಿರಂಗವಾಗಿಯೇ ಪೂಜೆ ಪುನಸ್ಕಾರ ರಾಜಕಾರಣದಲ್ಲಿ ಮೂಗು ತೂರಿಸುತ್ತಿರುವ ಸನ್ಯಾಸಿಗಳೂ ಬ್ಯಾಟ್ ಬೀಸುತ್ತಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಹಿರೇಬಾಗೇವಡಿಯ ಬೆಂಬಲಿಗ ಪರುಶರಾಂ ಪೂಜಾರಿ ಅವರು ಸಿಗಂಧೂರು ಚೌಡೇಶ್ವರಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಸತೀಶ್ ಜಾರಕಿಹೊಳಿ ಮುಂದಿನ ಮುಖ್ಯಮಂತ್ರಿ ಎಂಬ ಪೋಸ್ಟರ್ ತಾಜಾ ಸುದ್ದಿ ಪ್ರದರ್ಶಿಸಿದ್ದಾರೆ. ಬೆಳಗಾಯಿಯಲ್ಲಿ ನಡೆದ ಗಾಂಧಿ ಭಾರತ್ ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿಕೆಶಿ ಬೆಂಬಲಿಗರು ಖರ್ಗೆ ಪ್ರಿಯಾಂಕಾ, ಸುರ್ಜೆವಾಲ, ಸಿದ್ದರಾಮಯ್ಯ ಅವರ ಎದುರಿನಲ್ಲೇ ಡಿಕೆ ಅವರ ಹೋರ್ಡಿಂಗ್ಸ್ ಪ್ರದರ್ಶಿಸಿ ಮುಂದಿನ ಸಿಎಂ ಎಂದು ಘೋಷಣೆ ಕೂಗಿದ್ದಾರೆ.

## ಪಂ. ಅಧಿಕಾರಿ ರೋಹಿತ್‌ರಿಂದ ಕರ್ತವ್ಯಲೋಪ: ಆರೋಪ

• ಉದಯವಾಹಿನಿ ಕೆ.ಆರ್.ಪುರ

ಬೆಂ. ಪೂರ್ವ ತಾಲ್ಲೂಕಿನ ದೊಡ್ಡಗುಬ್ಬಿ ಗ್ರಾಮ ಪಂಚಾಯತಿ ಅಧಿಕಾರಿ ರೋಹಿತ್ ಹಾಗೂ ಇತ್ತರೆ ಅಧಿಕಾರಿಗಳು ಕರ್ತವ್ಯ ಲೋಪ ಎಸಾಗಿದ್ದಾರೆ ಎಂದು ಆರೋಪಿಸಿ ಕ್ಷೇತ್ರ ಜೆಡಿಎಸ್ ಉಪಾಧ್ಯಕ್ಷ ಎನ್. ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ಮಹದೇವಪುರ ಕ್ಷೇತ್ರದ ಬಿದರಹಳ್ಳಿ ಹೋಬಳಿಯ ದೊಡ್ಡಗುಬ್ಬಿ ಗ್ರಾಮದಲ್ಲಿ ಆಯೋಜಿಸಿದ ಮಾಧ್ಯಮ ಗೋಷ್ಠಿಯಲ್ಲಿ ಮಾಹಿತಿ ನೀಡಿ ಮಾತನಾಡಿದ ಅವರು.

ದೊಡ್ಡಗುಬ್ಬಿ ಗ್ರಾಮದ ಸ.ನಂ.106ರಲ್ಲಿ 3 ಎಕರೆ 16ಗುಂಟೆ ಸರ್ಕಾರಿ ಗುಂಡುತೋಪು ಜಮೀನಿನ ಪೈಕಿ 0-16 ಗುಂಟೆ ಜಮೀನನ್ನು ನೂತನ ಗ್ರಾಮ ಪಂಚಾಯಿತಿ ಕಟ್ಟಡ ಹಾಗೂ ಡಿಜಿಟಲ್ ಗ್ರಂಥಾಲಯ ಕಟ್ಟಡ ನಿರ್ಮಿಸಲು ಕಾಯ್ದೆ 1964 ರ ಕಲಂ 71ರ ಅಡಿ ಕಾಯ್ದಿರಿಸಿ ಜಿಲ್ಲಾ ಪಂಚಾಯಿತಿಗೆ ಹಸ್ತಾಂತಿರಿಸಲು ಆದೇಶವನ್ನು ಹೊರಡಿಸಿದೆ. ನ್ಯಾಯಾಲಯದ ಆದೇಶವನ್ನು ಗಾಳಿಗೆ ತೂರಿ ನ್ಯಾಯಲಯಕ್ಕೆ ಅಗೌರವಸೂಚಿಸಿರುವವರ



ಉದಯವಾಹಿನಿ ಚಿತ್ರ

ವಿರುದ್ಧ ಕಾನೂನು ರೀತಿ ಕ್ರಮ ಕೈಕೊಳ್ಳಬೇಕು, ಈ ಪ್ರಕರಣ ತಾಲ್ಲೂಕು ಕಛೇರಿಗೆ, ಲೋಕಯುಕ್ತರ ಕಛೇರಿಗೆ ದೂರು ಸಲ್ಲಿಸಿದ್ದು ನ್ಯಾಯ ಸಿಗುವವರಿಗೆ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

65ಲಕ್ಷಕ್ಕೂ ಹೆಚ್ಚು ಸಾರ್ವಜನಿಕರ ತೆರಿಗೆ, ಪಂಚಾಯತಿ ಅನುದಾನಿತ ಸರ್ಕಾರದ ಹಣವನ್ನು ದುರುಪಯೋಗವಾಗದಂತೆ ಉಳಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೆ.ಆರ್. ಎಸ್ ಪಕ್ಷದ ಸದಸ್ಯ ಜಗದೀಶ್ , ಹಿರಂಡಹಳ್ಳಿ ರಾಮಸ್ವಾಮಿ ರಾಜು ಉಪಸ್ಥಿತರಿದ್ದರು.

## ಕರ್ನಾಟಕದ ಮೊದಲ ಶಂಕಿತ ಎಂಪೋಕ್ಸ್ ವೈರಸ್ ಸೋಂಕು ಪ್ರಕರಣ

• ಉದಯವಾಹಿನಿ ಬೆಂಗಳೂರು

ಇತ್ತೀಚೆಗೆ ದುಬೈನಿಂದ ಕರ್ನಾಟಕಕ್ಕೆ ಆಗಮಿಸಿದ ವ್ಯಕ್ತಿಯೊಬ್ಬರಿಗೆ ಎಂಪೋಕ್ಸ್ ವೈರಸ್ (ಈ ಹಿಂದೆ ಮಂಕಿಫಾಕ್ಸ್ ವೈರಸ್ ಎಂದು ಕರೆಯಲಾಗುತ್ತಿತ್ತು) ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ವರದಿ ಮಾಡಿದೆ. 40 ವರ್ಷದ ರೋಗಿಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಭಯಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ. ಇದು ಕರ್ನಾಟಕದಲ್ಲಿ ಈ ವರ್ಷದ ಮೊದಲ ದೃಢಪಡಿಸಿದ ಎಂಪೋಕ್ಸ್ ಪ್ರಕರಣವಾಗಿದೆ. ವ್ಯಕ್ತಿಯ ಆರೋಗ್ಯದ ಕುರಿತು ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ. ಕಳೆದ ವರ್ಷವೇ ಎಂಪೋಕ್ಸ್ ಗೆ ಸಂಬಂಧಪಟ್ಟಂತೆ ಕೇಂದ್ರ ಸರಕಾರು ಎಲ್ಲಾ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮಾರ್ಗಸೂಚಿ ನೀಡಿತ್ತು ಎಂಪೋಕ್ಸ್ ಹರಡುವುದನ್ನು ತಡೆಯಲು ಹಲವು ಸೂಚನೆಗಳನ್ನು ಈ ಮೂಲಕ ನೀಡಲಾಗಿತ್ತು.

ಎಂಪೋಕ್ಸ್ ವೈರಸ್ ಸೋಂಕು ಹರಡುವುದನ್ನು



ಉದಯವಾಹಿನಿ ಚಿತ್ರ

ತಪ್ಪಿಸಲು ಕರ್ನಾಟಕ ಸರ್ಕಾರವು ಸೆಪ್ಟೆಂಬರ್ 2024ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಉಚಿತ ಪರೀಕ್ಷಾ ಘಟಕ ಸ್ಥಾಪಿಸಿತ್ತು. ಆಸ್ಪತ್ರೆಯ ಎಚ್ ಬ್ಲಾಕ್‌ನಲ್ಲಿ ನಿರ್ದಿಷ್ಟವಾಗಿ ಎಂಪೋಕ್ಸ್ ಪ್ರಕರಣಗಳಿಗಾಗಿ 50 ಐಸೋಲೇಷನ್ ಹಾಸಿಗೆ ಗಳನ್ನು ಮೀಸಲಾಗಿಡಲಾಗಿತ್ತು. ಇಲ್ಲಿ ವಿಆರ್ ಡಿಎಲ್ ಲ್ಯಾಬ್ ಸ್ಥಾಪಿಸಲಾಗಿದೆ. ಅಲ್ಲಿನ ಮೈಕ್ರೋ ಬಯೋಲಜಿ ವಿಭಾಗವು ಟೆಸ್ಟ್‌ಗಳನ್ನು ನಡೆಸಲು ಸಿದ್ಧವಾಗಿದೆ. ಇಲ್ಲಿ ಸಾಕಷ್ಟು ಪಿಪಿಇ ಕಿಟ್‌ಗಳೂ ಇವೆ. ಮುನ್ನೆಚ್ಚರಿಕೆ ಕ್ರಮವಾಗಿ ಕಳೆದ ವರ್ಷ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದೇಶಗಳಿಂದ ಆಗಮಿಸುವ ಪ್ರಯಾಣಿಕರನ್ನು ಪರೀಕ್ಷಿಸಲು ಆರಂಭಿಸಲಾಗಿತ್ತು. ಪ್ರಯಾಣಿಕರ ತಪಾಸಣೆ ಮತ್ತು ತಾಪಮಾನ ಟೆಸ್ಟಿಂಗ್ ಸೇರಿದತೆ ಅನೇಕ ಪ್ರೋಟೋಕಾಲ್‌ಗಳನ್ನು ಜಾರಿಗೆ ತರಲಾಗಿದೆ ಎಂದು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಕಟಿಸಿತ್ತು. ಎಂಪೋಕ್ಸ್ ವೈರಸ್ ಸೋಂಕಿನ ರೋಗ ಲಕ್ಷಣಗಳನ್ನು ಹೊಂದಿರುವ ಪ್ರಯಾಣಿಕರನ್ನು ಕಡ್ಡಾಯವಾಗಿ 21 ದಿನಗಳ ಕ್ಯಾರಂಟೈನ್‌ಗೆ ಒಳಪಡಿಸಲಾಗುತ್ತದೆ.

> ದೇಹದಲ್ಲಿ ವಿಶಿಷ್ಟ ದದ್ದು ಉಂಟಾಗುತ್ತದೆ. ಇದು ಚಪ್ಪಟ್ಟೆಯಾದ ದ್ರವ ತುಂಬಿದ ಗುಳ್ಳೆಗಳಂತೆ ಇರುತ್ತದೆ. ಸಾಮಾನ್ಯವಾಗಿ ಮುಖದ ಮೇಲೆ ಆರಂಭವಾಗುತ್ತದೆ. ಬಳಿಕ ದೇಹದ ಇತರೆ ಭಾಗಗಳಿಗೆ ಹರಡುತ್ತದೆ. ಜ್ವರ, ತಲೆನೋವು, ಸ್ನಾಯುನೋವು, ಬೆನ್ನು ನೋವು, ಶೀತ, ನಿಶ್ಯಕ್ತಿಯಂತಹ ಸಾಮಾನ್ಯ ಲಕ್ಷಣಗಳನ್ನು ಹೊಂದಿವೆ.

# ಅನಧಿಕೃತ ಕಟ್ಟಡಗಳಿಗೆ ಬಿಡಿಎ ಶಾಕ್! ತೆರವು ಕಾರ್ಯಾಚರಣೆ

### ಮಾಳಗಾಲದಲ್ಲಿ ನಿರ್ಮಿಸಿದ್ದ ಮನೆ, ಶೆಡ್‌ಗಳನ್ನು ತೆರವು ಮಾಡಿ ಬರೋಬ್ಬರಿ 120 ಕೋಟಿ ರೂಪಾಯಿ ಆಸ್ತಿಯನ್ನು ವಶಕ್ಕೆ

• ಉದಯವಾಹಿನಿ ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಮುಂದಾಗಿದೆ. ಗುರುವಾರ ನಡೆದ ಕಾರ್ಯಾಚರಣೆಯಲ್ಲಿ ನಾಗರಬಾವಿ ಬಡಾವಣೆಯ ಮಾಳ ಗಾಲದಲ್ಲಿ ನಿರ್ಮಿಸಿದ್ದ ಮನೆ, ಶೆಡ್‌ಗಳನ್ನು ತೆರವು ಮಾಡಿ ಬರೋಬ್ಬರಿ 120 ಕೋಟಿ ರೂಪಾಯಿ ಆಸ್ತಿಯನ್ನು ವಶಕ್ಕೆ ಪಡೆದುಕೊಂಡಿದೆ.

ಈ ಬಗ್ಗೆ ಬಿಡಿಎ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಾಳಗಾಲ ಗ್ರಾಮದ (ನಾಗರಬಾವಿ ಬಡಾವಣೆ) ಸರ್ವೆ ನಂ. 14/2ರ 2 ಎಕರೆ 16 ಗುಂಟೆ ಪ್ರದೇಶದಲ್ಲಿ ಅನಧಿಕೃವಾಗಿ ನಿರ್ಮಾಣವಾಗಿದ್ದ 20 ಎ.ಸಿ. ಶೀಟ್ ಶೆಡ್, ಆರ್.ಟಿ.ಸಿ. ಕಟ್ಟಡಗಳನ್ನು ತೆರವುಗೊಳಿಸಿ, ಸುಮಾರು 120 ಕೋಟಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು ಎಂದು ತಿಳಿಸಲಾಗಿದೆ. ಈ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರತ ಪಡೆಯ ಉಪ ಆರಕ್ಷಕ ಅಧೀಕ್ಷಕ ಕೃಷ್ಣಕುಮಾರ್, ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರ ರವಿಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಬಸವರೆಡ್ಡಿ ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.



ಉದಯವಾಹಿನಿ ಚಿತ್ರ

- ಅಕ್ರಮ ಕಟ್ಟಡಗಳ ಮೇಲೆ ಬಿಡಿಎ ಕಾರ್ಯಾಚರಣೆ.
- ಸುಮಾರು 120 ಕೋಟಿ ರೂಪಾಯಿಗಳ ಆಸ್ತಿ ವಶಕ್ಕೆ ಪಡೆದ ಬಿಡಿಎ.
- ಮಾಳಗಾಲದಲ್ಲಿ ನಿರ್ಮಿಸಿದ್ದ ಮನೆ, ಶೆಡ್‌ಗಳನ್ನು ತೆರವು. ಬಿಡಿಎ

**ಆರ್‌ಆರ್ ನಗರದಲ್ಲಿ ಬಿಬಿಎಂಪಿ ತೆರವು ಕಾರ್ಯಾಚರಣೆ**

ರಾಜರಾಜೇಶ್ವರಿನಗರ ವಲಯದ ಎಚ್‌ಎಂಟಿ ವಾರ್ಡ್ ವ್ಯಾಪ್ತಿಯಲ್ಲಿರಾಜಕಾಲುವೆ ಜಾಗ ಒತ್ತುವರಿ ಮಾಡಿ ನಿರ್ಮಿಸಿದ್ದ ಶೆಡ್‌ಗಳನ್ನು ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಿದ್ದರು.

**ಭೂ ಸ್ವಾಧೀನಕ್ಕೆ ಕಾಲಾವಕಾಶ**

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಹಾದು ಹೋಗುತ್ತಿರುವ ಮುಖ್ಯ ಸಂಪರ್ಕ ರಸ್ತೆ(PRR-2) ಗಾಗಿ ಭೂ ಸ್ವಾಧೀನಪಡಿಸಿಕೊಂಡಿರುವ ಪ್ರದೇಶದಲ್ಲಿ ನಿರ್ಮಿಸಿಕೊಂಡಿರುವ ಅನಧಿಕೃತ ನಿವೇಶನದಾರರಿಗೆ ಹೈಕೋರ್ಟ್ ನ್ಯಾಯಾಲಯದ ತೀರ್ಪಿನನ್ವಯ ಈಗಾಗಲೇ ನೋಟೀಸ್ ಗಳನ್ನು ಜಾರಿ ಮಾಡಿ ತಮ್ಮ ವಸ್ತುಗಳನ್ನು ಸ್ಥಳಾಂತರಿಸಿಕೊಳ್ಳಲು ಕಾಲಾವಕಾಶ ನೀಡಲಾಗಿದೆ. ಹೀಗಾಗಿ, ಕಳೆದ ಎರಡು ದಿನಗಳಿಂದ ಮುಖ್ಯ ಸಂಪರ್ಕ ರಸ್ತೆ (PRR-2) ಬರುವ ನಿವೇಶನಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯು ಭರದಿಂದ ಸಾಗುತ್ತಿದೆ ಎಂದು ಬಿಡಿಎ ತಿಳಿಸಿದೆ.

ತುಮಕೂರು ಮುಖ್ಯರಸ್ತೆಯಿಂದ ಎಸ್‌ಆರ್‌ಎಸ್ ಸಿಗ್ನಲ್ ಕಡೆಗಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹೊಂದಿಕೊಂಡಿರುವ ರಾಜಕಾಲುವೆಯ ಸುಮಾರು 100 ಮೀಟರ್ ಜಾಗವನ್ನು ಅನಧಿಕೃತವಾಗಿ ಒತ್ತುವರಿ ಮಾಡಿ, 35 ರಿಂದ 45 ಶೆಡ್‌ಗಳು ಹಾಗೂ ಒಂದು ಗ್ಯಾರೇಜ್ ನಿರ್ಮಿಸಲಾಗಿತ್ತು.

> ಈ ಹಿನ್ನೆಲೆಯಲ್ಲಿ ವಲಯ ಆಯುಕ್ತ ಸತೀಶ್ ಅವರ ನಿರ್ದೇಶನದಂತೆ ಪಾಲಿಕೆ ಅಧಿಕಾರಿಗಳು ಪೊಲೀಸ್ ಸಿಬ್ಬಂದಿ ಹಾಗೂ ಮಾರ್ಷಲ್‌ಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಶೆಡ್‌ಗಳನ್ನು ತೆರವುಗೊಳಿಸುವಂತೆ ಒತ್ತುವರಿದಾರರಿಗೆ ಸೂಚಿಸಿದರು. ಬಳಿಕ ಅಲ್ಲಿನ ನಿವಾಸಿಗಳನ್ನು ಸ್ಥಳಾಂತರ ಮಾಡಿಸಿ, ಎರಡು ಜೆಸಿಬಿ ಯಂತ್ರಗಳ ಮೂಲಕ ಶೆಡ್‌ಗಳು, ಗ್ಯಾರೇಜ್ ತೆರವು ಮಾಡಲಾಗಿತ್ತು. ಒತ್ತುವರಿ ಮಾಡಿಕೊಂಡಿದ್ದ ರಾಜ ಕಾಲುವೆ ಜಾಗವನ್ನು ಪಾಲಿಕೆ ವಶಕ್ಕೆ ಪಡೆಯಲಾಗಿದೆ. ಶೆಡ್, ಗ್ಯಾರೇಜ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ, ಮತ್ತೆ ಒತ್ತುವರಿ ಮಾಡದಂತೆ ಸ್ಥಳದಲ್ಲಿವಾಸವಿದ್ದ ನಿವಾಸಿಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ವೇಳೆ ಕಾರ್ಯನಿರ್ವಾಹಕ ಎಂಜಿನಿಯರ್ ಪಾಪರೆಡ್ಡಿ, ಕಂದಾಯ ವಿಭಾಗದ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಹಾಗೂ ಮಾರ್ಷಲ್‌ಗಳು ಉಪಸ್ಥಿತರಿದ್ದರು.

# ಲಕ್ಷ್ಮಣತೀರ್ಥ ನದಿಯ ಒಡಲು ಸೇರುತ್ತಿದೆ ತ್ಯಾಜ್ಯ

## ಸ್ಥಳೀಯರು ಗ್ರಾಮ ಪಂಚಾಯಿತಿ ಗಮನ ಸೆಳೆದರೂ ಅಧಿಕಾರಿಗಳು ಸೂಕ್ತ ಕ್ರಮ ವಹಿಸದೆ ಮೌನಕ್ಕೆ ಶರಣಾಗಿದ್ದಾರೆ ಎಂಬ ಆರೋಪ


• ಉದಯವಾಹಿನಿ, ಹುಣಸೂರು

ತಾಲ್ಲೂಕಿನ ಗಡಿಭಾಗದ ಹನಗೋಡಿನಲ್ಲಿ ಮಾಂಸದ ಅಂಗಡಿಗಳ ಮಾಲೀಕರು ತ್ಯಾಜ್ಯ ಸುರಿಯುತ್ತಿದ್ದು, ಇದು ಲಕ್ಷ್ಮಣತೀರ್ಥ ಒಡಲು ಸೇರುತ್ತಿದೆ. ಕೊಡಗಿನ ಬ್ರಹ್ಮಗಿರಿ ಅರಣ್ಯ ಪ್ರದೇಶದಿಂದ ಶುದ್ಧವಾಗಿ ಹರಿಯುವ ಲಕ್ಷ್ಮಣತೀರ್ಥ ನದಿ ಪ್ರವೇಶದ್ವಾರವಾದ ಹನಗೋಡಿನಲ್ಲಿ ಘನ ಹಾಗೂ ದ್ರವ ತ್ಯಾಜ್ಯ ನದಿಯ ಒಡಲು ಸೇರಿ ಕಲುಷಿತಗೊಳ್ಳುತ್ತಿದೆ. ಸ್ಥಳೀಯರು ಗ್ರಾಮ ಪಂಚಾಯಿತಿ ಗಮನ ಸೆಳೆದರೂ ಅಧಿಕಾರಿಗಳು ಸೂಕ್ತ ಕ್ರಮವಹಿಸದೆ ಮೌನಕ್ಕೆ ಶರಣಾಗಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ತಾಲ್ಲೂಕಿಗೆ ಶುದ್ಧ ನೀರು ಇದ್ದರೂ ಆ ನೀರಿಗೆ ತ್ಯಾಜ್ಯ ಸೇರುವ ಮೂಲಕ ಬಳಕೆಗೆ ಯೋಗ್ಯವಲ್ಲದ ನದಿಯಾಗಿದೆ ಎಂದು ಸರ್ಕಾರ ಈಗಾಗಲೇ ಘೋಷಿಸಿದೆ. ಆದರೆ ಜನರು ಸಾಮಾನ್ಯ ಜ್ಞಾನವಿಲ್ಲದೇ ನದಿಗೆ ನಿರಂತರವಾಗಿ ತ್ಯಾಜ್ಯ ಸುರಿಯುತ್ತಿದ್ದಾರೆ.'ಹನಗೋಡು ಗ್ರಾಮದಲ್ಲಿ 1 ಸಾವಿರ ಕುಟುಂಬಗಳು ವಾಸಿಸುತ್ತಿದ್ದು, ಗ್ರಾಮ ಪಂಚಾಯಿತಿ ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿ ಒಂದು ವರ್ಷದ ಹಿಂದೆ ತ್ಯಾಜ್ಯ ಸಂಗ್ರಹ ಘಟಕ ಆರಂಭಿಸಿ ಇಬ್ಬರು ಸಿಬ್ಬಂದಿ ಹಾಗೂ ತ್ಯಾಜ್ಯ ಸಂಗ್ರಹಕ್ಕೆ ವಾಹನ ನಿಯೋಜಿಸಿದೆ. ಹೀಗಿದ್ದರೂ ತ್ಯಾಜ್ಯವನ್ನು ಸಮರ್ಪಕವಾಗಿ ಸಂಗ್ರಹಿಸುವಲ್ಲಿ ವಿಫಲವಾಗಿದೆ. ಎಲ್ಲಿ ನೋಡಿದರೂ ತ್ಯಾಜ್ಯದ ರಾಶಿಯೇ ಆವರಿಸಿಕೊಂಡಿದೆ ಎಂದು ಹನಗೋಡು ಗ್ರಾಮದ ಯಜಮಾನ ಮರಿಗೌಡ ತಿಳಿಸಿದರು.

ಸ್ವಚ್ಛ ಭಾರತ್ ಅಭಿಯಾನ ಯೋಜನೆಯನ್ನು ಗ್ರಾಮದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಗ್ರಾಮ ಪಂಚಾಯಿತಿ ಆಡಳಿತ ವಿಫಲವಾಗಿದೆ. ಜನರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲೂ ಕ್ರಮವಹಿಸಿಲ್ಲ.

ಗ್ರಾಮದಲ್ಲಿ ಕೋಳಿ, ಕುರಿ ಮಾಂಸದಂಗಡಿ ಸೇರಿದಂತೆ ಮನೆ ತ್ಯಾಜ್ಯವನ್ನು ನದಿ ತೀರದಲ್ಲಿ ಎಸೆದು ಕೈತೊಳೆದುಕೊಳ್ಳುವ ಪರಿಪಾಠ ನಿತ್ಯ ಕಾಣುತ್ತಿದ್ದೇವೆ. ಈ ಸಮಸ್ಯೆಗೆ ಗ್ರಾಮ ಪಂಚಾಯಿತಿ ಅಂತ್ಯಹಾಡಬೇಕು' ಎಂದು ಗ್ರಾಮದ ನಿವಾಸಿ ನಂಜೇಗೌಡ ಆಗ್ರಹಿಸಿದರು. ಗ್ರಾಮ ಪಂಚಾಯಿತಿಯಿಂದ ಘನತ್ಯಾಜ್ಯ ಸಂಗ್ರಹಕ್ಕೆ ಕಟ್ಟಡ ನಿರ್ಮಾಣ ಕಾಮಗಾರಿಯ ಹೊಣೆಯನ್ನು ನಿರ್ಮಿತಿ ಕೇಂದ್ರಕ್ಕೆ ನೀಡಿದ್ದು, ಇದು ಪೂರ್ಣಗೊಂಡಿಲ್ಲ. ಈ ಸಂಬಂಧ ಹಲವು ಬಾರಿ ಜನಪ್ರತಿನಿಧಿಗಳು ಪಿಡಿಒ ಅವರಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ತ್ಯಾಜ್ಯ ಸಂಗ್ರಹಿಸುವ ವಾಹನಗಳು ಮನೆಗಳಿಗೆ ತೆರಳದೇ ಇರುವುದರಿಂದ ನಾಗರಿಕರು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯ ಬೋರೇಗೌಡ ತಿಳಿಸಿದರು.


ಉದಯವಾಹಿನಿ ಚಿತ್ರ

> ಪಿಡಿಒಗೆ ನೋಟಿಸ್ 'ಹನಗೋಡು ಹೋಬಳಿ ಪಂಚಾಯಿತಿ ಸ್ವಚ್ಛ ಭಾರತ್ ಅಭಿಯಾನ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದೆ ನದಿ ಒಡಲಿಗೆ ತ್ಯಾಜ್ಯ ಸೇರುತ್ತಿರುವ ಬಗ್ಗೆ ಮಾಹಿತಿ ಇದ್ದು ಈ ಸಂಬಂಧ ಪಿಡಿಒಗೆ ನೋಟಿಸ್ ಜಾರಿಗೊಳಿಸಿ ಸೂಕ್ತ ಕ್ರವಹಿಸುವಂತೆ ಸೂಚಿಸಿದ್ದೇನೆ
> -ಹೊಂಗಯ್ಯ, ಇಒ

> ನದಿಗೆ ತ್ಯಾಜ್ಯ ಎಸೆದರೆ ಪರವಾನಗಿ ರದ್ದು 'ಘನತ್ಯಾಜ್ಯ ಸಂಸ್ಕರಣ ಘಟಕ ನಿರ್ಮಾಣಕ್ಕೆ 10 ಲಕ್ಷ ಅನುದಾನದಲ್ಲಿ 5 ಲಕ್ಷ ಬಿಡುಗಡೆಯಾಗಿದ್ದು ಉಳಿದ ಅನುದಾನಕ್ಕೆ ಜಿಲ್ಲಾ ಪಂಚಾಯಿತಿಗೆ ಪ್ರಸ್ತಾವ ಸಲ್ಲಿಸಿದೆ. ಸಾರ್ವಜನಿಕ ಸ್ಥಳದಲ್ಲಿ ಕೋಳಿ ಕುರಿ ತ್ಯಾಜ್ಯ ವಿಲೇವಾರಿ ಮಾಡಿದರೆ ಅಂತಹ ಅಂಗಡಿಗಳ ರದ್ದು ಮಾಡುವುದಾಗಿ ಅಂಗಡಿಗಳ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಲು ಸೂಚನೆ ನೀಡಲಾಗಿದೆ
> - ಡಾ.ಅನಿತಾ, ಹನಗೋಡು ಗ್ರಾಮ ಪಂಚಾಯಿತಿ ಪಿಡಿಒ

# ಡಿಆರ್ ಡಿಪಿ ವತಿಯಿಂದ ಕೆರೆ ಹೂಳೆತ್ತುವ ಕಾಮಗಾರಿಗೆ ಚಾಲನೆ

• ಉದಯವಾಹಿನಿ, ರಾಮನಗರ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ರಾಮನಗರ ತಾಲ್ಲೂಕಿನ ವತಿಯಿಂದ ಜಾಲಮಂಗಲ ವಲಯದ ಬಾಳೆಲಿಂಗೇಗೌಡನದೊಡ್ಡಿ ಗ್ರಾಮದ ಸರ್ಕಾರಿ ಕೆರೆಯನ್ನು ನಮ್ಮೂರ ನಮ್ಮ ಕೆರೆ ಯೋಜನೆಯ ಅಡಿಯಲ್ಲಿ ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ಸಂಸ್ಥೆಯ ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತ್ತಾಯ ರವರು ಗುದ್ದಲಿ ಪೂಜೆ ಮಾಡುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಪೂಜ್ಯರು ಮಾಡುತ್ತಿರುವಂತಹ ಸಮಾಜ ಸೇವೆಗಳ ಬಗ್ಗೆ ಹಾಗೂ ಯೋಜನೆಯ ವತಿಯಿಂದ ಅಭಿವೃದ್ಧಿ ಹೊಂದಿದ ಹಲವಾರು ಕೆರೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ಕೆರೆಯ ಅಭಿವೃದ್ಧಿಯಿಂದ ಜನಸಾಮಾನ್ಯರಿಗೆ ಹಾಗೂ ಪ್ರಾಣಿ ಸಂಕುಲಗಳಿಗೆ ಸಿಗುವ ಅನುಕೂಲಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಜಾಲಮಂಗಲ ಗ್ರಾಮ ಪಂಚಾಯತ್ ಅಧ್ಯಕ್ಷೆ ಪದ್ಮಮ್ಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಚಂದ್ರು, ಧರ್ಮಸ್ಥಳ ಸಂಘದ ಜಿಲ್ಲಾ ನಿರ್ದೇಶಕ ಜಯಕರ ಶೆಟ್ಟಿ, ತಾಲ್ಲೂಕು ಯೋಜನಾಧಿಕಾರಿ ಮುರಳೀಧರ, ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಾಮಚಂದ್ರಯ್ಯ, ಕೃಷಿ ಅಧಿಕಾರಿ ವಿನೋದ್, ಮೇಲ್ವಿಚಾರಕ ಸುಧೀರ್, ಸೇವಾ ಪ್ರತಿನಿಧಿ ಈರಮಾಸ್ತಮ್ಮ, ಊರಿನ ಮುಖಂಡರುಗಳಾದ ಗಿರೀಶ್, ರಾಜು, ಗೌರಮ್ಮ, ನಾರಾಯಣ, ಪುಟ್ಟಸ್ವಾಮಯ್ಯ, ಸ್ವಸಹಾಯ ಸಂಘದ ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

> ಕೆರೆಯ ಒಟ್ಟು ವಿಸ್ತೀರ್ಣ 6.30 ಎಕರೆ ಇದ್ದು ಸುಮಾರು 3.17 ಎಕರೆಯಷ್ಟು ಹೂಳು ತೆಗೆಯುವ ಕಾಮಗಾರಿಗೆ ಮೊದಲ ಹಂತದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದಿಂದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು 6.17 ಲಕ್ಷ ಅನುದಾನ ಮಂಜೂರಾತಿ ಮಾಡಿದ್ದಾರೆ. ಸರಿಸುಮಾರು 3500 ಟ್ರ್ಯಾಕ್ಟರ್ ಮಣ್ಣನ್ನು ರೈತರು ತಮ್ಮ ಜಮೀನುಗಳಿಗೆ ತೆಗೆದಿಕೊಂಡು ಹೋಗಬಹುದಾಗಿದೆ, ಹೂಳೆತ್ತಿದ ನಂತರ 300 ರಿಂದ 350 ಎಕರೆ ನೀರಾವರಿ ಸೌಲಭ್ಯ ಒರೆಯಲಿದೆ. ಈ ಕೆರೆಯಿಂದ 500 ಕ್ಕೂ ಮಿಗಿಲಾಗಿ ಜಾನುವಾರುಗಳಿಗೆ ನೀರು ಕುಡಿಯಲು ಮತ್ತು 150 ಕುಟುಂಬಗಳಿಗೆ ಆಧಾರವಾಗಿದೆ ಎಂದರು.

# ಕೊನೇ ಹಂತದಲ್ಲಿದೆ ಸಿಎಂ ವಿರುದ್ಧದ ತನಿಖೆ

• ಉದಯವಾಹಿನಿ, ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಅವರು ಮೂಡಾದಿಂದ ಪಡೆದಿದ್ದ 14 ಸೈಟ್‌ಗಳ ಬಗ್ಗೆ ಲೋಕಾಯುಕ್ತ ತನಿಖೆ ಅಂತಿಮ ಹಂತಕ್ಕೆ ಬಂದಿದೆ.ಇಡೀ ದಿನ ಮೂಡಾದಲ್ಲಿ ಇದ್ದ ಲೋಕಾಯುಕ್ತ ಟೀಂ, ಕೆಲ ಆಡಿಯೋ, ಕಡತಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಪ್ರಕರಣದ ವರದಿಯನ್ನು ನ್ಯಾಯಾಲಯಕ್ಕೆ ನೀಡಲು ಲೋಕಾಯುಕ್ತಕ್ಕೆ ಜನವರಿ 27 ಡೆಡ್‌ಲೈನ್ ಇದೆ. ಹೀಗಾಗಿ ಲೋಕಾಯುಕ್ತ ಪೊಲೀಸರು ಕೊನೆಯ ಹಂತದ ವಿಚಾರಣೆ ನಡೆಸುತ್ತಿದ್ದಾರೆ.50:50 ಅನುಪಾತದ ಸೈಟು ಹಂಚಿಕೆ ವಿಚಾರದಲ್ಲಿ ಮುಡಾ ಸದಸ್ಯರ ಅಭಿಪ್ರಾಯ ಏನಾಗಿತ್ತು ಎನ್ನುವ ಬಗ್ಗೆಯೂ ವಿಚಾರಣೆ ನಡೆಸಿದ್ದಾರೆ.

ಅಂದಿನ ಸಭೆಯಲ್ಲಿ ಮಾಜಿ ಆಯುಕ್ತ ನಟೇಶ್, ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್ ಇದ್ದ ಅವಧಿಯ ಸಭೆ ಆಡಿಯೋ ಇದ್ದಾಗಿದ್ದು ಅಂದಿನ ಸಭೆಯಲ್ಲಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಸಿದ್ದರಾಮಯ್ಯ, ಶಾಸಕ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ಎಸ್.ಎ ರಾಮ್‌ದಾಸ್, ಎಲ್. ನಾಗೇಂದ್ರ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ ಸೇರಿ ಹಲವು ಪ್ರಮುಖರು ಭಾಗಿಯಾಗಿದ್ದರು. ಸಭೆಯಲ್ಲಿ 50-50 ಅನುಪಾತ ಚರ್ಚೆ ನಡೆದಿತ್ತು. ಇದರ ಮಾಹಿತಿಯನ್ನು ಲೋಕಾಯುಕ್ತ ಟೀಂ ಸಂಗ್ರಹಿಸಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

> ಮುಡಾ ಕಚೇರಿಗೆ ಲೋಕಾಯುಕ್ತ ಎಸ್ಪಿ ಟಿ.ಜೆ ಉದೇಶ್ ನೇತೃತ್ವದ ತಂಡ ಭೇಟಿ ನೀಡಿ, 50:50 ಅನುಪಾತದ ಬಗ್ಗೆ ಚರ್ಚೆಯಾದ ಸಭೆಯ ಬಗ್ಗೆ ಮಾಹಿತಿ ಸಂಗ್ರಹಿಸಿದೆ. 2020ರ ನ.11ರಂದು ನಡೆದ ಸಭೆ ನಡಾವಳಿ ಪರಿಶೀಲಿಸಿ ಅಂದಿನ ಸಭಾ ನಡವಳಿ ಧ್ವನಿ ಸುರಳಿ ಕೇಳಿಸಿಕೊಂಡು ಅದರ ಮಾಹಿತಿಯನ್ನೂ ದಾಖಲಿಸಿಕೊಂಡಿದೆ.

• ಉದಯವಾಹಿನಿ, ಗೋಣಿಕೊಪ್ಪಲು

# ಹೆಚ್ಚಿದ ವನ್ಯಜೀವಿ ಹಾವಳಿ

ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ ಅವರ ಕೋಣನಕಟ್ಟೆಯ ತೋಟದ ಮನೆಯ ಮೇಲೆ ಬುಧವಾರ ನಸುಕಿನ ವೇಳೆ 3.30ರ ಹೊತ್ತಿನಲ್ಲಿ ದಾಳಿ ನಡೆಸಿರುವ ಕಾಡಾನೆ ಮನೆಯ ಆವರಣದಲ್ಲಿದ್ದ ಹೂಕುಂಡ ಮತ್ತಿತರ ವಸ್ತುಗಳನ್ನು ತುಳಿದು ಹಾನಿಗೊಳಿಸಿದೆ.

ಕಾಫಿ ತೋಟದ ಒಳಗೆ ನುಸುಳಿ ಬಂದಿರುವ ಕಾಡಾನೆ, ಅರಣ್ ಮಾಚಯ್ಯ ಅವರ ಗೋಡೌನ್‌ಗೆ ನುಗ್ಗಿ ಅಲ್ಲಿದ್ದ ಹಲಸಿನ ಕಾಯಿಯನ್ನು ತಿನ್ನಲು ಯತ್ನಿಸಿದೆ. ಆದರೆ ಕಿಟಕಿ ಮತ್ತು ಬಾಗಿಲುಗಳನ್ನು ಮುರಿದು ತಿನ್ನಲು ಸಾಧ್ಯವಾಗದಿದ್ದಾಗ ಸಿಟ್ಟಿನಿಂದ ಬಾಳೆ, ಆಂತೋರಿಯಂ ಮೊದಲಾದ ಹೂ ಕುಂಡಗಳನ್ನು ಸೊಂಡಿಲಿನಿಂದ ಬಿಸಾಕಿ ತುಳಿದು ಹಾಕಿದೆ. ಪಕ್ಕಲದಲ್ಲಿಯೇ ಅರುಣ್ ಮಾಚಯ್ಯ ಅವರ ಕಾರು ನಿಂತಿದ್ದರೂ ಅದಕ್ಕೆ ಯಾವುದೇ ಹಾನಿಗೊಳಿಸಿಲ್ಲ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮತ್ತೊಂದು ಕಾಡಾನೆ ಬೆಳಗಿನ ವೇಳೆ ತಿತಿಮತಿ ಪಟ್ಟಣಕ್ಕೆ ಬಂದು ಮುಖ್ಯ ರಸ್ತೆಯಲ್ಲಿ ಕೆಲ ಹೊತ್ತು ಓಡಾಡಿದೆ. ಇದರಿಂದ ಭಯಭೀತರಾದ ಜನತೆ ಹೆದರಿ ಅಂಗಡಿ ಮುಂಗಟ್ಟುಗಳನ್ನು ಸೇರಿದ್ದರು. ಬಳಿಕ ಆನೆ ಅರಣ್ಯ ಸೇರಿತು ಎಂದು ತಿತಿಮತಿ ಎಸಿಎಫ್ ಗೋಪಾಲ್ ತಿಳಿಸಿದರು.


ಉದಯವಾಹಿನಿ ಚಿತ್ರ

**ಚಿರತೆ ಸುಳಿವು:** ಪೊನ್ನಂಪೇಟೆ ಬಳಿಯ ಮತ್ತೂರಿನ ಸಾಯಿಶಂಕರ ವಿದ್ಯಾಸಂಸ್ಥೆಯ ರಸ್ತೆಯ ಪಕ್ಕದಲ್ಲಿ ಚಿರತೆ ಹಗಲಿನಲ್ಲಿಯೇ ಕಾಣಿಸಿಕೊಂಡು ಕಾರ್ಮಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಭಯ ಮೂಡಿಸಿದೆ. ವಿದ್ಯಾಸಂಸ್ಥೆ ಬಳಿಯ ರಸ್ತೆಯಲ್ಲಿ ಕಾಣಿಸಿಕೊಂಡ ಚಿರತೆ ಕಾಫಿ ತೋಟದ ಒಳಗೆ ನುಸುಳಿ ಮರೆಯಾಗಿಯಿತು ಎಂದು ಕಾರ್ಮಿಕರು ಆತಂಕದಿಂದ ಹೇಳಿದರು.

# ಮಿಮ್ಸ್‌ನಲ್ಲಿ ಅವ್ಯವಸ್ಥೆಯ ಆಗರ ಅಧಿಕಾರಿಗಳಿಗೆ ಡಿಸಿ ತೀವ್ರ ತರಾಟೆ

• ಉದಯವಾಹಿನಿ, ಮಂಡ್ಯ

ಬಡವರಿಗೆ ಕಡಿಮೆ ದುಡ್ಡಲ್ಲಿ ಉತ್ತಮ ಆರೋಗ್ಯ ಸೇವೆ ನೀಡುವುದು ಸರ್ಕಾರಿ ಆಸ್ಪತ್ರೆಗಳ ಕರ್ತವ್ಯ. ಆದ್ರೆ ಸರ್ಕಾರಿ ಆಸ್ಪತ್ರೆಗಳು ತನ್ನ ಜವಾಬ್ದಾರಿ ಮರೆತು ಜನರ ಜೀವದ ಜೊತೆ ಚೆಲ್ಲಾಟ ಆಡುತ್ತಿವೆ. ಮಂಡ್ಯದ ಮಿಮ್ಸ್ ಆಸ್ಪತ್ರೆ ಕೂಡ ಅವ್ಯವಸ್ಥೆ ಆಗರವಾಗಿದ್ದು, ಆಸ್ಪತ್ರೆಗೆ ದಿಢೀರ್ ಭೇಟಿ ಕೊಟ್ಟ ಜಿಲ್ಲಾಧಿಕಾರಿ ಅಲ್ಲಿನ ಬೇಜವಾಬ್ದಾರಿ ನಿರ್ವಹಣೆ ಕಂಡು ಶಾಕ್ ಆಗಿದ್ದಾರೆ. ಗಬ್ಬು ನಾರುತ್ತಿರುವ ವಾರ್ಡ್‌ಗಳು, ಎಲ್ಲೆಂದರಲ್ಲಿ ಬಿದ್ದ ಕಸದ ರಾಶಿ, ಬಾತ್‌ರೂಂ ಇಲ್ಲದ ಡೋರ್‌ಗಳು ಇಂತಹ ಅವ್ಯವಸ್ಥೆ ಕಂಡುಬಂದಿದ್ದು ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ. ಸದಾ ವಿವಾದಗಳಿಂದಲೇ ಸುದ್ದಿಗೆ ಬರುವ ಮಂಡ್ಯ ಮಿಮ್ಸ್‌ಗೆ ನಿನ್ನೆ ಜಿಲ್ಲಾಧಿಕಾರಿ ಡಾ.ಕುಮಾರ್ ದಿಢೀರ್ ಭೇಟಿ ಕೊಟ್ಟಿದ್ರು. ಆಸ್ಪತ್ರೆಯ ಅಶುಚಿತ್ವ, ಅಸಮರ್ಪಕ ನಿರ್ವಹಣೆಯನ್ನ ಕಣ್ಣಾರೆ ಕಂಡ ಡಿಸಿಗೆ ಒಂದು ಕ್ಷಣ ದಂಗುಬಡಿದಂತಾಯಿತು.


ಉದಯವಾಹಿನಿ ಚಿತ್ರ

ಹೀಗೆ ಆಸ್ಪತ್ರೆಯ ಹತ್ತು ಹಲವು ಸಮಸ್ಯೆಗಳನ್ನು ಕಣ್ಣಾರೆ ಕಂಡ ಡಿಸಿ ಕುಮಾರ ಅಕ್ಷರಶಃ ಸುಸ್ತಾಗಿ ಹೋದ್ರು. ಅಲ್ಲೇ ಇದ್ದ ಮಿಮ್ಸ್ ನಿರ್ದೇಶಕ ಡಾ. ನರಸಿಂಹಮೂರ್ತಿ, ಸೂಪರಿಂಟೆಂಡೆಂಟ್ ಡಾ.ಶಿವಕುಮಾರ್ ಅವರನ್ನ ತರಾಟೆಗೆ ತೆಗೆದುಕೊಂಡರು. ನೀವೆಲ್ಲಾ ಮನುಷ್ಯರ ಮೃಗಗಳಾ? ನಿಮ್ಮ ಮನೆಯನ್ನ ಹೀಗೆ ಇಟ್ಕೋತೀರಾ ಎಂದು ಅಧಿಕಾರಿಗಳ ಬೆವರಿಳಿಸಿದ್ರು.ಪರಿಶೀಲನೆ ಬಳಿಕ ಸಭೆ ನಡೆಸಿದ ಡಿಸಿ, ಆಸ್ಪತ್ರೆಯ ಸಮರ್ಪಕ ನಿರ್ವಹಣೆಗೆ ಸೂಚಿಸಿದ್ರು. ಜಿಲ್ಲಾಧಿಕಾರಿಗಳ ಮುಂದೆ ತಲೆಯಾಡಿಸಿದ ಅಧಿಕಾರಿಗಳು ಇನ್ಮುಂದಾದರೂ ಬಡವರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಕೆಲಸ ಮಾಡ್ತಾರಾ ಅನ್ನೋದೆ ಸದ್ಯದ ಪ್ರಶ್ನೆ.

> **ಜಿಲ್ಲಾಸ್ಪತ್ರೆಗೆ ಡಿಸಿ ಭೇಟಿ**
> ಜಿಲ್ಲಾಧಿಕಾರಿ ಡಾ. ಕುಮಾರ ಹೊರರೋಗಿಗಳ ವಿಭಾಗ, ಸರ್ಜರಿ ಹಾಗೂ ಪುರುಷರು, ಮಹಿಳೆಯರ ವಾರ್ಡ್ ಪರಿಶೀಲಿಸಿದರು. ಗಬ್ಬು ನಾರುತ್ತಿದ್ದ ವಾರ್ಡ್‌ಗಳು, ಎಲ್ಲೆಂದರಲ್ಲಿ ಬಿದ್ದಿದ್ದ ಹಾಸಿಗೆ, ಬೆಡ್‌ಶೀಟ್‌ಗಳು ಜಿಲ್ಲಾಧಿಕಾರಿಗಳ ಅಸಮಾಧಾನಕ್ಕೆ ಕಾರಣವಾಯಿತು. ಶೌಚಾಲಯದಲ್ಲಿ ನೀರು ಬಂದ್ ಆಗಿತ್ತು. ಮಹಿಳೆಯರ ಬಾತ್‌ರೂಂಗೆ ಬಾಗಿಲನ್ನು ಹಾಕಿಸದೇ ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವುದು ಈ ವೇಳೆ ಕಂಡುಬಂದಿತು.

# ಮುಡಾ ಕೇಸ್‌ನಲ್ಲಿ ಸಿಎಂ ತಪ್ಪು ಮಾಡಿಲ್ಲ, ಹೆಸರು ಹಾಳು ಮಾಡಲು ಕೇಂದ್ರ, ಬಿಜೆಪಿ ಷಡ್ಯಂತ್ರ

• ಉದಯವಾಹಿನಿ, ರಾಮನಗರ

ಸಿಎಂ ಹೆಸರು ಹಾಳು ಮಾಡಲು ಕೇಂದ್ರ, ಬಿಜೆಪಿ ಷಡ್ಯಂತ್ರ ಮಾಡುತ್ತಿದೆ. ತನಿಖಾ ಅಧಿಕಾರಿಗಳಿಗೆ ಕೇಂದ್ರ, ಬಿಜೆಪಿ ಒತ್ತಡ ಹಾಕುತ್ತಿದೆ. ಇದರಲ್ಲಿ ಸಿಎಂ ಹೆಸರು ಹೇಳಿ ಎಂದು ಮುಡಾ ಅಧಿಕಾರಿಗಳಿಗೆ ಧಮ್ಕಿ ಹಾಕುತ್ತಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಮುಡಾ ಕೇಸ್‌ನಲ್ಲಿ ಸಿಎಂ ಕುಟುಂಬಕ್ಕೆ ಲೋಕಾಯುಕ್ತ ಕ್ಲೀನ್ ಚಿಟ್ ಕೊಟ್ಟಿರೊ ವಿಚಾರ ಕುರಿತು ರಾಮನಗರ ತಾಲ್ಲೂಕಿನ ಮಂಚೇಗೌಡನಪಾಳ್ಯ ಗ್ರಾಮದಲ್ಲಿ ಮಾತನಾಡಿದ ಅವರು, ತಪ್ಪು ಮಾಡಿದ್ರೆ, ತಾನೇ ತಪ್ಪು ಅಂತ ಹೇಳೋದು. ನಮ್ಮ ಮುಖ್ಯಮಂತ್ರಿಗಳು ಯಾವುದೇ ತಪ್ಪು ಮಾಡಿಲ್ಲ. ಮುಡಾ ವಿಚಾರದಲ್ಲಿ ನಾವು ಸ್ಪಷ್ಟವಾಗಿದ್ದೇವೆ. ಈಗಾಗಲೇ ಇ.ಡಿ ತನಿಖೆ ಮಾಡುತ್ತಿದೆ. ಮೊನ್ನೆ 300 ಕೋಟಿ ಎಂದು ಹೇಳಿದ್ದರು.

ಇನ್ನೂ ಕಾಂಗ್ರೆಸ್‌ನಲ್ಲಿ ಪವರ್ ಶೇರಿಂಗ್ ಚರ್ಚೆ ವಿಚಾರ ಕುರಿತು ಮಾತನಾಡಿ, ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ.

ನಮ್ಮ ರಾಷ್ಟ್ರೀಯ ಅಧ್ಯಕ್ಷರು ಈ ಬಗ್ಗೆ ಯಾವುದೇ ಹೇಳಿಕೆ ನೀಡದಂತೆ ತಿಳಿಸಿದ್ದಾರೆ. ಏನೇ ಸಮಸ್ಯೆ ಇದ್ದರೂ ಬಗೆಹರಿಸಿಕೊಂಡು ಒಟ್ಟಾಗಿ ಹೋಗುತ್ತೇವೆ. ಬಿಜೆಪಿಯ ಗೊಂದಲಕ್ಕೂ, ನಮಗೂ ಹೋಲಿಕೆ ಮಾಡಬೇಡಿ. ಚುನಾವಣೆ ಪೂರ್ವದಲ್ಲೂ ನಮ್ಮಲ್ಲಿ ಬಣ ರಾಜಕೀಯ ಎಂದು ಚರ್ಚೆ ಮಾಡಿದ್ದರು. ಆದರೆ ಚುನಾವಣೆಯಲ್ಲಿ ಒಟ್ಟಾಗಿ ಕೆಲಸ ಮಾಡಿ ಬಹುಮತ ತೆಗೆದುಕೊಂಡಿಲ್ವಾ? ನಾವು ಈಗಲೂ ಒಟ್ಟಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ.

ನಾವು ಪವರ್‌ನಲ್ಲಿದ್ದೀವೆ, ನಮ್ಮಲ್ಲಿ ಪವರ್ ಶೇರಿಂಗ್ ಮುಖ್ಯ ಅಲ್ಲ. ಈಗ ಬಿಜೆಪಿಯವರ ಪರಿಸ್ಥಿತಿ ನೋಡಿ ಯಾವ ಮಟ್ಟಕ್ಕೆ ಹೋಗಿದೆ? ಒಬ್ಬರನ್ನು ಕಂಡರೆ ಒಬ್ಬರಿಗೆ ಆಗಲ್ಲ, ಎಲ್ಲರೂ ಹೊಡೆದಾಡಿಕೊಳ್ಳುತ್ತಿದ್ದಾರೆ ಎಂದು ತಿರುಗೇಟು ನೀಡಿದರು.



> ಸಿಎಂಗೂ ಅದಕ್ಕೂ ಸಂಬಂಧ ಇದ್ಯಾ? ಸುಖಾಸುಮ್ಮನೆ ಎಲ್ಲದಕ್ಕೂ ಸಿಎಂ ಹೆಸರು ತಳುಕು ಹಾಕೋದು ಸರಿಯಲ್ಲ. ಐಟಿ, ಇ.ಡಿ ಅಧಿಕಾರಿಗಳು ಬಿಜೆಪಿ ಪಕ್ಷದ ಕೈಗೊಂಬೆಗಳಾಗಿವೆ. ಹಿಂದೆ ಡಿಕೆಶಿ ವಿರುದ್ಧವೂ ಷಡ್ಯಂತ್ರ ಮಾಡಿದ್ದರು. ಬಿಜೆಪಿಯವರು ಪ್ರಜಾಪ್ರಭುತ್ವ ವಿರೋಧಿಗಳು. ವಿರೋಧಿಗಳನ್ನು ಮುಗಿಸುವ ಹುನ್ನಾರ, ಇದಕ್ಕೆಲ್ಲ ತಕ್ಕ ಉತ್ತರ ಕೊಟ್ಟು ಗಟ್ಟಿಯಾಗಿ ನಿಲ್ಲುತ್ತೇವೆ ಎಂದರು

• ಉದಯವಾಹಿನಿ, ಶನಿವಾರಸಂತೆ

# ಗುಡುಗಳಲೆ ಜಯದೇವ ಜಾನುವಾರು ಜಾತ್ರೆಗೆ ಚಾಲನೆ

ಜಾತ್ರೋತ್ಸವಗಳು ಸಂಸ್ಕೃತಿಯ ಪ್ರತೀಕ. ಆದರೆ, ಇಂದಿನ ವೈಜ್ಞಾನಿಕ ಭರಾಟೆಯಲ್ಲಿ ಹಿಂದಿನ ಜಾತ್ರೋತ್ಸವಗಳ ವೈಭವ ಮರೆಯಾಗುತ್ತಿದೆ ಎಂದು ಕೊಡ್ಲಿಪೇಟೆ ಕಿರಿಕೊಡ್ಲಿ ಮಠಾಧೀಶ ಸದಾಶಿವ ಸ್ವಾಮೀಜಿ ಅಭಿಪ್ರಾಯಪಟ್ಟರು. ಇಲ್ಲಿನ ಹಂಡ್ಲಿ ಗ್ರಾಮ ಪಂಚಾಯಿತಿಗೆ ಸೇರಿದ ಗುಡುಗಳಲೆ ಜಾತ್ರಾ ಮೈದಾನದಲ್ಲಿ 81ನೇ ವರ್ಷದ ಗುಡುಗಳಲೆ ಜಯದೇವ ಜಾನುವಾರುಗಳ ಜಾತ್ರೆಯ ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೆ ಈಗಿನಂತೆ ಮನರಂಜನೆಗಾಗಿ ಮಾಧ್ಯಮ ಸಂಪರ್ಕ ಸಾಧನಗಳು ಇಲ್ಲದಂತಹ ಕಾಲದಲ್ಲಿ ಸುಗ್ಗಿಯ ಕಾಲದಲ್ಲಿ ಜಾತ್ರೆ, ಉತ್ಸವಗಳನ್ನು ಆಚರಣೆ ಮಾಡುವ ಮೂಲಕ ಜನರಿಗೆ ಸಾಂಸ್ಕೃತಿಕ ಮನರಂಜನೆಯ ಜೊತೆಯಲ್ಲಿ ವಿಚಾರ ವಿನಿಮಯಗಳಾಗುತ್ತಿದ್ದವು ಎಂದರು. ಗುಡುಗಳಲೆ ಜಾನುವಾರುಗಳ ಜಾತ್ರೆಯಲ್ಲಿ ಜಾನುವಾರುಗಳು ಸೇರುವುದು ಕಡಿಮೆಯಾಗುತ್ತಿದ್ದರೂ, ಜಾತ್ರಾ ಸಮಿತಿಯವರು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾತ್ರೆಯನ್ನು ನಶಿಸಲು ಬಿಡುತ್ತಿಲ್ಲ ಎಂದು ಶ್ಲಾಘಿಸಿದರು ಕಲ್ಲುಮಠದ ಮಹಾಂತ ಸ್ವಾಮೀಜಿ ಮಾತನಾಡಿ, ಇದೀಗ ಎಲ್ಲರೂ ವಿದ್ಯಾವಂತರಾಗುತ್ತಿದ್ದಾರೆ ಮತ್ತು ಸಮಾಜ ವೈಜ್ಞಾನಿಕವಾಗಿಯೂ ಬೆಳವಣಿಗೆಯಾಗುತ್ತಿದೆ. ಆದರೆ, ಸಂಸ್ಕಾರ ಕಡಿಮೆಯಾಗುತ್ತಿದೆ.

ಮನೆಯಲ್ಲಿ ಮಕ್ಕಳು ವಿದ್ಯಾವಂತರಾಗುತ್ತಿದ್ದರೆ, ಮನೆಯ ಹಿರಿಯರು ವೃದ್ಧಾಶ್ರಮ ಸೇರಿಕೊಳ್ಳುತ್ತಿರುವುದು ದುರಂತ' ಎಂದು ಬೇಸರ ವ್ಯಕ್ತಪಡಿಸಿದರು. ಜಾನುವಾರುಗಳ ಜಾತ್ರೆಯು ಜನವಾರು ಜಾತ್ರೆಗಳಾಗಿ ಮಾರ್ಪಾಡಾಗುತ್ತಿರುವ ಸಮಯದಲ್ಲಿ ಜಾತ್ರಾ ಸಮಿತಿಯವರು ಜಾತ್ರೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಶ್ಲಾಘನಿಯ ಎಂದರು.

ಜಾತ್ರಾ ಸಮಿತಿ ಅಧ್ಯಕ್ಷ ಎಚ್.ಎಸ್.ಅಶೋಕ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಾತ್ರೆಯನ್ನು ಹಿಂದಿನ ವೈಭವವನ್ನು ಮರುಕಳಿಸಲು ಪ್ರಯತ್ನಿಸುವ ಕಾರ್ಯದಲ್ಲಿ ಜಾತ್ರಾ ಸಮಿತಿಗೆ ಗ್ರಾಮಸ್ಥರು ಮತ್ತು ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದರು. ಸಮಾರಂಭವನ್ನು ಶನಿವಾರಸಂತೆ ಎಸ್‌ಐ ಎಚ್.ವೈ. ಚಂದ್ರ, ಉದ್ಘಾಟಿಸಿ ಶುಭ ಕೋರಿದರು.


ಉದಯವಾಹಿನಿ ಚಿತ್ರ

# ಗ್ರಾಮೀಣರ ಖರ್ಜೂರ 'ಈಚಲು'

• ಉದಯವಾಹಿನಿ, ಯಳಂದೂರು

ಇಲ್ಲಿನ ಗ್ರಾಮೀಣ ಭಾಗ, ಗುಡ್ಡಗಾಡು ಪ್ರದೇಶ, ರಸ್ತೆ ಬದಿ ಹಾಗೂ ಬಂಜರು ಭೂಮಿಗಳಲ್ಲಿ ಈಚಲ ಮರಗಳಲ್ಲಿ ಹಣ್ಣಿನ ಗೊಂಚಲು ತೂಗುತ್ತಿದೆ. ಕಾಯಿ ಹಂತದಲ್ಲಿ ಹಸಿರು, ಬಲಿತಾಗ ಕೆಂಪು, ಹಣ್ಣಾದಾಗ ಹಳದಿ ಬಣ್ಣದ ಗೊಂಚಲು ಈಚಲು ಫಲ ಪ್ರಿಯರ ಬಾಯಲ್ಲಿ ನೀರೂರಿಸುತ್ತದೆ. ನಿಸರ್ಗದತ್ತವಾಗಿ ಬೆಳೆದು ಸಮೃದ್ಧ ಫಸಲು ನೀಡುವ ಈಚಲ ವೃಕ್ಷಗಳು ಹತ್ತಾರು ಕಾರಣಕ್ಕೆ ಮಹತ್ವ ಪಡೆದಿವೆ. ತಾಲ್ಲೂಕಿನಲ್ಲಿ ಈಚಲು ಅಳಿಲಿನಂಚಿನಲ್ಲಿವೆ. ಜನವರಿ-ಏಪ್ರಿಲ್ ನಡುವೆ ಹಣ್ಣು ನೀಡುತ್ತವೆ. ಬಯಲು ಸೀಮೆ, ಪಟ್ಟಣಿಗರ ಬಾಯಿ ರುಚಿ ತಣಿಸುವ ಈಚಲ ಹಣ್ಣನ್ನು ಮಕ್ಕಳು ಮತ್ತು ವೃದ್ಧರು ಇಷ್ಟಪಟ್ಟು ಸವಿದರೆ, ಕೆಲವರು ಬುಟ್ಟಿಯಲ್ಲಿ ತುಂಬಿ ಮಾರಾಟ ಮಾಡುತ್ತಾರೆ. ಜನವರಿ - ಏಪ್ರಿಲ್ ಸಮಯ ಕಾಫಿ ವರ್ಣಕ್ಕೆ ತಿರುಗಿದಾಗ ಕೊಯಿಲು ಮಾಡಲಾಗುತ್ತದೆ. ಹಣ್ಣು ಪಕ್ವವಾದಾಗ ನೆಲಕ್ಕೆ ಬೀಳುತ್ತದೆ. ವಿದ್ಯಾರ್ಥಿಗಳು ಭೂಮಿಗೆ ಬಿದ್ದ ಹಣ್ಣು ಶೇಖರಿಸಿ ಸಹಪಾಠಿಗಳಿಗೆ ಹಂಚುವುದೂ ಇದೆ. ಈಚಲು ಮರ ಒರಟಾಗಿದ್ದು, ಹತ್ತುವುದು, ಇಳಿಯುವುದು ಕಷ್ಟ. ಎಂತಲೇ ಹಿರಿಯರು ದೋಟಿ ಬಳಸಿ ಈಚಲು ತಾರನ್ನು ಇಳಿಸುತ್ತಾರೆ. ನಂತರ ಮನೆಯಲ್ಲಿ ಇಟ್ಟು ಹಣ್ಣಾದ ನಂತರ ಬಿಡಿಸಿ ಮನೆಮಂದಿಗೆ ನೀಡುತ್ತಾರೆ.

# ಜಿಲ್ಲೆಯಲ್ಲಿ ಏನ್ ನಡೀತಿದೆ ಅನ್ನೋದೇ ಗೊತ್ತಾಗ್ತಿಲ್ಲ

## ತುಮಕೂರು ಕಾಂಗ್ರೇಸ್‌ನಲ್ಲಿ ಭಿನ್ನಮತ ಸ್ಫೋಟ: ಆ ಇಬ್ಬರು ಸಚಿವರ ವಿರುದ್ಧ ಶಾಸಕ ಶ್ರೀನಿವಾಸ್ ಬೇಸರ

• ಉದಯವಾಹಿನಿ, ತುಮಕೂರು



ಶಾಸಕ ಎಸ್.ಆರ್ ಶ್ರೀನಿವಾಸ್ ಪತ್ನಿಗೆ ತುಮುಲ್ ಅಧ್ಯಕ್ಷ ಸ್ಥಾನ ಕೈ ತಪ್ಪಿದ್ದು, ಇಬ್ಬರು ಸಚಿವರ ವಿರುದ್ಧ ಶಾಸಕ ಶ್ರೀನಿವಾಸ್ ಅಸಮಾಧಾನ ಹೊರ ಹಾಕಿದ್ದಾರೆ. ಸಚಿವ ಪರಮೇಶ್ವರ್, ಕೆಎನ್ ರಾಜಣ್ಣ ವಿರುದ್ಧ ಶಾಸಕ ಎಸ್ ಆರ್ ಶ್ರೀನಿವಾಸ್ ಅಸಮಾಧಾನ ಹೊರ ಹಾಕಿದ್ದಾರೆ.

ತುಮಕೂರಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ತುಘಲಕ್ ಆಡಳಿತ ನಡೆಸುತ್ತಿದ್ದಾರೆ, ಇಬ್ಬರು ಸಚಿವರಿಂದ ತುಘಲಕ್ ಆಡಳಿತ, ಜಿಲ್ಲೆಯಲ್ಲಿ ಏನ್ ನಡೀತಿದೆ ಅನ್ನೋದೇ ಗೊತ್ತಾಗ್ತಿಲ್ಲ.

ಇಬ್ಬರು ಮಂತ್ರಿಗಳು ಸೇರಿಕೊಂಡು ಏನ್ ಮಾಡ್ಬೇಕು ಅದನ್ನ ಮಾಡ್ತಿದ್ದಾರೆ. ನಮ್ಮನ್ನ ಮೀಟಿಂಗ್‌ಗೂ ಸಹ ಕರಿತಿಲ್ಲ. ಏನ್ ಮಾಡ್ತಿವಿ ಅಂತ ನಮ್ಮನ್ನ ಕೇಳ್ತಿಲ್ಲ. ತುಘಲಕ್ ಆಡಳಿತ ಜಿಲ್ಲೆಯಲ್ಲಿ ನಡೆಯುತ್ತಿದೆ ಎಂದು ಕಿಡಿಕಾರಿದರು.

ಇಬ್ಬರು ಸಚಿವರ ವರ್ತನೆ ಬಗ್ಗೆ ನಾನು ಸಿಎಂ ಗಮನಕ್ಕೆ ತಂದಿದ್ದೆ. ಸಹಕಾರ ಸಚಿವ ಹಾಗೂ ಗೃಹ ಸಚಿವರಿಗೆ ಹೇಳ್ತಿನಿ ಅಂತ ಹೇಳಿದ್ರು. ಜಿಲ್ಲೆಯಲ್ಲಿ ಯಾರದ್ದು ನಡಿತಿದೆ, ಏನ್ ನಡಿತಿದೆ ಯಾರಿಗೂ ಗೊತ್ತಾಗ್ತಿಲ್ಲ.

ಅಧ್ಯಕ್ಷರ ಆಯ್ಕೆ ಬಗ್ಗೆ ಜಿಲ್ಲೆಯಲ್ಲಿ ಒಬ್ಬರನ್ನು ಮಾತಾಡಿಸಿಲ್ಲ. ಇದು ಒಂಥರ ತುಘಲಕ್ ದರ್ಬಾರ್ ನಡಿತಿದೆ. ಎಲ್ಲರನ್ನೂ ನಿರ್ಲಕ್ಷ್ಯ ಮಾಡಿದ್ದಾರೆ. ಯಾವ ಶಾಸಕರ ಬಳಿಯೂ ಮಾತಾಡಿಲ್ಲ. ಇವರಿಬ್ಬರಿದ್ದರೆ ಸಾಕು ಇಡೀ ಜಿಲ್ಲೆಯನ್ನೇ ಕಂಟ್ರೋಲ್ ಮಾಡ್ತಾರೆ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ 11ಕ್ಕೆ 11 ಗೆಲ್ಲಿಸಿಕೊಂಡು ಬರ್ತಾರೆ. ಬೇರೆಯವರು ಯಾರು ಬೇಡ, ಇವರಿಬ್ಬರು ಇದ್ರೆ ಎಲ್ಲಾ ಆಗಿಹೋಗುತ್ತೆ. ನಾವು ಶಾಸಕರಿದ್ದೇವೆ, ನಮ್ಮನ್ನ ಕೇಳಲಿಲ್ಲವಲ್ಲ ಅನ್ನೋದು ನಮಗೆ ಅಸಮಾಧಾನ ಇದೆ ಎಂದರು. ಮೊನ್ನೆ ಸಿಎಲ್‌ಪಿ ಮೀಟಿಂಗ್ ಇತ್ತು. ಆ ಮೀಟಿಂಗ್ ಬಳಿಕ ಎಲ್ಲರೂ ಸೇರಿ ಗೃಹ ಸಚಿವ ಪರಮೇಶ್ವರ್ ಜೊತೆ ಮಾತಾಡಿದ್ದೇವೆ, ರಾಜಣ್ಣ ಸಹ ಇದ್ರು, ಮೀಟಿಂಗ್ ಕರೆಯುತ್ತೇವೆ ಅಂದ್ರು, ರಾಜಣ್ಣ ನಾನು ಬರ್ತಿನಿ ಅಂದ್ರು. ಅದಾದ ಮೇಲೆ ಎಲ್ಲಿದ್ದೀರಾ..? ಯಾರು, ಏನು ಒಂದು ಗೊತ್ತಿಲ್ಲ. ಸರ್ಕಾರದ ವಿರುದ್ಧ ನನ್ನ ಅಸಮಾಧಾನ ಇಲ್ಲ. ಸಚಿವರ ವಿರುದ್ಧವೂ ಅಸಮಾಧಾನ ಇಲ್ಲ. ಅವರ ನಡವಳಿಕೆ ವಿರುದ್ಧ ಅಸಮಾಧಾನ ಇರೋದು. ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು ಅಲ್ವಾ., ನಮ್ಮಿಂದ ತಾನೆ ಇವರು ಗೆದ್ದು ಮಿನಿಸ್ಟರ್ ಆಗಿದ್ದು. ವೆಂಕಟೇಶ್ ನಾ ನಾಮಿನಿ ಮಾಡ್ತಿವಿ ಅಂತ ಒಂದು ಮಾತು ಕೇಳ್ಬೇಕಿತ್ತು ಅಲ್ವಾ ಎಂದು ಬೇಸರ ಹೊರ ಹಾಕಿದರು.

ಮುಂದೆ ಡಿಸಿಸಿ ಬ್ಯಾಂಕ್ ಚುನಾವಣೆ ಬರುತ್ತೆ. ಯಾರಾದ್ರು ಒಬ್ಬ ಎಡಗೈ ಸಮುದಾಯದವರನ್ನ ಅಧ್ಯಕ್ಷರನ್ನಾಗಿ ಮಾಡಿದ್ರೆ. ಇವರು ಸಾಮಾಜಿಕ ನ್ಯಾಯದ ಹರಿಕಾರರು ಅಂತ ನಾನು ಅಂದುಕೊಳ್ತಿನಿ, ನಾನು ಸ್ವಾಗತ ಮಾಡ್ತಿನಿ.

> ರಾಜಣ್ಣ ನಾನು ಬರ್ತಿನಿ ಅಂದ್ರು

> **ಸರ್ಕಾರದ್ದು ಏನು ಪಾತ್ರ ಇಲ್ಲ**
> ಜಿಲ್ಲೆಯಲ್ಲಿ ಎರಡು ಮೀಸಲು ಕ್ಷೇತ್ರ ಇದೆ. ಆ ಮೀಸಲು ಕ್ಷೇತ್ರದಲ್ಲಿ ಒಬ್ಬರು ಭೋವಿ ಜನಾಂಗ. ಮತ್ತೊಬ್ಬರು ಬಲಗೈ ಜನಾಂಗ ಗೆದ್ದಿದ್ದಾರೆ. ಎಡಗೈ ನವರು ಇನ್ನು ಶೋಷಿತರಾಗಿಯೇ ಇದ್ದಾರೆ. ಈ ಸಮುದಾಯಕ್ಕೆ ನ್ಯಾಯ ಸಿಗ್ಬೇಕು ಅಂದ್ರೆ, ಮುಂದಿನ ದಿನಗಳಲ್ಲಿ ಡಿಸಿಸಿ ಬ್ಯಾಂಕ್ ಗೆ ನಾಮಿನಿ ಮಾಡಿ ಅಧ್ಯಕ್ಷ ಸ್ಥಾನ ಕೊಡಬೇಕು. ಸರ್ಕಾರದ್ದು ಇದರಲ್ಲಿ ಏನು ಪಾತ್ರ ಇಲ್ಲ ಎಂದರು.

> ಪರಮೇಶ್ವರ್‌ಗೆ ಫೋನ್ ಮಾಡಿ ಏನ್ ಹೇಳ್ಬೇಕು ಅದನ್ನೆಲ್ಲಾ ಹೇಳಿದಿನಿ, ಆ ಇಬ್ಬರು ಸಾಮಾಜಿಕ ನ್ಯಾಯ ಕೊಡೋ ಹರಿಕಾರರು. ಎಡಗೈ ಜನಾಂಗಕ್ಕೆ ಅನ್ಯಾಯ ಆಗಿದೆ. ಇಡೀ ಜಿಲ್ಲೆಯಲ್ಲಿ ಎಸ್‌ಟಿ, ಭೋವಿಗಳನ್ನ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಬಲಗೈ ಸಮುದಾಯದವರು ಮಿನಿಸ್ಟರ್ ಇದ್ದಾರೆ. ಲಿಂಗಾಯತರು, ಒಕ್ಕಲಿಗರು ಎಂಎಲ್‌ಎಗಳು ಇದ್ದಾರೆ, ಅನ್ಯಾಯ ಆಗಿರೋದು ಹಿಂದುಳಿದ ವರ್ಗ ಎಡಗೈ ಸಮುದಾಯಕ್ಕೆ ಎಂದು ಹೇಳಿದರು.

# ಮಿನಿ ನ್ಯೂಸ್

## ಖಾಸಗಿ ಫೈನಾನ್ಸ್‌ಗಳಿಂದ ವಂಚನೆ

• ಉದಯವಾಹಿನಿ, ಮಂಡ್ಯ

ಒಂದೆಡೆ, ಬಡ ಮತ್ತು ಮಧ್ಯಮ ವರ್ಗದವರಿಗೆ ಖಾಸಗಿ ಫೈನಾನ್ಸ್‌ಗಳ ಕಿರುಕುಳ ಹೆಚ್ಚಾಗುತ್ತಿದೆ. ಮತ್ತೊಂದೆಡೆ, ಖಾಸಗಿ ಹಣಕಾಸು ಸಂಸ್ಥೆಗಳನ್ನು ನಂಬಿ ಹಣ ಹೂಡಿಕೆ ಮಾಡಿ, ವಂಚನೆಗೊಳಗಾದ ಲಕ್ಷಾಂತರ ಗ್ರಾಮೀಣ ಮಹಿಳೆಯರು ಕಣ್ಣೀರಿಡುತ್ತಿದ್ದಾರೆ. ರಾಜ್ಯದ ಖಾಸಗಿ ಹಣಕಾಸು ಸಂಸ್ಥೆ ಮತ್ತು ಕಂಪನಿಗಳಿಗೆ 'ಅನಿಯಂತ್ರಿತ ಠೇವಣಿ' (ಅನ್‌ರೆಗ್ಯುಲೇಟೆಡ್ ಡೆಪಾಸಿಟ್) ಯೋಜನೆಗಳ ಅಡಿ ಹಣ ಹೂಡಿಕೆ ಮಾಡಿ ವಂಚನೆಗೊಳಗಾದ ಸಂತ್ರಸ್ತೆಯರಿಂದ 7.80 ಲಕ್ಷಕ್ಕೂ ಹೆಚ್ಚು ದೂರು ಅರ್ಜಿಗಳು ರಾಜ್ಯದ ವಿವಿಧ ಜಿಲ್ಲಾಧಿಕಾರಿ ಕಚೇರಿಗಳಿಗೆ ಸಲ್ಲಿಕೆಯಾಗಿವೆ.

## ವಿಶ್ವನಂದನ ಉದ್ಯಾನದ ಬಳಿ ಚಿರತೆ ಕಂಡ ವದಂತಿ: ಕಾರ್ಯಪಡೆ ಪರಿಶೀಲನೆ

• ಉದಯವಾಹಿನಿ, ಮೈಸೂರು

ಕುವೆಂಪುನಗರದ ವಿಜಯ ಬ್ಯಾಂಕ್ ವೃತ್ತ ಸಮೀಪದ ವಿಶ್ವನಂದನ ಉದ್ಯಾನದ ಬಳಿ ಗುರುವಾರ ಮುಂಜಾನೆ ಚಿರತೆ ಕಾಣಿಸಿಕೊಂಡ ವದಂತಿ ಕಾರಣ, ಚಿರತೆ ಕಾರ್ಯಪಡೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಪಕ್ಕದ ಖಾಲಿ ಮನೆಯಲ್ಲಿ ಬೆಳಿಗ್ಗೆ 5.30ರ ಸುಮಾರಿಗೆ ಚಿರತೆ ಕೂಗಿದ್ದರಿಂದ ಬೀದಿ ನಾಯಿಗಳು ಬೊಗಳುತ್ತಿದ್ದವು. ತಾಯಿ ಅವರು ನೋಡಲು ಬಂದಾಗ ಅದು ಅಲ್ಲಿಂದ ಪರಾರಿ ಆಗಿದೆ ಎಂದು ಇಲ್ಲಿನ ನಿವಾಸಿ ಮಂಜುನಾಥ್ ತಿಳಿಸಿದರು. ಬೆಳಿಗ್ಗೆ 7 ಗಂಟೆಗೆ ಧಾವಿಸಿದ ಕಾರ್ಯಪಡೆ ಸಿಬ್ಬಂದಿ ಗಂಟೆಗೂ ಹೆಚ್ಚು ಕಾಲ ಪರಿಶೀಲಿಸಿದರು. ಹೆಜ್ಜೆ ಗುರುತು, ಸುಳಿವು ಪತ್ತೆ ಆಗಿಲ್ಲ. ಉದ್ಯಾನದ ಸುತ್ತಮುತ್ತಲ ಮನೆಗಳ ಸಿಸಿಟಿವಿ ಕ್ಯಾಮೆರಾಗಳನ್ನು ನೋಡಲಾಗುವುದು. ಕಂಡು ಬಂದಿದ್ದರೆ, ಮತ್ತೆ ಬಂದು ಪರಿಶೀಲಿಸುತ್ತೇವೆ' ಎಂದು ಕಾರ್ಯಪಡೆ ಸಿಬ್ಬಂದಿಯೊಬ್ಬರು ತಿಳಿಸಿದರು.

## ಗ್ಯಾಸ್ ಬಂಕ್ ಘಟಕಕ್ಕೆ ಗ್ರಾಮಸ್ಥರ ಮುತ್ತಿಗೆ

• ಉದಯವಾಹಿನಿ, ಕುಶಾಲನಗರ

ತಾಲ್ಲೂಕಿನ ಕೂಡೂರು ಕೈಗಾರಿಕಾ ಬಡಾವಣೆಯಲ್ಲಿ ನೂತನವಾಗಿ ಆರಂಭಗೊಳ್ಳುತ್ತಿರುವ ಖಾಸಗಿ ಸಿಎನ್‌ಜಿ ಘಟಕದಿಂದ ಅನಿಲ ಸೋರಿಕೆ ಉಂಟಾಗಿದೆ ಎಂದು ಆರೋಪಿಸಿ ಗ್ರಾಮಸ್ಥರು ಬಂಕ್ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಮಂಗಳವಾರ ಸಂಜೆ ಅನಿಲ ಸೋರಿಕೆ ಉಂಟಾಗಿ ಸುತ್ತಮುತ್ತಲಿನ ಪ್ರದೇಶಗಳಿಗೆ ವ್ಯಾಪಿಸಿ ನಿವಾಸಿಗಳಿಗೆ ಅಸ್ವಸ್ಥತೆ ಕಾಡಿದೆ ಎಂದು ನಿವಾಸಿಗಳು ದೂರಿದ ಹಿನ್ನೆಲೆಯಲ್ಲಿ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ತಹಶೀಲ್ದಾರ್ ಕಿರಣ್ ಗೌರಯ್ಯ ಭೇಟಿ ನೀಡಿ ಪರಿಶೀಲಿಸಿದರು.

ಘಟಕದ ಸಿಬ್ಬಂದಿಯಿಂದ ಮಾಹಿತಿ ಪಡೆದರು. ಇದೇ ಸಂದರ್ಭ ಗ್ರಾಮಸ್ಥರ ಸಮಸ್ಯೆ ಆಲಿಸಿದರು. ಈ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭ ಕೂಡುಮಂಗಳೂರು ಗ್ರಾಮ ಪಂಚಾಯತಿ ಅಧ್ಯಕ್ಷ ಭಾಸ್ಕರ್ ನಾಯಕ್, ಸದಸ್ಯರಾದ ಮಂಜುನಾಥ್, ಮಣಿಕಂಠ, ಭೋಗಪ್ಪ, ಚಂದ್ರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಂತೋಷ್, ಕಂದಾಯಾಧಿಕಾರಿ ಸಂತೋಷ್ ಮತ್ತು ಗ್ರಾಮಸ್ಥರು ಇದ್ದರು.

## ಜಯದೇವ ಹೃದ್ರೋಗ, ಸಂಶೋಧನಾ ಸಂಸ್ಥೆ ಆಸ್ಪತ್ರೆಯಲ್ಲಿ ದುಬಾರಿ ಶುಲ್ಕ

• ಉದಯವಾಹಿನಿ, ಮೈಸೂರು

ಇಲ್ಲಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ಆಸ್ಪತ್ರೆ ಆವರಣದಲ್ಲಿ 'ವಾಹನಗಳ ನಿಲುಗಡೆ ಶುಲ್ಕ' ದುಬಾರಿ ಆಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಸರ್ಕಾರಿ ಆಸ್ಪತ್ರೆಯಾದ ಇಲ್ಲಿಗೆ ಹೃದ್ರೋಗಕ್ಕೆ ಸಂಬಂಧಿಸಿದ ಚಿಕಿತ್ಸೆಗೆ, ಸಮಾಲೋಚನೆಗೆ, ತಪಾಸಣೆಗೆ, ದಾಖಲಾತಿಗಳನ್ನು ಪಡೆಯುವುದಕ್ಕೆ ಸೇರಿದಂತೆ ವಿವಿಧ ಕೆಲಸಗಳಿಗಾಗಿ ನಿತ್ಯ ನೂರಾರು ಮಂದಿ ಬರುತ್ತಾರೆ. ರೋಗಿಗಳೊಂದಿಗೆ ಅವರ ಕಡೆಯವರು, ಪೋಷಕರು, ಸ್ನೇಹಿತರು ಜತೆಗೆ ಆಗಮಿಸುತ್ತಾರೆ.

ಮೈಸೂರು ನಗರ, ಜಿಲ್ಲೆಯವರೊಂದಿಗೆ ನೆರೆಯ ಚಾಮರಾಜನಗರ, ಮಂಡ್ಯ, ಕೊಡಗು ಮೊದಲಾದ ಕಡೆಗಳಿಂದಲೂ ಇಲ್ಲಿಗೆ ರೋಗಿಗಳು ಬರುತ್ತಾರೆ. ಹೀಗೆ, ಬಂದವರು ಸ್ವಂತ ವಾಹನ ತಂದಿದ್ದರೆ ಪಾರ್ಕಿಂಗ್ ಶುಲ್ಕದ ಹೊರೆಯನ್ನು ಹೊರಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ'ನಗರದ ಖಾಸಗಿ ಆಸ್ಪತ್ರೆಗಳ ಆವರಣದಲ್ಲಿ ವಿಧಿಸುವ ಶುಲ್ಕಕ್ಕಿಂತಲೂ ಹೆಚ್ಚಿನ ಶುಲ್ಕವನ್ನು ಇಲ್ಲಿ ಟೆಂಡರ್ ಪಡೆದಿರುವವವರು ತೆಗೆದುಕೊಳ್ಳುತ್ತಿದ್ದಾರೆ. ಜಿಎಸ್‌ಟಿ ಸೇರಿಸಿ ಶುಲ್ಕ ವಿಧಿಸಲಾಗುತ್ತಿದೆ ಎಂದು ಫಲಕದಲ್ಲಿ ಹಾಕಲಾಗಿದೆ. ಆದರೆ, ಇದನ್ನು ಆಸ್ಪತ್ರೆಯ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಾರದೇ ಕೇಂದ್ರ ಕಚೇರಿಯಿಂದಲೇ ಟೆಂಡರ್ ಮಾಡಿ ಶುಲ್ಕ ನಿಗದಿಪಡಿಸಲಾಗಿದೆ ಎನ್ನಲಾಗುತ್ತಿದೆ.

## ರಾಜಾಸೀಟ್‌ನಲ್ಲಿ ಜ. 24ರಿಂದ 27ರ ವರೆಗೆ ಧರೆಗಿಳಿಯಲಿದೆ ಪುಷ್ಪಲೋಕ

• ಉದಯವಾಹಿನಿ, ಮಡಿಕೇರಿ

ನಗರದ ರಾಜಾಸೀಟ್ ಉದ್ಯಾನದಲ್ಲಿ ಪುಷ್ಪಲೋಕವೇ ಸೃಷ್ಟಿಯಾಗಲಿದೆ. ಜ. 24ರಿಂದ 4 ದಿನಗಳ ಕಾಲ ಜಿಲ್ಲಾಡಳಿತ ತೋಟಗಾರಿಕಾ ಇಲಾಖೆ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ಬರೋಬ್ಬರಿ 7 ಸಾವಿರ ಕುಂಡಗಳು, 20 ಸಾವಿರ ಹೂಗಳು ಪ್ರವಾಸಿಗರನ್ನು ಸ್ವಾಗತಿಸಲಿವೆ. ಇದಕ್ಕಾಗಿ ಭರದ ಸಿದ್ಧತೆ ನಡೆಯುತ್ತಿದೆ. ಈ ವರ್ಷ ನಗರದ ಐತಿಹಾಸಿಕ ಓಂಕಾರೇಶ್ವರ ದೇಗುಲದ ಮಾದರಿಯನ್ನು ವಿವಿಧ ಬಗೆಯ 5 ಲಕ್ಷ ಹೂಗಳಿಂದ ನಿರ್ಮಿಸುವ ಕಾರ್ಯ ಭರದಿಂದ ನಡೆಯುತ್ತಿದೆ.

ಇದು 22 ಅಡಿ ಎತ್ತರ, 30 ಅಡಿ ಉದ್ದ ಇರಲಿದ್ದು, ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯಲಿದೆ ಎಂಬ ವಿಶ್ವಾಸ ಅಧಿಕಾರಿಗಳದ್ದಾಗಿದೆ. ಕೊಡಗಿನ ಜೇನಿಗೆ ನೀಡಲಾಗಿರುವ 'ಝೇಂಕಾರ' ಬ್ರಾಂಡ್ ಅನ್ನು ವಿವಿಧ ಬಗೆಯ ಹೂಗಳಿಂದ ಸಿಂಗರಿಸಿ ಅದನ್ನು ಪ್ರಚುರಪಡಿಸಲು ಅಧಿಕಾರಿಗಳು ಉದ್ದೇಶಿಸಿದ್ದಾರೆ. ಅದಕ್ಕಾಗಿಯೇ ಜೇನುಹುಳಗಳ ಕಲಾಕೃತಿಯನ್ನೂ ನಿರ್ಮಿಸಲಾಗುತ್ತಿದೆ.

ಗಣರಾಜ್ಯೋತ್ಸವದ ಅಂಗವಾಗಿ ದೇಶಭಕ್ತಿ ಹೆಚ್ಚಿಸುವಂತಹ ಯೋಧ, ಫಿರಂಗಿ, ರಾಷ್ಟ್ರಧ್ವಜ ಇತ್ಯಾದಿ ಪರಿಕರಗಳನ್ನು ನಿರ್ಮಿಸಲಾಗುತ್ತಿದೆ. ವಿಂಟೇಜ್ ಕಾರಿನ ಹೂವಿನ ಕಲಾಕೃತಿ ವಾಹನಪ್ರಿಯರನ್ನು ಸೆಳೆದರೆ, ಡಾರ್ಬಿ ಡಾಲ್, ಮೋಟು-ಪತ್ಲು ಸೇರಿದಂತೆ ಇತರ ಹೂವಿ ನಕಲಾಕೃತಿಗಳು ಚಿಣ್ಣರನ್ನು ಕೇಂದ್ರೀಕರಿಸಿ ನಿರ್ಮಿಸಲಾಗಿದೆ. ಇವುಗಳೆಲ್ಲಕ್ಕೂ ತಿಲಕವಿಟ್ಟಂತೆ ಪ್ರತಿವರ್ಷದಂತೆ ಈ ವರ್ಷವೂ 'ಸೆಲ್ಫಿ ಜ್ಯೋನ್' ಯುವಕ, ಯುವತಿಯರಿಗಾಗಿ ಸಿದ್ಧವಾಗುತ್ತಿದೆ. ಅಚ್ಚರಿಗೆ ತಳ್ಳುವಂತಹ ಬೋನ್ಸಾಯ್ ಗಿಡಗಳು, ಇಕೆಬಾನಗಳೂ ಇರಲಿವೆ. ತರಕಾರಿಗಳಲ್ಲಿ ಸಾಧಕರನ್ನು ಕೆತ್ತಿ ಅವರಿಗೆ ಗೌರವ ಅರ್ಪಿಸಲಾಗುತ್ತದೆ. ಗಾಂಧಿ ಮೈದಾನದಲ್ಲಿ ಒಟ್ಟು 60 ಮಳಿಗೆಗಳನ್ನು ಹಾಕಲು ಸಿದ್ಧತೆಗಳು ನಡೆದಿವೆ.

ಅಂತರಾಳದಿಂದ..
EDITORIAL

# ಇಟ್ಟಿಗೆ ಭಟ್ಟಿಯಲ್ಲಿ ಬೇಯುತ್ತಿರುವ ಕಾರ್ಮಿಕರು

ಭಾರತಕ್ಕೆ ಸಿಕ್ಕಿದ ಸ್ವಾತಂತ್ರ್ಯವನ್ನು, ಸಂವಿಧಾನ ನೀಡಿದ ಹಕ್ಕುಗಳನ್ನು ಅಣಕಿಸುವಂತಹ ಕೃತ್ಯವೊಂದು ಕರ್ನಾಟಕದ ವಿಜಯಪುರದಲ್ಲಿ ನಡೆದಿದೆ. ವಿಜಯಪುರ ಹೊರವಲಯದ ಗಾಂಧಿನಗರ ಸಮೀಪದ ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡುತ್ತಿದ್ದ ಮೂವರು ಕೂಲಿ ಕಾರ್ಮಿಕರ ಮೇಲೆ ಮಾಲಕ ಮತ್ತು ಆತನ ಭಂಟರು ಸೇರಿ ಅತ್ಯಂತ ಭೀಕರವಾಗಿ ಹಲ್ಲೆ ನಡೆಸುತ್ತಿರುವುದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಸಂಕ್ರಾತಿ ಹಬ್ಬಕ್ಕೆ ಎಂದು ಊರಿಗೆ ಹೋಗಿದ್ದ ಕೂಲಿ ಕಾರ್ಮಿಕರು ಹಿಂದಿರುಗುವುದು ವಿಳಂಬವಾಯಿತು ಎನ್ನುವುದೇ ಇವರು ಎಸಗಿದ ಮಹಾಪರಾಧ. ಮೂವರು ಕಾರ್ಮಿಕರನ್ನು ಹಿಡಿದು ಅವರ ಪಾದಗಳಿಗೆ ಕಟ್ಟಿಗೆ, ಕಬ್ಬಿಣದ ರಾಡ್‌ಗಳಿಂದ ಮಾಲಕ ಮತ್ತು ಆತನ ಸಹಚರರು ಭೀಕರವಾಗಿ ಥಳಿಸಿದ್ದಾರೆ. ಅಷ್ಟೇ ಅಲ್ಲ, ಇನ್ನಿತರ ದೈಹಿಕ ದೌರ್ಜನ್ಯಗಳನ್ನು ನೀಡಿದ್ದಾರೆ. ಈ ಕೃತ್ಯ ವೀಡಿಯೊಗಳಲ್ಲಿ ವೈರಲ್ ಆಗದೇ ಇದ್ದಿದ್ದರೆ ಶಾಶ್ವತವಾಗಿ ಮುಚ್ಚಿ ಹೋಗಿ ಬಿಡುತ್ತಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗುತ್ತಿದ್ದಂತೆಯೇ, ಇಟ್ಟಿಗೆ ಭಟ್ಟಿ ಮಾಲಕ ಖೇಮು ರಾಥೋಡ್ ಮತ್ತು ಆತನ ಇಬ್ಬರು ಸಹಚರರನ್ನು ಬಂಧಿಸಲಾಗಿದೆ. ಉಳಿದಿಬ್ಬರು ನಾಪತ್ತೆಯಾಗಿದ್ದು, ಅವರ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.ಈ ಬರ್ಬರ ಕೃತ್ಯ, ರಾಜ್ಯದಲ್ಲಿ ವಲಸೆ ಕಾರ್ಮಿಕರು, ಅಸಂಘಟಿತ ದಿನಗೂಲಿ ಕಾರ್ಮಿಕರ ಸ್ಥಿತಿಗತಿಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ. ರಾಜ್ಯದಲ್ಲಿ ಜೀತ ಪದ್ಧತಿ ನಿಷೇಧವಾಗಿ 40 ವರ್ಷಕಳೆದಿದೆಯಾದರೂ, ಇನ್ನೂ ರಾಜ್ಯದಲ್ಲಿ ಇದು ಬೇರೆ ಬೇರೆ ರೂಪಗಳಲ್ಲಿ ಅಸ್ತಿತ್ವದಲ್ಲಿದೆ ಎನ್ನುವ ವಾಸ್ತವವನ್ನು ವಿಜಯಪುರದಲ್ಲಿ ನಡೆದಿರುವ ಘಟನೆ ಬಹಿರಂಗಪಡಿಸಿದೆ. 20 ವರ್ಷಗಳ ಹಿಂದೆ ಮಂಡ್ಯದ ಹಂಗರಹಳ್ಳಿಯಲ್ಲಿ ಕಾರ್ಮಿಕರ ಕಾಲಿಗೆ ಸರಪಳಿಯನ್ನು ಬಿಗಿದು ಗಣಿಗಾರಿಕೆಗೆ ಬಳಸುತ್ತಿರುವುದು ಬೆಳಕಿಗೆ ಬಂದಿತ್ತು. ಈ ಸಂಬಂಧ ಗಣಿ ಮಾಲಕರ ಮೇಲೆ ಮೊಕದ್ದಮೆಯೂ ದಾಖಲಾಯಿತು. ಹಲವು ತಿಂಗಳುಗಳ ಕಾಲ ಇದು ಮಾಧ್ಯಮಗಳ ಮುಖ ಪುಟ ವಿಷಯವಾಗಿ ಚರ್ಚೆಯಲ್ಲಿತ್ತು. ಬಳಿಕ ಇಡೀ ಪ್ರಕರಣವನ್ನೇ ನಕಲಿ ಎಂದು ಬಿಂಬಿಸುವ ಪ್ರಯತ್ನ ನಡೆಯಿತು. ಚಿತ್ರವೊಂದರ ಶೂಟಿಂಗ್‌ಗಾಗಿ ಕಾರ್ಮಿಕರ ಕಾಲಿಗೆ ಸರಪಳಿಯನ್ನು ಬಿಗಿಯಲಾಗಿತ್ತು. ಇದನ್ನೇ ಮಾಧ್ಯಮಗಳು ತಿರುಚಿ ವರದಿ ಮಾಡಿದವು ಎಂದು ಸತ್ಯವನ್ನು ಬಹಿರಂಗಪಡಿಸಿದ ಮಾಧ್ಯಮಗಳ ಮೇಲೆಯೇ ಗೂಬೆ ಕೂರಿಸುವ ಪ್ರಯತ್ನ ನಡೆಯಿತು. ಇದಾದ ಬಳಿಕವೂ ರಾಜ್ಯದ ಹಲವೆಡೆ? ಜೀತ ಪದ್ಧತಿ ಸುದ್ದಿ ಮಾಡುತ್ತಲೇ ಇದೆ. ಕೊರೋನ, ಲಾಕ್‌ಡೌನ್ ಕಾಲದಲ್ಲಿ ಬಡತನದ ಕಾರಣಕ್ಕಾಗಿ ಉತ್ತರ ಕರ್ನಾಟಕ ಭಾಗದಲ್ಲಿ ನೂರಾರು ಮಕ್ಕಳು ಶಾಲೆಗಳನ್ನು ತೊರೆದು ಭೂಮಾಲಕರ ಹಟ್ಟಿ, ತೋಟವನ್ನು ಸೇರಿದರು. ಅವರನ್ನು ಮತ್ತೆ ಶಾಲೆಗೆ ತರಿಸುವ ಯಾವ ಪ್ರಯತ್ನವೂ ನಡೆದಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ದಣಿಗಳಿಂದ ಪಡೆದ ಸಾಲವನ್ನು ತೀರಿಸಲಾಗದೆ, ಅವರ ಗೂಂಡಾಗಳಿಗೆ ಹೆದರಿ ತೀರ ಕಡಿಮೆ ವೇತನಕ್ಕೆ ದುಡಿಯುವ ಕಾರ್ಮಿಕರ ಬಗ್ಗೆ ಸಂಘಟನೆಗಳು ಗಮನ ಸೆಳೆಯುತ್ತಲೇ ಬಂದಿವೆ.

> **ತೀರ್ಪು ಹೊರ ಬಿದ್ದ ಬಳಿಕವೇ ಪರಿಹಾರ ಸಂದಾಯವಾಗುತ್ತದೆ. ಅಧಿಕಾರಿಗಳು ನೇರವಾಗಿ ದಾಳಿ ನಡೆಸಿ, ಆರೋಪಿಗಳನ್ನು ಬಂಧಿಸಿದರೆ ಮಾತ್ರ ನ್ಯಾಯ ಸಿಗಬಹುದೇ ಹೊರತು, ಯಾವುದೇ ಕಾರ್ಮಿಕ ತನ್ನ ಮಾಲಕನ ವಿರುದ್ಧ ಜೀತ ಪದ್ಧತಿ ಆರೋಪವನ್ನು ಹೊರಿಸುವ ಧೈರ್ಯ ತೋರಿಸುವುದು ಕಷ್ಟ. ಅಷ್ಟೇ ಅಲ್ಲ, ದೂರು ನೀಡಿದಾಕ್ಷಣ ಭೂಮಾಲಕರ ವಿರುದ್ಧ ಪ್ರಕರಣ ದಾಖಲಾಗುವುದು ದೂರದ ಮಾತು.**

ವಿಜಯಪುರದ ಇಟ್ಟಿಗೆ ಭಟ್ಟಿಯಲ್ಲಿ ನಡೆದಿರುವುದು ಒಂದು ಸಣ್ಣ ಝುಲಕ್ ಮಾತ್ರ. ಇಂತಹ ಇಟ್ಟಿಗೆ ಭಟ್ಟಿಗಳು ರಾಜ್ಯದಲ್ಲಿ ನೂರಾರು ಕಾರ್ಯಾಚರಿಸುತ್ತಿವೆ. ಅಲ್ಲಿರುವ ನೂರಾರು ಕಾರ್ಮಿಕರು ಮಾಲಕರ ಗೂಂಡಾಗಳ ದೊಣ್ಣೆ ಪೆಟ್ಟಿಗೆ ಹೆದರುತ್ತಲೇ ಆ ಭಟ್ಟಿಯೊಂದಿಗೆ ಬೇಯುತ್ತಿದ್ದಾರೆ. ಅಪರೂಪಕ್ಕಷ್ಟೇ ಇಂತಹ ಘಟನೆಗಳು ಬೆಳಕಿಗೆ ಬರುತ್ತಿರುತ್ತವೆ. ರಾಜ್ಯದಲ್ಲಿ ಜೀತ ಪದ್ಧತಿ ಅಸ್ತಿತ್ವದಲ್ಲಿದೆ ಎನ್ನುವುದನ್ನು ರಾಜ್ಯ ಸರಕಾರವೂ ಒಪ್ಪಿಕೊಂಡಿದೆ ಮಾತ್ರವಲ್ಲ, ಇದರ ವಿರುದ್ಧ ಕ್ರಮ ಕೈಗೊಳ್ಳಲು 52 ಜೀತ ನಿಗ್ರಹ ಅಧಿಕಾರಿಗಳನ್ನು ನೇಮಕ ಮಾಡಿದೆ. ರಾಜ್ಯದಲ್ಲಿ 2016ರಿಂದ 2024ರವರೆಗೆ 2,631 ಜೀತ ಪ್ರಕರಣಗಳು ಬೆಳಕಿಗೆ ಬಂದಿವೆ. ಇದೇ ಸಂದರ್ಭದಲ್ಲಿ ಜೀತ ಮುಕ್ತರಾದ 4,397 ಕಾರ್ಮಿಕರಿಗೆ ಪಿಂಚಣಿ ನೀಡಲಾಗಿದೆ ಎಂದು ಸರಕಾರ ಹೇಳಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಜೀತ ಮುಕ್ತರಿಗೆ ಪರಿಹಾರಗಳನ್ನು ನೀಡುತ್ತದೆಯಾದರೂ, ಅದನ್ನು ಪಡೆಯುವುದು ಕಾರ್ಮಿಕರ ಪಾಲಿಗೆ ಸುಲಭವಿಲ್ಲ. ಮುಖ್ಯವಾಗಿ ಪ್ರಕರಣ ದಾಖಲಾಗಿ, ಸಕ್ಷಮ ನ್ಯಾಯಾಲಯದ ಮುಂದೆ ಅದು ಜೀತ ಪ್ರಕರಣವೆನ್ನುವುದು ಸಾಬೀತಾಗಬೇಕು. ಇನ್ನು ದೂರು ನೀಡಿದ ಕಾರ್ಮಿಕರಿಗೆ ಆ ಊರಿನಲ್ಲಿ ಕೆಲಸ ಸಿಗುವುದೂ ಕಷ್ಟ. ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಳಗಾವಿ, ಬಾಗಲಕೋಟೆ, ರಾಮನಗರ ಈ ಭಾಗದಲ್ಲಿ ಜೀತ ಪದ್ಧತಿ ಬೇರೆ ಬೇರೆ ರೂಪದಲ್ಲಿ ಅಸ್ತಿತ್ವದಲ್ಲಿದೆ ಎನ್ನುವುದನ್ನು ಅಧಿಕಾರಿಗಳೂ ಒಪ್ಪುತ್ತಾರೆ. ಆದರೆ ಅವರೂ ಹೆಚ್ಚಿನ ಸಂದರ್ಭದಲ್ಲಿ ಅಸಹಾಯಕರಾಗಬೇಕಾಗುತ್ತದೆ. ಹೊಟೇಲುಗಳು, ಕಲ್ಲುಕೋರೆ, ಇಟ್ಟಿಗೆ ಭಟ್ಟಿ, ಕೃಷಿ ಈ ಎಲ್ಲಾ ವಲಯಗಳಲ್ಲೂ ಜೀತ ಪದ್ಧತಿ ಸದ್ದಿಲ್ಲದೆ ಹರಡಿಕೊಂಡಿದೆ. ಬೃಹತ್ ಕಲ್ಲುಗಣಿಗಾರಿಕೆಗಳ ಹಿಂದೆ ರಾಜಕಾರಣಿಗಳ ಕೈಗಳಿರುವುದರಿಂದ, ಇಲ್ಲಿರುವ ಮಾಲಕರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಅಷ್ಟು ಸುಲಭವಿಲ್ಲ ಕಳೆದ ನವೆಂಬರ್‌ನಲ್ಲಿ ಬೆಳಗಾವಿಯ ಖಾಸಗಿ ಡಾಬಾವೊಂದರಲ್ಲಿ ಉತ್ತರ ಭಾರತದ ಕಾರ್ಮಿಕರನ್ನು ಕಾಲಿಗೆ ಸರಪಳಿ ಕಟ್ಟಿ ಕೆಲಸ ಮಾಡಿಸುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಸಾಲದ ರೂಪದಲ್ಲಿ ಇವರಿಗೆ ಹಣವನ್ನು ನೀಡಿ, ಬಳಿಕ ಇವರನ್ನು ಹಗಲು ರಾತ್ರಿ ಶೋಷಿಸಲಾಗುತ್ತಿತ್ತು. ಸ್ಥಳೀಯ ಅಧಿಕಾರಿಗಳು ಡಾಬಾಕ್ಕೆ ಭೇಟಿ ನೀಡಿ ಕಾರ್ಮಿಕರನ್ನು ಬಿಡುಗಡೆ ಮಾಡಿದ್ದು, ಮಾಲಕರ ಮೇಲೆ ಮೊಕದ್ದಮೆ ದಾಖಲಿಸಿದ್ದರು. ಕೊಡಗು, ಚಿಕ್ಕಮಗಳೂರಿನಂತಹ ಕಾಫಿ ತೋಟಗಳಲ್ಲಿ ದುಡಿಯುವ ಕಾರ್ಮಿಕರ ಸ್ಥಿತಿಯಂತೂ ಇನ್ನಷ್ಟು ಚಿಂತಾಜನಕವಾಗಿರುತ್ತವೆ. ಬಹುತೇಕ ಹೊರ ರಾಜ್ಯಗಳಿಂದ ಇವರು ಕಾರ್ಮಿಕರನ್ನು ತರಿಸಿಕೊಂಡು ಅತ್ಯಂತ ಕಡಿಮೆ ವೇತನಗಳನ್ನು ನೀಡಿ ದುಡಿಸುತ್ತಾರೆ. ಭೂಮಾಲಕರ ಅನುಮತಿಯಿಲ್ಲದೆ ಇವರು ಇನ್ನೊಂದು ತೋಟದಲ್ಲಿ ಹೋಗಿ ಕೆಲಸ ಮಾಡುವಂತಿಲ್ಲ. ಮಾಲಕರು ಅನುಮತಿ ಪತ್ರವನ್ನು ನೀಡಿದರೆ ಮಾತ್ರ ಇಂತಹ ಕಾರ್ಮಿಕರು ಇನ್ನೊಂದು ತೋಟದಲ್ಲಿ ಕೆಲಸ ಮಾಡಬಹುದಾಗಿದೆ. ಒಂದು ವೇಳೆ, ಭೂಮಾಲಕರ ವಿರುದ್ಧ ಪ್ರತಿಭಟನೆಯನ್ನು ನಡೆಸಿದರೆ, 'ನುಸುಳುಕೋರರು' 'ಬಾಂಗ್ಲಾ ಅಕ್ರಮ ವಲಸಿಗರು' ಎಂದೆಲ್ಲ ಆರೋಪಿಸಿ ಅವರನ್ನು ಸ್ಥಳೀಯರೇ ಪೊಲೀಸರ ವಶಕ್ಕೆ ನೀಡುತ್ತಾರೆ.



# ರಾಮಾಯಣ

ಬಾಲಕಾಂಡವು ಸಮಾಪ್ತವಾಯಿತು

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನವಕುವಲಯದಾಮಶ್ಯಾಮವರ್ಣಾಭಿರಾಮಃ । ಅಭಿನವ ಇವ ವಿದ್ಯುನ್ಮಂಡಿತೋ ಮೇಘಖಂಡಃ ಶಮಯತು ಮಮ ತಾಪಂ ಸರ್ವತೋ ರಾಮಚಂದ್ರ ।

## ಶ್ರೀ ರಾಮನಿಗೆ ಪಟ್ಟಾಭಿಷೇಕ ಮಾಡಲು ದಶರಥನ ಆಲೋಕನೆ

ಭರತನು ತನ್ನ ಸೋದರಮಾವನ ಮನೆಗೆ ಹೋಗುವಾಗ ಶತ್ರು ಸಂಹಾರಕನಾದ ಶತ್ರುಘ್ನನನ್ನು ಅತ್ಯಂತ ಪ್ರೀತಿಯಿಂದ ತನ್ನೊಡನೆ ಕೇಕಯದೇಶಕ್ಕೆ ಕರೆದುಕೊಂಡು ಹೋದನು. ಅಶ್ವಪತಿಯಾದ ಯುಧಾಜಿತ್ತೆಂಬ ಸೋದರಮಾವನು ಪುತ್ರನ ಮರ್ಯಾದೆಯಲ್ಲಿ ಇಷ್ಟವಾದ ವಸ್ತುಗಳನ್ನು ಕೊಟ್ಟು ಸತ್ಕರಿಸಲು ಅಲ್ಲಿ ಸುಖವನ್ನು ಅನುಭವಿಸಿಕೊಂಡಿದ್ದನು. ವೃದ್ಧನಾದ ತನ್ನ ತಂದೆ ದಶರಥ ರಾಯನನ್ನು ನೆನೆಯುತ್ತಾ ಮಾವನ ಮನೆಯಲ್ಲಿರಲು, ಅಯೋಧ್ಯಾಪಟ್ಟಣದಲ್ಲಿ ಅತ್ಯಂತ ಕೀರ್ತಿ ವಂತನಾದ ದಶರಥರಾಯನು ಇಂದ್ರ ವರುಣರಿಗೆ ಸಮಾನರಾದ ಭರತಶತ್ರುಘ್ನರು ಸ್ಥಳಾಂತರಕ್ಕೆ ಹೋಗಿ ಹೇಗೆ ಇದ್ದಾರೆಯೋ ಎಂದು ಚಿಂತಿಸುತ್ತಿದ್ದನು. ದಶರಥರಾಯನಿಗೆ ಪುರುಷಶ್ರೇಷ್ಠರಾದ ನಾಲ್ವರು ಕುಮಾರರೂ ಆತನ ಶರೀರದ ನಾಲ್ಕು ಭುಜಗಳೋ ಎಂಬಂತೆ ಅತ್ಯಂತ ಪ್ರೀತಿಯನ್ನುಂಟು ಮಾಡುವಂಥವರು. ಆ ನಾಲ್ಕು ಮಂದಿ ಕುಮಾರರಲ್ಲಿ ಶ್ರೀರಾಮನು ದಶರಥನಿಗೆ ಅತ್ಯಂತ ಪ್ರೀತಿಪಾತ್ರನು, ಆತನು ಪೂರ್ವದಲ್ಲಿ ರಾವಣನ ಉಪದ್ರವದಿಂದ ಕಂಗೆಟ್ಟ ಇಂದ್ರಾದಿ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟು ಜಗದ್ಧಿತಾರ್ಥವಾಗಿ ಮನುಷ್ಯಲೋಕದಲ್ಲಿ ಅವತರಿಸಿದ ಪರಮಪುರುಷನಾದ ನಾರಾಯಣನು. ಅತ್ಯಂತ ತೇಜಸ್ವಿಯಾದ ಆ ಶ್ರೀರಾಮನಿಂದ ಕೌಸಲ್ಯಾದೇವಿಯು ದೇವೇಂದ್ರನಿಂದ ಸಂತೋಷಪಡಿಸಲ್ಪಟ್ಟ ದೇವಮಾತೆಯಾದ ಅದಿತಿಯೋಪಾದಿಯಲ್ಲಿ ಒಪ್ಪುತ್ತಿದ್ದಳು. ಶ್ರೀರಾಮನು ಅತ್ಯಂತ ಸೌಂದರ್ಯವುಳ್ಳವನು. ಮಹಾಪರಾಕ್ರಮಿಯು, ಅಸೂಯೆ ಇಲ್ಲದವನು. ಅನೇಕ ಸದ್ಗುಣಗಳಿಂದ ತನ್ನ ತಂದೆಯಾದ ದಶರಥರಾಯನಿಗೆ ಸಮಾನನಾದವನು. ಯಾವಾಗಲ ಶಾಂತಗುಣವುಳ್ಳವನು. ಸಂಭಾಷಣೆ ಮಾಡುವಲ್ಲಿ ಮೃದುನುಡಿಗಳನ್ನೇ ನುಡಿಯುವವನು. ನಿಷ್ಠುರವಾದ ನುಡಿಯನ್ನು ಆಡುವವರಿಗೂ ನಿಷ್ಠುರವಾಗಿ ಪ್ರತ್ಯುತ್ತರವನ್ನು ಕೊಡುವನ ಅವನು ಮಹಾಪರಾಕ್ರಮಿ. ಮಹಾಸಾಹಸಿಯಾದರೂ ಗರ್ವವಿಲ್ಲದವನು. ವಿದ್ವಾಂಸ. ಬಲ್ಲವರನ್ನು ಸತ್ಕರಿಸುವವನು. ಪ್ರಜೆಗಳಿಗೆ ಸಂತೋಷವನ್ನುಂಟು ಮಾಡಿ ತಾನೂ ಸಂತೋಷ ಪಡುವವನು. ಮಹಾಕೃಪಾಳು, ಕ್ರೋಧವಿಲ್ಲದವನು. ದೇವಬ್ರಾಹ್ಮಣರ ಪೂಜೆಯನ್ನು ಮಾಡುವವನು. ಬಡವರಲ್ಲಿ ಅತ್ಯಂತ ದಯೆಯುಳ್ಳವನು. ಧರ್ಮರಹಸ್ಯವನ್ನು ಬಲ್ಲವನು. ಯಾವಾಗಲೂ ನಿಯತನಾಗಿರುವವನು.

ಮುಂದುವರಿಯುವುದು...

# ಫಿನಾಲೆಯ ಕೊನೆಯಲ್ಲಿ ಈ ಮೂವರ ಮಧ್ಯೆ ಟ್ರೋಫಿ ಸೆಣಸಾಟ!

• ಉದಯವಾಹಿನಿ ಬೆಂಗಳೂರು

ಕನ್ನಡದ ಅತಿ ದೊಡ್ಡ ರಿಯಾಲಿಟಿ ಶೋ ಎಂದೇ ಖ್ಯಾತಿ ಪಡೆದಿರುವ ಬಿಗ್ ಬಾಸ್ ಕನ್ನಡ ಸೀಸನ್ 11ರ ಸ್ಪರ್ಧಿಗಳು ಇದೀಗ ಯಶಸ್ವಿ 15 ವಾರಗಳನ್ನು ಪೂರೈಸಿ, 16ನೇ ವಾರ ಹಾಗೂ ಕೊನೆಯ ವಾರದ ಗೆಲುವಿನ ಓಟದಲ್ಲಿದ್ದಾರೆ. ಆರಂಭಿಕದ ಮೊದಲೆರೆಡು ವಾರಗಳಲ್ಲೇ ದೊಡ್ಡ ವಿವಾದಕ್ಕೆ ಮತ್ತು ಜಟಾಪಟಿಗೆ ಕಾರಣವಾಗಿದ್ದ ಬಿಗ್ ಬಾಸ್ ಸೀಸನ್ 11 ಇದೀಗ ಕಟ್ಟ ಕಡೆಯ ಹಂತವನ್ನು ತಲುಪಿದ್ದು, ಗ್ರಾಂಡ್ ಫಿನಾಲೆಗೆ ಇನ್ನೆರಡು ದಿನಗಳಷ್ಟೇ ಬಾಕಿ ಉಳಿದಿದೆ.

> **ಫಿನಾಲೆ ಹಾಟ್‌ಸೀಟ್‌ನಲ್ಲಿ ಕುಳಿತಿರುವ ಆರು ಘಟಾನುಘಟಿ ಸ್ಪರ್ಧಿಗಳ ಪೈಕಿ ಕಿಚ್ಚ ಸುದೀಪ್ ಅವರ ಎಡ-ಬಲದಲ್ಲಿ ಯಾರಿರುತ್ತಾರೆ ಎಂಬುದು ಈಗಾಗಲೇ ನಿರ್ಧಾರವಾದಂತಿದೆ. ಇದಕ್ಕೆ ಕಾರಣ, ಜನಾಭಿಪ್ರಾಯಗಳು. ಜಾಲತಾಣಗಳಲ್ಲಿ ತಮ್ಮ ಅನಿಸಿಕೆಗಳನ್ನು ಬಹಿರಂಪಡಿಸಿರುವ ವೀಕ್ಷಕರು, ತ್ರಿವಿಕ್ರಮ್, ಹನುಮಂತು ಸುದೀಪ್ ಅವರ ಅಕ್ಕ-ಪಕ್ಕ ನಿಂತುಕೊಳ್ಳಲಿದ್ದಾರೆ. ಇವರ ಮಧ್ಯೆ ಹನುಮಂತು ಗೆಲ್ಲಬಹುದು ಎಂದು ಒಂದು ವರ್ಗ ಹೇಳಿದರೆ, ಮತ್ತೊಂದು ವರ್ಗ, ಮೊದಲ ದಿನದಿಂದಲೂ ಮನೆಯೊಳಗೆ ಆಟದಲ್ಲಿ ಖಡಕ್ ಆಗಿ ಕಾಣಿಸಿ ಕೊಂಡಿರುವ ತ್ರಿವಿಕ್ರಮ್, ಗೆಲುವು ಸಾಧಿಸುವುದು ಖಚಿತ ಎಂದು ಹೇಳಿದೆ.**






ಪ್ರೀತಿ-ಸಂಬಂಧ, ದೋಸ್ತಾ, ಜಗಳ, ಮನಸ್ತಾಪಗಳ ನಡುವೆ 20 ಘಟಾನುಘಟಿ ಸ್ಪರ್ಧಿಗಳ ಪೈಕಿ ಸದ್ಯ ಮನೆಯೊಳಗೆ ಉಳಿದುಕೊಂಡಿರುವುದು ಕೇವಲ 6 ಸದಸ್ಯರು ಮಾತ್ರ. ಇವರಲ್ಲಿ ಫಿನಾಲೆ ಕಪ್ ಗೆಲ್ಲುವುದು ಒಬ್ಬರೇ ಆಗಿದ್ದು, ಅದು ಯಾರ ಮುಡಿಗೆ ಎಂಬುದೇ ಈಗ ಕುತೂಹಲ. ಹನುಮಂತು, ಮಂಜು ಬಿರುಸಿನ ಪೈ ಪೋಟಿ, ಜಟಾಪಟಿ, ಮಾತಿನ ಕಿಡಿ ಮಧ್ಯೆಯೇ ಆಟದಲ್ಲಿ ತಮ್ಮ ಬದ್ಧತೆ, ಸ್ಪರ್ಧಾ ಮನೋಭಾವವನ್ನು ಪ್ರದರ್ಶಿಸುವಲ್ಲಿ ಯಶಸ್ವಿಯಾದ ಮೋಕ್ಷಿತಾ ಪೈ ಹನುಮಂತು, ರಜತ್, ಮಂಜು, ಭವ್ಯ ಮತ್ತು ತ್ರಿವಿಕ್ರಮ್ ಸದ್ಯ ಫಿನಾಲೆ ವಾರದ ಆರು ಸ್ಪರ್ಧಿಗಳಾಗಿ ಅಖಾಡದಲ್ಲಿದ್ದಾರೆ. ಈಗಾಗಲೇ ಕಳೆದ ಭಾನುವಾರದಿಂದಲೇ ಯಾರು ಬಿಗ್ ಬಾಸ್ ಸೀಸನ್ 11ರ ಟ್ರೋಫಿಯನ್ನು ಗೆಲ್ಲಲಿದ್ದಾರೆ? ಯಾರ ಮುಡಿಗೆ ರೆಕ್ಕೆಯ ಟ್ರೋಫಿ ಸೇರಲಿದೆ ಎಂಬ ಕುತೂಹಲ, ಕೌತುಕ ಸದ್ಯ ನೋಡುಗರಲ್ಲಿ ಮನೆ ಮಾಡಿದೆ. ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಜಾಲತಾಣಗಳಲ್ಲಿ ವ್ಯಾಪಕ ಅಭಿಪ್ರಾಯ, ಅನಿಸಿಕೆಗಳು ವ್ಯಕ್ತವಾಗಿದ್ದು, ಹನುಮಂತು, ಮಂಜು, ತ್ರಿವಿಕ್ರಮ್, ಮೋಕ್ಷಿತಾ ಮತ್ತು ರಜತ್ ನಡುವೆ ಟ್ರೋಫಿಗಾಗಿ ಭಾರೀ ಪೈಪೋಟಿ ನಡೆಯಲಿದೆ ಎಂಬ ಮಾತುಗಳು ಕೇಳಿಬಂದಿವೆ. ಇನ್ನು ಈ ಮಧ್ಯೆ ಇವರೊಂದಿಗೆ ಮೂರನೇ ಸ್ಥಾನದಲ್ಲಿ ಯಾರಿರುತ್ತಾರೆ? ಕೊನೆಯ ಮೂವರು ಸ್ಪರ್ಧಿಗಳು ಯಾರು? ಎಂಬ ಪ್ರಶ್ನೆಗೆ ಮೋಕ್ಷಿತಾ ಹೆಸರು ಉತ್ತರವಾಗಿ ಲಭಿಸಿದೆ. ಕೊನೆಯ ಮೂವರು ಸ್ಪರ್ಧಿಗಳ ಹೆಸರಿನಲ್ಲಿ ಮೋಕ್ಷಿತಾ ಹೆಸರಿದ್ದು. ಅವರ ಜತೆಗೆ ಮಂಜು ಹೆಸರು ಕೂಡ ಮುಂಚೂಣಿಯಲ್ಲಿದೆ. ಟ್ರೋಫಿಗೆ ಉಳಿಯುವ ಮೂವರಲ್ಲಿ ತ್ರಿವಿಕ್ರಮ್, ಹನುಮಂತು ಮತ್ತು ಮೋಕ್ಷಿತಾ ಹೆಸರು ಹೆಚ್ಚಾಗಿ ಓಡಾಡುತ್ತಿದೆ. ಅಸಲಿಗೆ ಇವರಲ್ಲಿ ಯಾರು ಆ ಮೂವರು? ಯಾರ ಮುಡಿಗೆ ಬಿಗ್ ಬಾಸ್ ಸೀಸನ್ 11ರ ಪಟ್ಟ ಸಿಗಲಿದೆ ಎಂಬುದನ್ನು ಭಾನುವಾರ (ಜ.26) ನಡೆಯಲಿರುವ ಗ್ರಾಂಡ್ ಫಿನಾಲೆಯ ಎರಡನೇ ಸಂಚಿಕೆಯಲ್ಲಿ ತಿಳಿಯಬೇಕಿದೆ.

# ಜಗದೀಶ್‌ಗೆ ದರ್ಶನ್ ಅಭಿಮಾನಿಗಳಿಂದ ಬಿತ್ತು ಗೂಸಾ ?

• ಉದಯವಾಹಿನಿ ಬೆಂಗಳೂರು

ಎಲ್ಲಾ ವಿಷಯಗಳಿಗೂ ರಿಯಾಕ್ಟ್ ಮಾಡುತ್ತಿದ್ದ ಹಾಗೂ ವಿಡಿಯೋಗಳ ಮೂಲಕ ವೈರಲ್ ಆಗುತ್ತಿದ್ದ ಲಾಯರ್ ಜಗದೀಶ್ ಅವರಿಗೆ ದರ್ಶನ್ ಅವರ ಅಭಿಮಾನಿಗಳು ಗೂಸಾ ಕೊಟ್ಟಿದ್ದಾರೆ ಎನ್ನಲಾಗಿರುವ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಕಳೆದ ಕೆಲವು ದಿನಗಳಿಂದ ನಟ ದರ್ಶನ್ ಸೇರಿದಂತೆ ಹಲವರ ಬಗ್ಗೆ ಲಾಯರ್ ಜಗದೀಶ್ ಅವರು ಮಾತನಾಡಿದ್ದರು. ಇದೀಗ ಗುರುವಾರ ದರ್ಶನ್ ಅವರ ಅಭಿಮಾನಿಗಳು ಲಾಯರ್ ಜಗದೀಶ್‌ಗೆ ಹೊಡೆದಿದ್ದಾರೆ ಎನ್ನಲಾಗಿರುವ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಮೊದಲ ದರ್ಶನ್ ಪರ ಮಾತನಾಡಿದ್ದ ಲಾಯರ್ ಜಗದೀಶ್ ಅವರು ಇತ್ತೀಚಿನ ದಿನಗಳಲ್ಲಿ ದರ್ಶನ್ ಅವರ ಅಭಿಮಾನಿಗಳು ಕೋಪಗೊಳ್ಳುವಂತೆ ಮಾತನಾಡಿದ್ದರು. ಇದೇ ಕಾರಣಕ್ಕೆ ಲಾಯರ್ ಜಗದೀಶ್ ಅವರ ಮೇಲೆ ಹಲ್ಲೆ ನಡೆದಿದೆ ಎನ್ನಲಾಗಿದೆ. ಆದರೆ ಜಗದೀಶ್ ಅವರು ಹಲವು ವಿಷಯಗಳ ಬಗ್ಗೆ ಹೋರಾಟ ಮಾಡಿದ್ರೂ ಇದೆ.

ಕನ್ನಡ ಬಿಗ್‌ಬಾಸ್ ಸೀಸನ್ 11ರ ಸ್ಪರ್ಧಿ ಲಾಯರ್ ಜಗದೀಶ್ ಅವರಿಗೆ ಆರೇಳು ಜನ ಸೇರಿಕೊಂಡು ಗುರುವಾರ ಹೊಡೆದಿದ್ದಾರೆ. ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗಿದೆ. ಲಾಯರ್ ಜಗದೀಶ್ ಹಾಗೂ ಅಪರಿಚಿತ ಗುಂಪಿನ ನಡುವೆ ಮಾತಿನ ಚಕಮಕಿ ತಳ್ಳಾಟವಾಗಿದೆ.



> **ಇದರಿಂದ ನಾವು ಇರುವ ಏರಿಯಾದ ರಸ್ತೆ ಬ್ಲಾಕ್ ಆಗಿದೆ. ಇದರ ಬಗ್ಗೆ ಪೊಲೀಸರಿಗೆ ಕಂಪ್ಲೇಂಟ್ ಮಾಡಿದ್ದೆ. ಬೆಳಗ್ಗೆ ವಾಕಿಂಗ್ ಹೋದಾಗ 40 ಜನ ಪುಂಡರು ನನ್ನ ಜೊತೆ ಜಗಳ ಮಾಡಿದ್ದಾರೆ. ಈ ಪುಂಡರನ್ನು ಪೊಲೀಸರೇ ಕಳೆಸಿದ್ದಾರೆ ಎನ್ನುವ ಬಗ್ಗೆ ನನಗೆ ಅನುಮಾನ ಇದೆ ಅಂತಲೂ ಅವರು ಆರೋಪ ಮಾಡಿದ್ದಾರೆ.**

ಕೆಲವರು ಈ ಸಂದರ್ಭದಲ್ಲಿ ಲಾಯರ್ ಜಗದೀಶ್ ಅವರನ್ನು ಹೊಡೆಯದಂತೆ ತಡೆಯುವುದಕ್ಕೂ ಪ್ರಯತ್ನಪಟ್ಟಿದ್ದಾರೆ. ಜಗದೀಶ್ ಅವರ ಟೀ ಶರ್ಟ್

> **ದರ್ಶನ್ ಅಭಿಮಾನಿಗಳಿಂದ ಸಂಭ್ರಮ: ಈ ವಿಡಿಯೋವನ್ನು ನೋಡಿ ದರ್ಶನ್ ಅಭಿಮಾನಿಗಳು ಕಮೆಂಟ್ ಮೂಲಕ ಸಂತೋಷ ಹಂಚಿಕೊಳ್ಳುತ್ತಿದ್ದಾರೆ. ಹೌದು ಡಿ ಬಾಸ್ ಬಗ್ಗೆ ಮಾತನಾಡಿದ್ದಕ್ಕೆ ಸರಿಯಾಗಿಯೇ ಆಗಿದೆ. ಇನ್ಮುಂದೆಯಾದರೂ ಡಿ ಬಾಸ್ ಹಾಗೂ ಅವರ ಅಭಿಮಾನಿಗಳ ತಂಟೆಗೆ ಬರಬೇಡಿ ಅಂತ ದರ್ಶನ್ ಅಭಿಮಾನಿಗಳು ಕಮೆಂಟ್ ಮಾಡಿದ್ದಾರೆ.**

ಹಿಡಿದು ತಳ್ಳಾಡಲಾಗಿದೆ. ಅಲ್ಲದೆ ಟೀ ಶರ್ಟ್ ಕಿತ್ತು ಹಾಕಲಾಗಿದ್ದು, ಕೆಲವರು ಜಗದೀಶ್‌ಗೆ ಏಟು ಕೊಟ್ಟಿದ್ದಾರೆ.

ಇನ್ನು ಲಾಯರ್ ಜಗದೀಶ್ ಅವರಿಗೆ ಹಲ್ಲೆ ಮಾಡಲಾಗಿದೆ ಎನ್ನುವ ವಿಡಿಯೋ ವೈರಲ್ ಆಗಿರುವ ಬೆನ್ನಲ್ಲೇ ಈ ಸಂಬಂಧ ವಿಡಿಯೋ ಮೂಲಕ ಲಾಯರ್ ಜಗದೀಶ್ ಅವರು ಸ್ಪಷ್ಟನೆ ಕೊಟ್ಟಿದ್ದಾರೆ ಎನ್ನಲಾಗಿರುವ ವಿಡಿಯೋ ಸಹ ವೈರಲ್ ಆಗಿದೆ. ಈ ವಿಡಿಯೋದಲ್ಲಿ ಮಾತನಾಡಿರುವ ಅವರು ಬೆಂಗಳೂರಿನ ಕೊಡಿಗೆಹಳ್ಳಿ ವ್ಯಾಪ್ತಿಯ ವಿರೂಪಾಕ್ಷಪುರ ಗೇಟ್ ಸಮೀಪದ ನಮ್ಮ ಮನೆಯ ಕಾಂಪ್ಲೆಕ್ಸ್‌ನ ಮುಂಭಾಗದಲ್ಲಿ ರೋಡ್ ಬ್ಲಾಕ್ ಆಗಿರುವ ಬಗ್ಗೆ, ನಾನು ಪೊಲೀಸರಿಗೆ ದೂರು ನೀಡಿದ್ದ. ಈ ಭಾಗದಲ್ಲಿ ಅಣ್ಣಮ್ಮ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ.



ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

# ದಿನಕ್ಕೊಂದು ಮುಕ್ತಕ -75

• ಉದಯವಾಹಿನಿ, ವಿಶೇಷ

ಪುಸ್ತಕದ ಸಾರವನು ಅರಿಯುತ್ತ ನಡೆಯುತಿರೆ
ಮಸ್ತಕದ ಒಳಗಿರುವ ವಿಷಯವನ್ನು
ಹಸ್ತದಲಿ ಬರೆಯುತ್ತ ಸಾಗುತಿರೆ ಜೀವನದಿ
ಗಸ್ತನೆನು ಹೊಡೆಯದಿರು ಲಕ್ಷ್ಮಿ ದೇವಿ....



ಭಾವಾರ್ಥ : ನಾವು ಓದುವಂತಹ ಪುಸ್ತಕದಲ್ಲಿ ಬಹಳಷ್ಟು ವಿಚಾರಗಳನ್ನು ತಿಳಿಯುತ್ತೇವೆ. ತಿಳಿದ ನಂತರ ಅದನ್ನು ಅರಿತು ನಡೆಯುತ್ತೇವೆ. ನಾವು ಓದಿದ ವಿಚಾರಗಳೆಲ್ಲ ಮಸ್ತಕದಲ್ಲಿ ವಿಷಯವು ಸಂಗ್ರಹವಾಗುತ್ತದೆ. ಆ ವಿಷಯಗಳನ್ನು ಕೆಲವೊಮ್ಮೆ ಭಾವನಾತ್ಮಕವಾಗಿ ವಸ್ತುಗಳನ್ನ ಬಳಸಿಕೊಂಡು ಬರವಣಿಗೆಯ ರೂಪದಲ್ಲಿ ನಮೂದಿಸುತ್ತಾ ಜೀವನದಲ್ಲಿ ಸಾಗುತ್ತೇವೆ. ಅದನ್ನು ಬಿಟ್ಟು ಗಸ್ತನೆನು ಒಡೆಯುವುದಿಲ್ಲ. ನಮ್ಮ ಜೀವನದಲ್ಲಿ ಬದುಕಿನ ಸಾರದ ಜೊತೆಗೆ ವಿಷಯದ ಸಂಗ್ರಹವನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಅಂತಹದನ್ನ ನಾವು ಪುಸ್ತಕಗಳ ಮುಖಾಂತರ ತಿಳಿದುಕೊಂಡಾಗ ಪ್ರತಿಯೊಬ್ಬರೂ ಜ್ಞಾನಿಗಳಾಗುತ್ತಾರೆ. ತಮ್ಮದೇ ಆದಂತಹ ಅರಿವನ್ನು ಮಸ್ತಕದಲ್ಲಿ ತುಂಬಿಕೊಂಡು ಮುಂದಿನ ವಿಚಾರಗಳಲ್ಲಿ ಪಕ್ವತೆಯನ್ನು ವಿಷಯಗಳಲ್ಲಿ ಹೊಂದುತ್ತಾರೆ.

# ಹೀರೆಕಾಯಿ ಸಿಪ್ಪೆಯಿಂದ ಚಿಪ್ಸ್ ಮಾಡಿದಿರಾ?

## ಸಖತ್ ಟೇಸ್ಟಿಯಾಗಿರುತ್ತೆ ಒಮ್ಮೆ ಟ್ರೈ ಮಾಡಿ

• ಉದಯವಾಹಿನಿ ಬೆಂಗಳೂರು

ಸಂಜೆ ಆದರೆ ಅದೇ ಆಲುಗಡ್ಡೆ ಚಿಪ್ಸ್ ತಿಂದು ತಿಂದು ಬೇಜಾರಾಗಿದಿಯಾ? ಬಾಳೆಕಾಯಿ ಚಿಪ್ಸ್ ಹಲಸಿನಕಾಯಿ ಚಿಪ್ಸ್ ತಿಂದು ನಾಲಿಗೆ ಬೇರೆ ರುಚಿ ಬಯಸುತ್ತಿದಿಯಾ? ಹಾಗಾದರೆ ಹೀರೆಕಾಯಿ ಸಿಪ್ಪೆಯಿಂದ ಮಾಡಿದ ಚಿಪ್ಸ್ ಒಮ್ಮೆ ಟ್ರೈ ಮಾಡಿ. ಇದು ತಿನ್ನಲು ವಿಭಿನ್ನ ರುಚಿ ನೀಡುವುದು ಮಾತ್ರವಲ್ಲದೆ ಗರಿಗರಿಯಾಗಿರುತ್ತದೆ. ಹೀರೆಕಾಯಿ ಎಲ್ಲಾ ಕಾಲಕ್ಕೂ ಸಿಗುವ ಬಹುತೇಕರ ನೆಚ್ಚಿನ ತರಕಾರಿ. ಸಾಮಾನ್ಯವಾಗಿ ಗೃಹಿಣಿಯರು ಹೀರೆಕಾಯಿಯಿಂದ ಪಲ್ಯ, ಚಟ್ನಿಯನ್ನು ತಯಾರಿಸುತ್ತಾರೆ. ಕೆಲವರು ಸಾಂಬರ್‌ಗೂ ಇದನ್ನು ಬಳಸುತ್ತಾರೆ. ಆದರೆ ಬಹುತೇಕ ಜನ ಗೃಹಿಣಿಯರು ಹೀರೆಕಾಯಿಯಿಂದ ತೆಗೆದ ಸಿಪ್ಪೆಯನ್ನು ಎಸೆಯುತ್ತಾರೆ. ಆದರೆ ಅದರ ಸಿಪ್ಪೆಯಿಂದ ರುಚಿಕರವಾದ ಚಿಪ್ಸ್ ಅನ್ನೂ ತಯಾರಿಸಬಹುದು. ನೀವು ಇನ್ನುಮುಂದೆ ಹೀರೆಕಾಯಿ ತಂದರೆ ಅದರ ಸಿಪ್ಪೆಯಿಂದ ಚಿಪ್ಸ್ ತಯಾರಿಸಿ ತಿನ್ನಿ ಇದರ ರುಚಿ ಸಖತ್ತಾಗಿರುತ್ತೆ.


**ತಯಾರಿಸುವ ವಿಧಾನ**



**ಬೇಕಾಗುವ ಪದಾರ್ಥಗಳು**

- ಎಳೆಯದಾದ ಹೀರೆಕಾಯಿ 3
- ಅಡುಗೆ ಎಣ್ಣೆ (ಕರಿಯಲು ಬೇಕಾಗುವಷ್ಟು)
- ಗರಂ ಮಸಾಲಾ ಪೌಡರ್ ಸ್ವಲ್ಪ
- ಉಪ್ಪು ರುಚಿಗೆ ತಕ್ಕಷ್ಟು
- ಖಾರದ ಪುಡಿ ಕಾಲ್ ಟೇಬಲ್ ಸ್ಪೂನ್

- ಹೀರೆಕಾಯಿಯನ್ನು ಚೆನ್ನಾಗಿ ತೊಳೆದು ಸಿಪ್ಪೆಯನ್ನು ತೆಗೆದುಕೊಳ್ಳಿ. ಸಿಪ್ಪೆ ತೆಗೆದ ಬಳಿಕ ಅದನ್ನು ಮತ್ತೊಮ್ಮೆ ತೊಳೆದುಕೊಳ್ಳಿ.
- ನಂತರ ಇದನ್ನು ಬಿಸ್ಕೆಟ್ ಆಕಾರದಲ್ಲಿ ಕಟ್ ಮಾಡಿಕೊಂಡು ಸ್ವಲ್ಪ ಒಣಗಲು ಬಿಡಿ.



- ಹೀರೆಕಾಯಿ ಸಿಪ್ಪೆ ತೆಗೆಯದೆ ಅದನ್ನು ವೃತ್ತಾಕಾರದಲ್ಲಿ ತೆಳುವಾಗಿ ಕತ್ತರಿಸಿ ಸ್ವಲ್ಪ ಒಣಗಲು ಬಿಡಿ.
- ನೀರಿನಾಂಶ ಹೆಚ್ಚಾಗಿ ಇರಬಾರದು. ಆಗ ಇದನ್ನು ಎಣ್ಣೆಯಲ್ಲಿ ಹಾಕಿ ಡೀಪ್ ಫ್ರೈ ಮಾಡಿ. ಇದರ ಮೇಲೆ ಉಪ್ಪು, ಖಾರದ ಪುಡಿ ಹಾಗೂ ಸ್ವಲ್ಪ ಪೆಪ್ಪರ್ ಪೌಡರ್ ಉದುರಿಸಿದರೆ ರುಚಿಯಾದ ಹೀರೆಕಾಯಿ ಚಿಪ್ಸ್ ಸವಿಯಲು ಸಿದ್ಧ.

ನೀರು ಇಲ್ಲದಂತೆ ಒಣಗಿದ ಬಳಿಕ, ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಬಿಸಿ ಮಾಡಿ, ಕತ್ತರಿಸಿದ ಹೀರೆಕಾಯಿ ತಂಡುಗಳನ್ನು ಹಾಕಿ

- ಕಡಿಮೆ ಉರಿಯಲ್ಲಿ ಗರಿಗರಿಯಾಗುವವರೆಗೂ ಕೈ ಆಡಿಸಿ. ಇದು ಗರಿಗರಿಯಾಗುತ್ತಿದ್ದಂತೆ ಇದರ ಘಮ ಹೆಚ್ಚಾಗುತ್ತದೆ
- ಬಳಿಕ ಇದಕ್ಕೆ ಸ್ವಲ್ಪ ಗರಂ ಮಸಾಲಾ ಪೌಡರ್, ಉಪ್ಪು, ಖಾರದ ಪುಡಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಇದು ಸಂಜೆಗೆ ಟೀ ಅಥವಾ ಕಾಫಿ ಜೊತೆಗೆ ತಿನ್ನಲು ರುಚಿಯಾಗಿರುತ್ತದೆ. ಜೊತೆಗೆ ಊಟದ ಜೊತೆಗೂ ಇದನ್ನು ತಿನ್ನಬಹುದು. ನೀವು ಇದನ್ನು ಒಮ್ಮೆ ಮನೆಯಲ್ಲಿ ಟ್ರೈ ಮಾಡಿ. ನಿಮ್ಮ ಆತ್ಮೀಯರೊಂದಿಗೆ ಸವಿಯಿರಿ. ಮತ್ತೊಂದು ವಿಧಾನದಿಂದಲೂ ಹೀರೆಕಾಯಿ ಚಿಪ್ಸ್ ತಯಾರಿಸಬಹುದು.


# ಥೈರಾಯ್ಡ್ ಸಮಸ್ಯೆ ನಿಯಂತ್ರಿಸಲು ಓಟ್ಸ್ ಸಹಕಾರಿಯೇ?

• ಉದಯವಾಹಿನಿ ಬೆಂಗಳೂರು

ತೂಕ ಇಳಿಸಲು ಹೆಚ್ಚಿನ ಜನರು ಬಳಕೆ ಮಾಡುವಂತಹ ಓಟ್ಸ್ ಥೈರಾಯ್ಡ್ ಸಮಸ್ಯೆಯು ಇರುವವರು ತಮ್ಮ ಆಹಾರ ಕ್ರಮದಲ್ಲಿ ತಪ್ಪದೆ ಬಳಕೆ ಮಾಡಿಕೊಂಡರೆ ಆಗ ಥೈರಾಯ್ಡ್ ನ್ನು ಸಮತೋಲನದಲ್ಲಿ ಇಡಲು ಸಹಕಾರಿ ಆಗುವುದು. ಪ್ರಮುಖವಾಗಿ ಓಟ್ಸ್ ನಲ್ಲಿ ಕಂಡು ಬರುವ ವಿಟಮಿನ್ ಬಿ ಮತ್ತು ಇ, ಸತು, ತಾಮ್ರ, ಮ್ಯಾಂಗನೀಸ್, ಮೆಗ್ನೀಸಿಯಮ್ ಹಾಗೂ ಕಬ್ಬಿಣಾಂಶವು, ಥೈರಾಯ್ಡ್ ಸಮಸ್ಯೆಯನ್ನು ನಿಯಂತ್ರಿಸುವಲ್ಲಿ ಸಹಕಾರಿಯಾಗಿದೆ ಎನ್ನುತ್ತಾರೆ ತಜ್ಞರು ಓಟ್ಸ್‌ನ್ನು ಹೆಚ್ಚಾಗಿ ಆರೋಗ್ಯಕಾರಿ ಆಹಾರ ಕ್ರಮವನ್ನು ಅನುಸರಿಸಿಕೊಂಡು ಹೋಗುವವರು ಬಳಸುವರು. ಇದು ಆರೋಗ್ಯಕಾರಿ ಆಯ್ಕೆ ಕೂಡ ಹೌದು. ಬೆಳಗ್ಗಿನ ಉಪಾಹಾರಕ್ಕೆ ಇದನ್ನು ಸೇವನೆ ಮಾಡಿದರೆ, ಆಗ ಆರೋಗ್ಯವೂ ಉತ್ತಮವಾಗಿರುವುದು. ಓಟ್ಸ್ ಸೇವನೆ ಮಾಡಿದರೆ ಆಗ ಇದರಿಂದ ಮಧುಮೇಹ ನಿಯಂತ್ರಣ, ಹೃದಯದ ಕಾಯಿಲೆ ಅಪಾಯ ಕಡಿಮೆ ಮಾಡಬಹುದು ಮತ್ತ ರಕ್ತದೊತ್ತಡ ನಿಯಂತ್ರಿಸಬಹುದು ಎಂದು ಹೇಳಲಾಗಿದೆ. ಅದೇ ರೀತಿಯಲ್ಲಿ ಓಟ್ಸ್ ಸೇವನೆ ಮಾಡಿದರೆ, ಆಗ ಥೈರಾಯ್ಡ್ ನ್ನು ದೂರವಿಡಬಹುದು. ಈ ಅದ್ಭುತ ಆಹಾರವು ಥೈರಾಯ್ಡ್ ಗೆ ಕೂಡ ಪರಿಣಾಮಕಾರಿ ಎಂದು ಹೇಳಲಾಗುತ್ತಿದೆ. ಥೈರಾಯ್ಡ್ ಗೆ ಇದು ಎಷ್ಟು ನೆರವಾಗುವುದು ಎನ್ನುವುದನ್ನು ತಿಳಿಯುವ ಮೊದಲು ಥೈರಾಯ್ಡ್ ಬಗ್ಗೆ ತಿಳಿದುಕೊಂಡರೆ ಒಳ್ಳೆಯದು.

**ಥೈರಾಯ್ಡ್ ನಿಯಂತ್ರಣದಲ್ಲಿ ಓಟ್ಸ್ ಪಾತ್ರ:** ಬೆಂಗಳೂರಿನ ಯಶವಂತಪುರದಲ್ಲಿರುವ ಮಣಿಪಾಲ ಆಸ್ಪತ್ರೆಯ ಮುಖ್ಯ ಡಯಟಿಷನ್ ಡಾ. ಪವಿತ್ರಾ ಎನ್. ರಾಜ್ ಅವರು ಓಟ್ಸ್ ಸೇವನೆಯಿಂದ ಥೈರಾಯ್ಡ್ ಮಟ್ಟವನ್ನು ಹೇಗೆ ಸಮತೋಲನದಲ್ಲಿಡಬಹುದು ಎಂದು ಹೇಳಿದ್ದಾರೆ. ಹಲವಾರು ಪೋಷಕಾಂಶಗಳನ್ನು ಹೊಂದಿರುವ ಓಟ್ಸ್ ಥೈರಾಯ್ಡ್ ಸಮಸ್ಯೆ ಇರುವವರಿಗೆ ಒಳ್ಳೆಯದು ಎಂದು ಹೇಳಿದ್ದಾರೆ.

**ಓಟ್ಸ್ ನಲ್ಲಿರುವ ಪೌಷ್ಟಿಕ ಸತ್ವಗಳು :** ಇದರಲ್ಲಿ ವಿಟಮಿನ್ ಬಿ ಮತ್ತು ಇ, ಸತು, ತಾಮ್ರ, ಮ್ಯಾಂಗನೀಸ್, ಮೆಗ್ನೀಶಿಯಂ ಮತ್ತು ಕಬ್ಬಿಣಾಂಶವು ಇದೆ. ಇದೆಲ್ಲವೂ ಥೈರಾಯ್ಡ್ ಹಾರ್ಮೋನ್ ಉತ್ಪತ್ತಿ ಮಾಡುವುದು ಮತ್ತು ಸಮತೋಲನ ಕಾಪಾಡುವುದು. ಇದರಲ್ಲಿ ಐಯೋಡಿನ್ ಕೂಡ ಇದ್ದು, ಥೈರಾಯ್ಡ್ ಗ್ರಂಥಿಗಳು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಹಕಾರಿ ಆಗಿದೆ.



ಓಟ್ಸ್ ನಲ್ಲಿ ಅವೆನಾಂತ್ರಮೈಡ್ಸ್ ಎನ್ನುವ ಆ್ಯಂಟಿಆಕ್ಸಿಡೆಂಟ್ ಕೂಡ ಇದೆ. ಪಾಲಿಫಿನಾಲ್ ಅಂಶವನ್ನು ಹೊಂದಿರುವ ಓಟ್ಸ್ ಉರಿಯೂತ ತಗ್ಗಿಸುವುದು ಮತ್ತು ಥೈರಾಯ್ಡ್ ಸಂಬಂಧಿ ಆಟೋಇಮ್ಯೂನ್ ಕಾಯಿಲೆಗಳ ಅಪಾಯವನ್ನು ತಗ್ಗಿಸುವುದು ಎಂದು ಅವರು ವಿವರಿಸಿದ್ದಾರೆ. ಓಟ್ಸ್ ಸೇವನೆ ಮಾಡುವುದು ಕೇವಲ ಥೈರಾಯ್ಡ್‌ಗೆ ಮಾತ್ರ ಸೀಮಿತವಾಗಿಲ್ಲ. ಇದರಲ್ಲಿ ಸಂಕೀರ್ಣ ಕಾರ್ಬೋಹೈಡ್ರೇಟ್ಸ್ ಗಳು ಮತ್ತು ಗ್ಲೈಸೆಮಿಕ್ಸ್ ಇಂಡೆಕ್ಸ್ ಕಡಿಮೆ ಇದೆ. ಇದರಲ್ಲಿನ ಹೆಚ್ಚಿನ ನಾರಿನಾಂಶವು ಚಯಾಪಚ ಯವನ್ನು ವೃದ್ಧಿಸುವುದು ಮತ್ತು ಇಡೀ ಧಾನ್ಯವನ್ನು ವಿಘಟಿಸಲು ಕಠಿಣವಾಗಿ ಕೆಲಸ ಮಾಡುವುದು. ಇದು ದೇಹಕ್ಕೆ ಶಕ್ತಿ ಒದಗಿಸುವುದು.

**ಥೈರಾಯ್ಡ್ ಗೆ ಓಟ್ಸ್ ಬಳಕೆ ಹೇಗೆ?:** ಥೈರಾಯ್ಡ್ ಗ್ರಂಥಿಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಲು ಓಟ್ಸ್ ಒಳ್ಳೆಯ ಆಹಾರ ಮತ್ತು ಥೈರಾಯ್ಡ್ ನಿಂದ ಬಳಲುತ್ತಿರುವವರು ಇದನ್ನು ತಪ್ಪದೆ ಆಹಾರ ಕ್ರಮದಲ್ಲಿ ಬಳಸಬೇಕು. ಥೈರಾಯ್ಡ್ ಸಮಸ್ಯೆಗೆ ಅನುಗುಣವಾಗಿ 30-50 ಗ್ರಾಂನಷ್ಟು ಓಟ್ಸ್‌ನ್ನು ಪ್ರತಿನಿತ್ಯವೂ ಸೇವನೆ ಮಾಡಬೇಕು. ಓಟ್ಸ್ ಗಂಜಿ, ಓಟ್ಸ್ ಉಪ್ಮ, ಓಟ್ಸ್ ಸ್ಮೂಥಿ, ಓಟ್ಸ್ ಚಿಲ್ಲಾ ಅಥವಾ ದೋಸೆ ಮಾಡಿಕೊಂಡು ಇದನ್ನು ಬಳಸಬಹುದು.

### ಥೈರಾಯ್ಡ್ ಕಾಯಿಲೆ ಎಂದರೇನು?

**ಕುತ್ತಿಗೆಯ ಭಾಗದಲ್ಲಿ ಚಿಟ್ಟೆಯ ಆಕಾರದಲ್ಲಿ ಥೈರಾಯ್ಡ್ ಗ್ರಂಥಿಯು ಇದೆ. ಸೆಂಟರ್ ಫಾರ್ ಡಿಸೀಸ್ ಪ್ರಿವೆಂಟೇಷನ್ ಆ್ಯಂಡ್ ಕಂಟ್ರೋಲ್(ಸಿಡಿಸಿ) ಪ್ರಕಾರ ಥೈರಾಯ್ಡ್ ಗ್ರಂಥಿಯಲ್ಲಿ ಯಾವುದೇ ರೀತಿಯ ಪರಿಣಾಮವಾದರೂ ಅದು ಆರೋಗ್ಯದ ಮೇಲೆ ಪರಿಣಾಮ ಬೀರುವುದು. ಥೈರಾಯ್ಡ್ ಹಾರ್ಮೋನ್ ಉಸಿರಾಟ, ಜೀರ್ಣಕ್ರಿಯೆ, ಮನಸ್ಥಿತಿ, ತೂಕ ಮತ್ತು ಹೃದಯ ಬಡಿತದ ಮೇಲೆ ಪರಿಣಾಮ ಬೀರುವುದು. ಸರಿಯಾದ ಆಹಾರ ಸೇವನೆ ಮಾಡಿದರೆ, ಆಗ ಇದರಿಂದ ಥೈರಾಯ್ಡ್ ಹಾರ್ಮೋನ್ ಗಳನ್ನು ಸರಿಯಾಗಿ ಟ್ಟುಕೊಳ್ಳಬಹುದು**

**ಕೊನೆ ಮಾತು :** ಅಯೋಡಿನ್ ಪ್ರಮಾಣ ಹೆಚ್ಚಿಸುವ ಆಹಾರ ಪದಾರ್ಥಗಳನ್ನು ತಮ್ಮ ದೈನಂದಿನ ಆಹಾರ ಪದ್ಧತಿಯಲ್ಲಿ ಸೇರಿಸಿಕೊಳ್ಳುವುದರಿಂದ ಥೈರಾಯ್ಡ್ ಸಮಸ್ಯೆಯನ್ನು ನಿರ್ವಹಣೆ ಮಾಡಿಕೊಳ್ಳಬಹುದು. ಥೈರಾಯ್ಡ್ ಇರುವವರು ಆದಷ್ಟು ನಾರಿನಾಂಶ ಹೆಚ್ಚಿರುವ ಆಹಾರ ಪದಾರ್ಥಗಳನ್ನು ತಮ್ಮ ಆಹಾರ ಪದ್ಧತಿಯಲ್ಲಿ ಬಳಸಿಕೊಳ್ಳಬೇಕು.ಇನ್ನು ಮಾನಸಿಕ ಒತ್ತಡವನ್ನು ನಿರ್ವಹಣೆ ಮಾಡಿಕೊಳ್ಳುವುದರಿಂದ ಕೂಡ ಥೈರಾಯ್ಡ್ ರೋಗ ಲಕ್ಷಣಗಳನ್ನು ಕಡಿಮೆ ಮಾಡಿಕೊಳ್ಳಬಹುದು ಇನ್ನು ಆರೋಗ್ಯಕಾರಿ ಜೀವನಶೈಲಿಯ ಜೊತೆಗೆ ನಿಯಮಿತ ವ್ಯಾಯಾಮ ಮಾಡುವುದರಿಂದ ಕೂಡ ಥೈರಾಯ್ಡ್ ಸಮಸ್ಯಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು

# ಜನಾರ್ಧನರೆಡ್ಡಿಯಿಂದ ಹಿಟ್ಲರ್ ಧೋರಣೆ: ಇವರಿಂದ ಬಿಜೆಪಿಗೆ ಉಳಿಗಾಲವಿಲ್ಲ

## ಜನಾರ್ಧನರೆಡ್ಡಿ ಅವರು ಸಂಡೂರು ಉಪ ಚುನಾವಣೆಗೆ ಬಾರದೇ ಇದ್ದರೆ ಪಕ್ಷಕ್ಕೆ ಗೆಲುವು ಕಟ್ಟಿಟ್ಟ ಬುತ್ತಿಯಾಗಿತ್ತು: ಕೆ.ಎ.ರಾಮಲಿಂಗಪ್ಪ

• ಉದಯವಾಹಿನಿ ಬಳ್ಳಾರಿ

ಜನಾರ್ಧನರೆಡ್ಡಿ ಅವರು ಸಂಡೂರು ಉಪ ಚುನಾವಣೆಗೆ ಬಾರದೇ ಇದ್ದರೆ, ಯಾರೇ ಅಭ್ಯರ್ಥಿಯಾಗಿದ್ದರೂ ಪಕ್ಷಕ್ಕೆ ಗೆಲುವು ಕಟ್ಟಿಟ್ಟ ಬುತ್ತಿಯಾಗಿತ್ತು. ಜನಾರ್ಧನರೆಡ್ಡಿಯ ಆರ್ಭಟದಿಂದಲೇ ಪಕ್ಷಕ್ಕೆ ಸೋಲಾಯಿತೇ ಹೊರತು, ಶ್ರೀರಾಮುಲು ಅವರು ಕಾರಣ ಅಲ್ಲ ಎಂದು ಪಕ್ಷದ ಜಿಲ್ಲೆಯ ಹಿರಿಯ ಮುಖಂಡ ಕೆ.ಎ.ರಾಮಲಿಂಗಪ್ಪ ಹೇಳಿದ್ದಾರೆ.

ಸಂಡೂರು ಉಪ ಚುನಾವಣೆಯಲ್ಲಿ ಬಂಗಾರು ಹನುಮಂತ ಅವರು ನಾಮಪತ್ರ ಸಲ್ಲಿಸುವ ಮುನ್ನವೇ ಪಕ್ಷದ ಶಾಸಕರಿಗೆ, ಮುಖಂಡರಿಗೆ ಹೇಳಿದ್ದೆ. ಜನಾರ್ಧನರೆಡ್ಡಿ ಅವರಿಗೆ ಚುನಾವಣೆಯ ನೇತೃತ್ವ ವಹಿಸಿದರೆ ಸೋಲು ಗ್ಯಾರೆಂಟಿ ಎಂದು. ಆದರೆ ಪಕ್ಷದ ಮುಖಂಡರು ನನ್ನ ಮಾತು ಕೇಳಲಿಲ್ಲ. ಅಧಿಕಾರದಲ್ಲಿದ್ದಾಗ ಸಂಡೂರು ಜನತೆ ಮೇಲೆ ಮಾಡಿದ ಅನ್ಯಾಯವನ್ನು ಜನತೆ ಮರೆತಿಲ್ಲ. ಹಾಗಾಗಿ ಪಕ್ಷಕ್ಕೆ ಸೋಲಾಯಿತು ಎಂದಿದ್ದಾರೆ.

ಶ್ರೀರಾಮುಲು ಅವರ ಶಕ್ತಿಯಿಂದಲೇ ರೆಡ್ಡಿ ಅವರು ಜಿಲ್ಲೆಯನ್ನು ಆಳಿದ್ದು. ಸ್ನೇಹಿತನಾದರೂ ರಾಮುಲು ಅವರಿಗೆ ಜಿಲ್ಲೆ ಉಸ್ತುವಾರಿ ನೀಡದೇ. ತಾವೇ ವಹಿಸಿಕೊಂಡು ಜಿಲ್ಲೆಯನ್ನಾಳಿದರು. ಈ ವೇಳೆ ಪ್ರಬಲ ಲಿಂಗಾಯತ ನಾಯಕ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದಾಗ, ತಾವೇ ಮುಖ್ಯಮಂತ್ರಿ ಆಗಬೇಕೆಂದು ಪಕ್ಷದ ಶಾಸಕರಲ್ಲಿ ಬಂಡಾಯ ಸೃಷ್ಟಿ ಮಾಡಿ ಅವರನ್ನು ಹೈದ್ರಾಬಾದ್ ಗೆ ಕರೆದುಕೊಂಡು ಹೋಗಿದ್ದರು. ಅಂತಹ ರೆಡ್ಡಿಯವರು ಈಗ ಯಡಿಯೂರಪ್ಪನವರನ್ನು ತಂದೆ ಎನ್ನುತ್ತಿದ್ದಾರೆ. ಸ್ವಾಭಿಮಾನಿ ಎಂದು ಶ್ರೀರಾಮುಲು ಅವರ ತಲೆ ಬೋಳಿಸುವಂತೆ ಮಾಡಿ, ವಾಲ್ಮೀಕಿ ಸಮುದಾಯದ ನಾಯಕನಿಗೆ ಅಪಮಾನ ಮಾಡುವಂತೆ ಮಾಡಿದರು.

ಪಕ್ಷದ ವಿರುದ್ಧ ಶ್ರೀರಾಮುಲು ಅವರನ್ನು ಎತ್ತಿಕಟ್ಟಿ ಹೊಸ ಪಕ್ಷ ಕಟ್ಟುವಂತೆ ಮಾಡಿದ್ದೇ ಜನಾರ್ಧನರೆಡ್ಡಿಯವರು.

ರೆಡ್ಡಿಯವರು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ವಿರುದ್ಧ ಇತ್ತೀಚೆಗೆ ಗಂಗಾವತಿಯಲ್ಲಿ ಕಾರು ಚಲಾಯಿಸಿ ದರ್ಪ ಪ್ರದರ್ಶಿಸಿದರು. ಪಕ್ಷದ ವಿರುದ್ಧ ತೊಡೆ ತಟ್ಟಿ ಕೆಆರ್ ಪಿ ಪಕ್ಷ ಕಟ್ಟಿ ಜಿಲ್ಲೆಯಲ್ಲಿ ಬಿಜೆಪಿ ಎರಡು ಹೋಳು ಆಗುವಂತೆ ಮಾಡಿದರು. ಪಕ್ಷಕ್ಕೆ ಬಂದ ಮೇಲೂ ಬ್ಯಾನರ್ ಗಳಲ್ಲಿ ಗಂಡ ಹೆಂಡತಿ ಬಿಟ್ಟರೆ ಬೇರೆಯವರು ಇಲ್ಲಾ ಎನ್ನುವಂತೆ ಪ್ರದರ್ಶಿಸುತ್ತಿದ್ದಾರೆ.

ರೆಡ್ಡಿ ಅವರು ಪಕ್ಷದಲ್ಲಿ ಬಂಗಾರು ಹನುಮಂತ ಅವರನ್ನು ಬಲಿ ಪಶು ಮಾಡಲು ಹೊರಟಿದ್ದಾರೆ.


ಉದಯವಾಹಿನಿ ಚಿತ್ರ

**ವಾಲ್ಮೀಕಿ ಸಮುದಾಯದ ನಾಯಕನಿಗೆ ಅಪಮಾನ**

> ಜನಾರ್ಧನರೆಡ್ಡಿ ಅವರದ್ದು ಹಿಟ್ಲರ್ ಮನೋಭಾವ, ತಾನು ಬೆಳೆಯಬೇಕೆಂದರೆ ಜೊತೆಗಿದ್ದ ಎಂತಹವರನ್ನು ಬಲಿಕೊಡುವ ವ್ಯಕ್ತಿತ್ವ ಅವರದ್ದು ಅವರ ಆಧಾರ ರಹಿತ ಆರೋಪಗಳಿಗೆ ಪಕ್ಷ ಮಹತ್ವ ನೀಡಿದರೆ ಜಿಲ್ಲೆಯಲ್ಲಿ ಪಕ್ಷಕ್ಕೆ ಅದೋಗತಿ ಬರಲಿದೆ. ಅದಕ್ಕೆ ಅವಕಾಶ ನೀಡಬಾರದು. ಶ್ರೀರಾಮುಲು ಅವರ ಬೆಂಬಲಕ್ಕೆ ನಾವೆಲ್ಲ ಇದ್ದೇವೆ. ಪಕ್ಷವನ್ನು ಅವರ ಮಾರ್ಗದರ್ಶನದಲ್ಲಿಯೇ ಬಲಪಡಿಸುತ್ತೇವೆ
> -ಕೆ.ಎ.ರಾಮಲಿಂಗಪ್ಪ

ಇದನ್ನು ಪಕ್ಷ ಮತ್ತು ಕಾರ್ಯಕರ್ತರು ಅರಿತುಕೊಳ್ಳಬೇಕಿದೆ. ಜಿಲ್ಲೆಯಲ್ಲಿ ಪ್ರಬಲವಾಗಿರುವ ವಾಲ್ಮೀಕಿ ಸಮುದಾಯದ ಮುಖಂಡ ಶ್ರೀರಾಮುಲು ಅವರ ಚಾರಿತ್ರ್ಯ ವಧೆಗೆ ಮುಂದಾದರೆ ಆ ಸಮುದಾಯವೇ ರೆಡ್ಡಿ ಅವರಿಗೆ ಪಾಠ ಕಲಿಸುವ ಸಾಧ್ಯತೆ ಇದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದುಳಿದ ಸಮುದಾಯದ ನಾಯಕ ಶ್ರೀರಾಮುಲು ಅವರ ಪ್ರಭಾವ ಇದೆ.

- ಜನಾರ್ಧನರೆಡ್ಡಿಯಿಂದಲೇ ಸಂಡೂರನಲ್ಲಿ ಪಕ್ಷಕ್ಕೆ ಸೋಲು
- ನಾಮಪತ್ರ ಸಲ್ಲಿಸುವ ಮುನ್ನವೇ ಇದನ್ನು ಹೇಳಿದ್ದೆ.
- ಶ್ರೀರಾಮುಲು ಬೆಂಬಲಕ್ಕೆ ನಾವಿದ್ದೇವೆ.
- ಯಡಿಯುರಪ್ಪನವರ ವಿರುದ್ಧ ಬಂಡಾಯಕ್ಕೆ ರೆಡ್ಡಿಯೇ ಕಾರಣರಾಗಿದ್ದರು.
- ಶ್ರೀರಾಮುಲು ಶಕ್ತಿಯಿಂದಲೇ ರೆಡ್ಡಿ ಬೆಳೆದಿದ್ದು.
- ಗಂಡ ಹೆಂಡತಿ ಪಕ್ಷವಾಗಲು ಬಿಡಲ್ಲ.

ನಾವೆಲ್ಲ ಹಿಂದುಳಿದವರು ಅವರ ಬೆನ್ನಿಗಿದ್ದೇವೆ. ಜನಾರ್ಧನರೆಡ್ಡಿ ಅವರು ಶ್ರೀರಾಮುಲು ಅವರ ಸ್ನೇಹ ಬೆಳಸಿಕೊಂಡೆ ಬೆಳೆದು, ಈಗ ಅವರ ವಿರುದ್ಧವೇ ಪಕ್ಷದಲ್ಲಿ ಸಂಚು ರೂಪಿಸುವುದು ಸರಿಯಾದ ಕ್ರಮ ಅಲ್ಲ. ಏನೇ ಆಗಲಿ ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಉಳಿಯಬೇಕೆಂದರೆ ಶ್ರೀರಾಮುಲು ಬೇಕು. ಇಲ್ಲದಿದ್ದರೆ ಪಕ್ಷ ಉಳಿಗಾಲವಿಲ್ಲ ಎಂದಿದ್ದಾರೆ ರಾಮಲಿಂಗಪ್ಪ ಅವರು.

# ಅರಸೀಕೆರೆ ಸಮಾಜ ಕಲ್ಯಾಣ ಇಲಾಖೆ ಎಚ್ ಬಿ .ಸತೀಶ್ ರವರಿಗೆ ಪಿಎಚ್‌ಡಿ ಪ್ರದಾನ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆಯ ಡಾ. ಬಿ ಆರ್ ಅಂಬೇಡ್ಕರ್ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿರುವ ಎಚ್ ಬಿ ಸತೀಶ್ ರವರು ಜ್ಞಾನ ಸಹ್ಯಾದ್ರಿ ಶಂಕರಘಟ್ಟ ಶಿಕ್ಷಣ ವಿಭಾಗದ ಡಾ. ಗೀತಾ ಸಿ ರವರ ಮಾರ್ಗದರ್ಶನದಲ್ಲಿ ಶಿಕ್ಷಣ ವಿಭಾಗದಲ್ಲಿ ಮಂಡಿಸಿದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಮೌಲ್ಯ ಮಾಪನಾತ್ಮಕ ಅಧ್ಯಯನ. ಎಂಬ ಮಹಾ ಪ್ರಬಂಧಕ್ಕೆ ದಿನಾಂಕ 22 .1. 2025 ರಂದು ನಡೆದ ಕುವೆಂಪು ವಿಶ್ವವಿದ್ಯಾನಿಲಯದ 34ನೇ ಘಟಿಕೋತ್ಸವ ಸಮಾರಂಭದಲ್ಲಿ ಡಾಕ್ಟರ್ ಎಚ್ ಬಿ ಸತೀಶ್ ರವರನ್ನು ಅಪಾರ ಗೌರವಗಳೊಂದಿಗೆ ಮಾನ್ಯ ಕುಲಪತಿಗಳಾದ ರಾಜ್ಯಪಾಲರು ಗೌರವಿಸಿದ್ದಾರೆ. ಈ ಹಿಂದೆ ಎಚ್‌ವಿ ಸತೀಶ್‌ರವರು ಸಮಾಜ ಕಲ್ಯಾಣ ಇಲಾಖೆಯ ವಾರ್ಡನ್ ಸಂಘದ ಜಿಲ್ಲಾಧ್ಯಕ್ಷರಾಗಿ ಲಯನ್ಸ್ ಕ್ಲಬ್‌ನ ಕಾರ್ಯದರ್ಶಿಯಾಗಿ ಸರ್ಕಾರಿ ನೌಕರಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು ಇವರಿಗೆ ಇಲಾಖೆ ಮುಖ್ಯಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.


ಉದಯವಾಹಿನಿ ಚಿತ್ರ

**ಅರಸಿಕೆರೆ ನಗರಸಭೆ ಅಧ್ಯಕ್ಷರಿಂದ ಅಭಿನಂದನೆ**

ಅರಸೀಕೆರೆ ನಗರಸಭೆ ಅಧ್ಯಕ್ಷರಾದ ಎಂ ಶಮಿವುಲ್ಲಾ ರವರು ಮತ್ತು ನಗರಸಭೆ ಉಪಾಧ್ಯಕ್ಷರಾದ ಮನೋಹರ್ ಸೇರಿದಂತೆ ಹಲವಾರು ನಗರಸಭಾ ಸದಸ್ಯರುಗಳು ಸಂಘ ಸಂಸ್ಥೆಯ ಮುಖಂಡರು ಪಿ ಎಚ್ ಡಿ ಪಡೆದಿರುವ ಡಾಕ್ಟರ್ ಎಚ್ ಬಿ ಸತೀಶ್ ರವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ವಾರ್ಷಿಕ ದಿನದರ್ಶಿಕೆ ಸಂಸ್ಕೃತಿಯ ಪ್ರತೀಕ: ಜ್ಯೋತಿ ಎಸ್.ಕಾಳೆ

• ಉದಯವಾಹಿನಿ, ಚಿಂಚೋಳಿ

ಗೋಡೆಯ ಮೇಲಿನ ಗಡಿಯಾರ 24ಗಂಟೆ ನಿರಂತರವಾಗಿ ಸಮಯ ತೋರಿಸುತ್ತಾ ಕೆಲಸದ ಎಚ್ಚೆರಿಕೆ ನೀಡುತ್ತೆ ಹಾಗೆಯೇ ದಿನದರ್ಶಿಕೆಯೂ ಕೂಡ ವರ್ಷದ 365ದಿನಗಳ ಮಹತ್ವ ನೀಡುತ್ತಾ ವಾರ್ಷಿಕ ದಿನದರ್ಶಿಕೆಗಳು ಸಂಸ್ಕೃತಿಯ ಪ್ರತೀಕವಾಗಿವೆ ಎಂದು ಹಿರಿಯ ಶ್ರೇಣಿ ನ್ಯಾಯಾಧೀಶರಾದ ಜ್ಯೋತಿ ಶಾಂತಪ್ಪ ಕಾಳೆ ಹೇಳಿದರು.

ಪಟ್ಟಣದ ತಾಲ್ಲೂಕಾ ಕ್ರೀಡಾಂಗಣದಲ್ಲಿ ನ್ಯಾಯಾಲಯ ಸಿಬ್ಬಂದಿ ವರ್ಗದವರು ಹಾಗೂ ವಕೀಲರ ಸಂಘದ ವತಿಯಿಂದ ಹಮ್ಮಿಕೊಂಡ ಕ್ರೀಡಾಕೂಟದ ಕಾರ್ಯಕ್ರಮದಲ್ಲಿ **ಉದಯವಾಹಿನಿ** ಕನ್ನಡ ದಿನಪತ್ರಿಕೆ ವತಿಯಿಂದ ಹೊರತಂದಿರುವ 2025ರ ದಿನದರ್ಶಿಕೆ (ಕ್ಯಾಲೆಂಡರ್) ಅನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ದಿನದರ್ಶಿಕೆಯು ಹಬ್ಬ ಹುಣ್ಣಿಮೆ ಹರದಿನಗಳು ತಿಳಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ, ನ್ಯಾಯಾಲಯದ ಮುಖ್ಯ ಲೀಪಿಕಾಧೀಕಾರಿ ರವಿಕುಮಾರ ಮತ್ತು ವೀರಣ್ಣ, ಪ್ರಶಾಂತ, ವಕೀಲರುಗಳಾದ ಶಂಕರ ರಾಠೋಡ್, ಚಂದ್ರಶೇಟ್ಟಿ ಜಾಧವ, ಶಶಿಕಾಂತ ಅಡಕಿ, ಸೂರ್ಯಾಕಾಂತ ಚಿಂಚೋಳಿಕರ್, ಜಗನ್ನಾಥ ಗಂಜಗಿರಿ, ಬಿ.ಸುದರ್ಶನ್, ರಾಮಲಿಂಗ ಬೀರನಳ್ಳಿ, ರಾಜೇಂದ್ರ ವರ್ಮಾ, ಉಮೇಶ ಪಾಟೀಲ, ಸೂರ್ಯಾಕಾಂತ ಗಾರಂಪಳ್ಳಿ, ಚಂದ್ರಶೇಖರ್ ಮಲಸಾ, ಗಿರಿಧರ ಹುಡಗಿ, ಸುನಿಲ್ ಸೋಲಾಪೂರ, ಅರುಣ ಹೆಗ್ಡೆ, ನಾಗಭೂಷಣ ಹೂಲಗುಂಡಿ, ಪೋಲಿಸರು ಸುರೇಶ, ಮಾರುತಿ, ಗವಿ,ಸುಖಮನಿ, ನ್ಯಾಯಾಲಯ ಸಿಬ್ಬಂದಿ ವರ್ಗದವರಾದ ಸಂಗಮೇಶ ಕೋಡ್ಲಿ, ಡಾ.ಕಿರಣ, ಮಾಳಪ್ಪಾ ಪೂಜಾರಿ, ರಮೇಶ ತಳವಾರ, ಕಿರಣ,ರಾಜಕುಮಾರ,ಅನೇಕರಿದ್ದರು.


ಉದಯವಾಹಿನಿ ಚಿತ್ರ

> ದಿನದರ್ಶಿಕೆಯು ದಿನಾಂಕ ಜೋತೆ ನಾವು ಮಾಡುವ ಕೆಲಸ ದಿನ ನೆನೆಪಿಸುತ್ತದೆ,ವಾರ ಪಂಚಾಂಗ ರಜೆ ದಿನಗಳು ಸ್ವವಿಸ್ತಾರವಾಗಿ ದಿನದರ್ಶಿಕೆಯಲ್ಲಿ ನಾವೆಲ್ಲರೂ ಕಾಣಬಹುದು ಇದರಿಂದ ಪತ್ರಿಕೆಯ ಪ್ರಚಾರ ಕೂಡ ಆಗುತ್ತದೆ
> -ದತ್ತುಕುಮಾರ ಜವಳಕರ್
> ಪ್ರಧಾನ ಸಿವಿಲ್ ನ್ಯಾಯಾಧೀಶ

# ರಾಜಧಾನಿ ಎಕ್ಸ್‌ಪ್ರೆಸ್ ಯಾದಗಿರಿ ರೈಲ್ವೆನಿಲ್ದಾಣದಲ್ಲಿ ನಿಲುಗಡೆ

• ಉದಯವಾಹಿನಿ ಯಾದಗಿರಿ

ಕಲ್ಯಾಣ ಕರ್ನಾಟಕ ಅದರಲ್ಲೂ ಯಾದಗಿರಿ ಜಿಲ್ಲೆಯ ಪ್ರಯಾಣಿಕರ ಬಹುದಿನಗಳ ಬೇಡಿಕೆಗೆ ಸ್ಪಂದಿಸಿರುವ ರೈಲ್ವೆ ಸಚಿವಾಲಯ ಈಗ ರಾಜಧಾನಿ ಎಕ್ಸಪ್ರೆಸ್ ರೈಲನ್ನು ಪ್ರಾಯೋಗಿಕವಾಗಿ ದಿನಾಂಕ : 27-01-2025 ರಂದು ನಿಲುಗಡೆಗೆ ಅನುಮೋದನೆ ನೀಡಿರುವುದು ಸ್ವಾಗತಾರ್ಹ ಎಂದು ಅಖಿಲ ಭಾರತ ಕರ್ನಾಟಕ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ ಮುದ್ನಾಳರವರ ನಮ್ಮ ಹೋರಾಟಕ್ಕೆ ಸದಾ ಜಯ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

**ಉಮೇಶ ಕೆ. ಮುದ್ನಾಳ ಹರ್ಷ**

ಯಾದಗಿರಿ ರೈಲು ನಿಲ್ದಾಣದಿಂದ ಪ್ರತಿ ನಿತ್ಯ ಬಹುಸಂಖ್ಯೆಯಲ್ಲಿ ಸಾರ್ವಜನಿಕರು ರೈಲನಲ್ಲೆ ಪ್ರಯಾಣವನ್ನೇ ನೆಚ್ಚಿಕೊಂಡಿದ್ದು ಈಗ ಬೆಂಗಳೂರು- ದೆಹಲಿ (ರೈಲು ಸಂಖ್ಯೆ: 22691/22692) ರೈಲುಗಾಡಿ ಯಾದಗಿರಿ ರೈಲು ನಿಲ್ದಾಣದಲ್ಲಿ ಪ್ರಾಯೋಗಿಕ ನಿಲುಗಡೆಗೆ ಅನುಮೋದನೆ ದೊರೆತ, ಹಿನ್ನೆಯಲ್ಲಿ ಚಿತ್ತಾಪೂರ ರಸ್ತೆಯಲ್ಲಿರುವ ಶ್ರೀ ಆಂಜನೇಯ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ಸಿಹ ಸಂಭ್ರಮಿಸಿ ಜೈಕಾರ ಹಾಕಿದರು, ಇದರ ಪ್ರಯೋಜನವನ್ನು ರೈಲಿನಲ್ಲಿ ಪ್ರಯಾಣಿಕರು ಇದರ ಸದುಯೋಪಗ ಪಡೆದುಕೊಳ್ಳಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಕುರಿತು ರೇಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಈ ಹಿಂದೆ ಯಾದಗಿರಿಗೆ ಆಗಮಿಸಿದ ಸಂದರ್ಭದಲ್ಲಿ ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಈ ಭಾಗದ ಜನರ ಬಹುದಿನಗಳ ಬೇಡಿಕೆ ಈಡೇರಿಕೆಗಾಗಿ ಕೋರಲಾಗಿತ್ತು. ಇದಕ್ಕೆ ಸ್ಪಂದಿಸಿದ ಸಚಿವರು ಈಗ ರೈಲು ನಿಲುಗಡೆಗೆ ಅನುಮೋದನೆ ನೀಡಿರುವುದು ಸ್ವಾಗತಾರ್ಹ. ಸಚಿವರಿಗೆ ಸಾರ್ವಜನಿಕರ ಪರವಾಗಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಗಿರಿನಾಡು ಕಾರು ಚಾಲಕರ ಸಂಘದ ಜಿಲ್ಲಾ ಅಧ್ಯಕ್ಷರು ಬಸವರಾಜ ಇಟಗಿ,ಕರ್ನಾಟಕ ರಾಜ್ಯ ಚಾಲಕರ ಪರಿಷತ್ತು ಆಟೋ ಚಾಲಕರ ಜಿಲ್ಲಾ ಅಧ್ಯಕ್ಷರು ಲಕ್ಷ್ಮಣ ಚವ್ಹಾಣ, ಜಗದೀಶ ಸ್ವಾಮಿ, ಬಾಬುಖಾನ್, ರಫೀಕ್ ಪಟೇಲ್, ಮಲ್ಲೇಶ, ದೊಡ್ಡಯ್ಯಸ್ವಾಮಿ, ಅಜೀಜ್ ಪಟೇಲ್, ಜಮ್ಲಾ ಖುರಶೀದ್, ಶಿವಶರಣಪ್ಪ, ಹನುಮಯ್ಯ, ಈಶ್ವರ, ಮರಗಪ್ಪ, ಆಶಪ್ಪ, ಮಲ್ಲಯ್ಯ, ದೇವಿಂದ್ರಪ್ಪ, ದ್ಯಾನಪ್ಪ, ಅಕ್ರಂ ಹುಸೇನ್, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ವಂದೇ ಭಾರತ್ ಮತ್ತು ರಾಜದಾನಿ ಎಕ್ಸ್ಪ್ರೆಸ್ ರೈಲು ನಿಲುಗಡೆಗೆ ಮಾಡಿರುವದಕ್ಕೆ ರೈಲ್ವೆ ಇಲಾಖೆಗೆ ಕೃತಜ್ಞತೆ ಸಲ್ಲಿಸುತ್ತೆವೆ. ಆದರೆ ಇನ್ನುಳಿದ 12 ಎಕ್ಸ್ಪ್ರೆಸ್ ರೈಲು ಗಾಡಿಗಳು ನಿಲ್ಲವಂತಾಗಬೇಕು. ಕೋರಾನದಲ್ಲಿ ರದ್ದಾದ ಇಂಟರ್ ಸೀಟ್ ರೈಲುಗಾಡಿಎನ್ನು ಮರು ಆರಂಭವಾಗಬೇಕು ಇಲ್ಲದಿದ್ದಲ್ಲಿ ನಿರಂತರ ಹೋರಾಟ ಮಾಡಲಾಗುವುದು -ಉಮೇಶ ಮುದ್ನಾಳ,
> ಸಾಮಾಜಿಕ ಹೋರಾಟಗಾರ, ಅಖಿಲ ಭಾರತ ಕರ್ನಾಟಕ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ

# ಕಲ್ಲು ಸುಣ್ಣಕ್ಕೆ ಬೇಡಿಕೆ ತಂದ ಅಡಿಕೆ ಬೆಳೆ ವಿಸ್ತರಣೆ

• ಉದಯವಾಹಿನಿ, ಮಾಯಕೊಂಡ

ಮನೆ, ಅಂಗಡಿ, ಶಾಲೆ ಮತ್ತಿತರ ಕಟ್ಟಡಗಳ ಗೋಡೆಗೆ ಬಣ್ಣ ಹಚ್ಚಲು ಶುರು ಮಾಡಿದ ನಂತರ ಬೇಡಿಕೆ ಕಳೆದುಕೊಂಡಿದ್ದ ಸುಣ್ಣಕ್ಕೆ ಅಡಿಕೆ ಬೆಳೆ ಮುನ್ನೆಲೆಗೆ ಬಂದಾಗಿನಿಂದ ಬೇಡಿಕೆ ಸೃಷ್ಟಿಯಾಗಿದ್ದು, ಸುಣ್ಣ ಮಾರುವವರಲ್ಲಿ ಸಂತಸ ಮೂಡಿದೆ.

ಈ ಹಿಂದೆ ಮನೆಗಳಿಗೆ ಸುಣ್ಣ ಬಳಿದು ಸಿಂಗರಿಸಲಾಗುತ್ತಿತ್ತು.

ಕಾಲಾಂತರದಲ್ಲಿ ಬಣ್ಣಗಳ ಹಾವಳಿಯಿಂದಾಗಿ ಕಲ್ಲು ಸುಣ್ಣ ಹಾಗೂ ಸುಣ್ಣ ಸುಡುವ ಗುಮ್ಮಗಳು ನೇಪತ್ಯಕ್ಕೆ ಸರಿದಿದ್ದವು. ಸುಣ್ಣದ ವ್ಯಾಪಾರವನ್ನೇ ನಂಬಿಕೊಂಡಿದ್ದ ಕುಟುಂಬಗಳು ಸುಣ್ಣದ ಬಳಕೆ ಕಡಿಮೆಯಾದ ಕಾರಣ ಕಸುಬು ಬಿಟ್ಟು ಬೇರೆ ದಾರಿ ಹಿಡಿದಿದ್ದರು. ಆದರೆ, ಇಂದು ಅಡಿಕೆ ಬೆಳೆಯಿಂದ ಸುಣ್ಣಗಾರರ ಕಸುಬಿಗೆ ಮರುಜೀವ ಸಿಕ್ಕಿದೆ. ಅಡಿಕೆ ಬೆಳೆಗಳ ರಕ್ಷಣೆಗೆ ಸುಣ್ಣ ಇಂದು ಅಗತ್ಯವಾಗಿ ಬೇಕಿದೆ. ಅಡಿಕೆ ಗಿಡದ ಕಾಂಡ ಬಿಸಿಲಿನ ತಾಪಕ್ಕೆ ಸುಟ್ಟು ಸೀಳಿ ಹೋಗುವುದರಿಂದ ಅದರ ರಕ್ಷಣೆಗೆ ಸುಣ್ಣದ ಲೇಪನ ಮಾಡುವುದು ಸಾಮಾನ್ಯವಾಗಿದೆ. ಆದ್ದರಿಂದ ಅಡಿಕೆ ಬೆಳೆಗಾರರು ಸುಣ್ಣ ಖರೀದಿಗೆ ಮುಂದಾಗುತ್ತಿದ್ದಾರೆ. ಹಲವು ವರ್ಷಗಳ ಹಿಂದೆ ಸುಣ್ಣ ಸುಡುವ ಹಾಗೂ ಮಾರಾಟ ಮಾಡುವ ಕಸುಬು ತೊರೆದಿದ್ದವರು ಇಂದು ಮತ್ತೆ ಸುಣ್ಣದ ಕಲ್ಲುಗಳನ್ನ ತಂದು ಗುಮ್ಮಿಗಳಲ್ಲಿ ಸುಟ್ಟು ಮಾರಾಟ ಮಾಡುತ್ತಿದ್ದಾರೆ. ನೇರವಾಗಿ ಸುಣ್ಣದ ಪೌಡರ್ ಬಣ್ಣದ ಅಂಗಡಿಗಳಲ್ಲಿ ಕಡಿಮೆ ದರದಲ್ಲಿ ದೊರೆಯುತ್ತದೆಯಾದರೂ ಪೌಡರ್ ಸುಣ್ಣಕ್ಕಿಂತ ಕಲ್ಲು ಸುಣ್ಣಕ್ಕೆ ಬೇಡಿಕೆ ಹೆಚ್ಚಾಗಿದೆ.

ಹತ್ತು ಕೆ.ಜಿ. ತೂಕದ ಒಂದು ಚೀಲ ಕಲ್ಲು ಸುಣ್ಣಕ್ಕೆ 220ರಿಂದ 250ರವರೆಗೂ ಮಾರಾಟ ಮಾಡಲಾಗುತ್ತಿದೆ. ಪ್ರತಿ ಕೆ.ಜಿ ಕಲ್ಲುಸುಣ್ಣಕ್ಕೆ 25 ಬೆಲೆ ಇದೆ. ಆದರೂ ರೈತರು ಕಲ್ಲು ಸುಣ್ಯವನ್ನೇ ಖರೀದಿಸುತ್ತಿದ್ದಾರೆ. 'ನಾವು ಸುಣ್ಯದ ಕಸುಬು ಬಿಟ್ಟು ಹಲವು ವರ್ಷಗಳಾದವು.

ಅಡಿಕೆ ಬೆಳೆ ಹೆಚ್ಚಾದ ನಂತರದಲ್ಲಿ ಪ್ರತಿ ವರ್ಷ ಡಿಸೆಂಬರ್ ವೇಳೆಗೆ ಒಂದೆರಡು ತಿಂಗಳು ವ್ಯಾಪಾರ ನಡೆಯುತ್ತದೆ' ಎನ್ನುತ್ತಾರೆ ಸುಣ್ಣದ ವ್ಯಾಪಾರಿ ಸತೀಶ್ ಅಂದನೂರು.

# ಅಂಗನವಾಡಿ ಕಾರ್ಯಕರ್ತೆಯರ ಮುಷ್ಕರ 28ರಿಂದ

• ಉದಯವಾಹಿನಿ ಮಂಗಳೂರು

ಕನಿಷ್ಠ ವೇತನ ನೀಡಬೇಕು ಎಂದು ಆಗ್ರಹಿಸಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಜ.28ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ 2,500ಕ್ಕೂ ಹೆಚ್ಚು ಜನರು ಈ ಧರಣಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷೆ ತಾರಾ ಬಲ್ಲಾಳ್ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಸಿಡಿಎಸ್ ಯೋಜನೆ ಪ್ರಾರಂಭವಾಗಿ 50 ವರ್ಷಗಳ ಕಳೆದಿವೆ. ಈ ಯೋಜನೆ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ವಿವಿಧ ಸರ್ಕಾರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ನಮ್ಮ ಇಲಾಖೆ ಜೊತೆಗೆ ಇತರ ಇಲಾಖೆಗಳ ಕೆಲಸ ನಿರ್ವಹಿಸಿಕೊಂಡು ಬಂದಿರುವ ನಮಗೆ ಕನಿಷ್ಠ ಗೌರವಧನ ನೀಡುತ್ತಿಲ್ಲ' ಎಂದರು.ಅಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಠ 25 ಸಾವಿರ, ಸಹಾಯಕಿಯರಿಗೆ 12 ಸಾವಿರ ಕನಿಷ್ಠ ವೇತನ ನೀಡಬೇಕು. ಕಾರ್ಯಕರ್ತೆಯರನ್ನು ಸಿ ದರ್ಜೆ ಹಾಗೂ ಸಹಾಯಕಿಯರನ್ನು ಡಿ ದರ್ಜೆ ನೌಕರರೆಂದು ಪರಿಗಣಿಸಿ, ಗುಜರಾತ್ ಹೈಕೋರ್ಟ್ ನೀಡಿರುವ ಆದೇಶವನ್ನು ಕರ್ನಾಟಕದಲ್ಲೂ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

# ಇಟ್ಟಂಗಿ ಭಟ್ಟಿ ಕಾರ್ಮಿಕರ ಮೇಲೆ ಹಲ್ಲೆ: ಅಮಾನುಷ ಘಟನೆ

• ಉದಯವಾಹಿನಿ ಮುದ್ದೇಬಿಹಾಳ

ವಿಜಯಪುರದಲ್ಲಿ ಇಟ್ಟಂಗಿ ಭಟ್ಟಿ ಕಾರ್ಮಿಕರ ಮೇಲೆ ಅಮಾನುಷವಾಗಿ ನಡೆದಿರುವ ಹಲ್ಲೆ ಖಂಡಿಸಿ, ಹಲ್ಲೆಕೋರರಿಗೆ ಕಠಿಣ ಶಿಕ್ಷೆ ಮತ್ತು ಹಲ್ಲೆಗೊಳಗಾದವರಿಗೆ ಭದ್ರತೆ, ಪರಿಹಾರ ಒದಗಿಸಲು ಆಗ್ರಹಿಸಿ ಕರ್ನಾಟಕ ಮಾದಿಗ ಜನ ಸಂಘ ಹೋರಾಟ ಸಮಿತಿಯ ಮುದ್ದೇಬಿಹಾಳ ತಾಲ್ಲೂಕು ಘಟಕ, ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು ಇಲ್ಲಿನ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಘಟನೆ ಖಂಡಿಸಿ ಜಿಲ್ಲಾ ದೌರ್ಜನ್ಯ ನಿವಾರಣಾ ಸಮಿತಿ ಮಾಜಿ ನಾಮನಿರ್ದೇಶಿತ ಸದಸ್ಯ, ಮುಖಂಡ ಬಸವರಾಜ ಪೂಜಾರಿ ಸಿದ್ದಾಪೂರ, ತಾಲ್ಲೂಕು ಘಟಕದ ಅಧ್ಯಕ್ಷ ಮುತ್ತಪ್ಪ ಮಾದರ ಅಮರಗೋಳ ಅವರು ಮಾತನಾಡಿ ಹೊಟ್ಟೆಪಾಡಿಗಾಗಿ ದುಡಿಯಲು ಬಂದಿದ್ದ ಮಾದಿಗ ಸಮಾಜದ ಕಾರ್ಮಿಕರಾದ ಉಮೇಶ ಮಾದರ, ಸದಾಶಿವ ಬಬಲಾದಿ, ಉಮೇಶ, ಮಾದರ ಇವರಿಗೆ ನ್ಯಾಯ ದೊರಕಿಸಿಕೊಡಬೇಕು.


ಉದಯವಾಹಿನಿ ಚಿತ್ರ

ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದ ಮೂಲ ಇಡೀ ಜಗತ್ತೇ ನೋಡುವಂತಾಗಿದ್ದು ವಿದೇಶದಗಳಲ್ಲಿ ನಮ್ಮ ದೇಶ ತಲೆತಗ್ಗಿಸುವಂತಾಗಿದೆ. ಪೊಲೀಸರು ಆರೋಪಿಗಳನ್ನು ಬಂಧಿಸಿದರೂ ಇವರಿಗೆ ಜಾಮೀನು ನೀಡಿದರೆ ಆರೋಪಿಗಳು ಹೊರಗೆ ಬಂದು ಮತ್ತೇ ಹಲ್ಲೆ ನಡೆಸುವ ಅವಕಾಶ ಬಹಳಷ್ಟಿವೆ. ಹೀಗಾಗಿ ಹಲ್ಲೆಗೊಳಗಾದವರಿಗೆ, ಅವರ ಕುಟುಂಬದವರಿಗೆ ಬಾಗಲಕೋಟೆ ಜಿಲ್ಲಾ ಪೊಲೀಸರು ಸೂಕ್ತ ಭದ್ರತೆ ಒದಗಿಸಿ ನಿತ್ಯವೂ ನೊಂದವರ ಮನೆಗಳಿಗೆ ಭೇಟಿ ನೀಡುವಂತಾಗಬೇಕು ಎಂದು ಆಗ್ರಹಿಸಿದರು.

**ಆರೋಪಿಗಳ ಗಡಿಪಾರಿಗೆ ಆಗ್ರಹ**

ಆರೋಪಿಗಳನ್ನು ಗಡಿಪಾರು ಮಾಡಬೇಕು. ನೊಂದ ಕುಟುಂಬಕ್ಕೆ ಸರ್ಕಾರ 20 ಲಕ್ಷ ರೂ ಪರಿಹಾರ ನೀಡಬೇಕು. ಸರ್ಕಾರಿ ನೌಕರಿ ನೀಡಬೇಕು. ಭಟ್ಟಿ ಮಾಲಿಕನಿಗೆ ನೀಡಿರುವ ಲೈಸೆನ್ಸ್ ರದ್ದುಪಡಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ದುರಗಪ್ಪ ಅಮರಗೋಳ, ಪ್ರಶಾಂತ ಹಂಡರಗಲ್ಲ, ಮಲ್ಲು ಮೂಲಿನಮನಿ, ರಾಜು ಅಮರಗೋಳ, ಬಾಲು ಅಮರಗೋಳ, ಸಂತೋಷ ಅಮರಗೋಳ, ಅಭಿಲಾಷ ಅಮರಗೋಳ, ಕೃಷ್ಣಾ ಅಮರಗೋಳ, ಬೆಂಬಲಿಸಿದ ಸಂಘಟನೆಗಳ ಸದಸ್ಯರು ಇದ್ದರು. ತಹಶೀಲ್ದಾರ್ ಕಚೇರಿ ಶಿರಸ್ತೆದಾರ ಎಂ.ಎ. ಬಾಗೇವಾಡಿ ಮನವಿ ಸ್ವೀಕರಿಸಿದರು.

# ಕ್ಷಯರೋಗ ದೂರಮಾಡಿ, ಕ್ಷಯರೋಗಿಯನ್ನಲ್ಲ: ಶಾಲಾ ಮಕ್ಕಳಿಂದ ಘೋಷಣೆ

## • ಜೆ ಎನ್ ಕೋಟೆ ಆಯುಷ್ ಕೇಂದ್ರದಿಂದ ಕ್ಷಯರೋಗ ನಿರ್ಮೂಲನಾ ಜಾಗೃತಿ ಜಾಥಾ ಕಾರ್ಯಕ್ರಮ

• ಉದಯವಾಹಿನಿ, ಚಿತ್ರದುರ್ಗ

ನಿಕ್ಷಯ ಯೋಜನೆಯು ಭಾರತದಲ್ಲಿ ಕ್ಷಯರೋಗವನ್ನು ನಿರ್ಮೂಲನೆ ಮಾಡುವ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿದೆ. ಈ ಯೋಜನೆಯ ಸಫಲತೆಗೆ ಚಿತ್ರದುರ್ಗ ಜಿಲ್ಲಾ ಆಯುಷ್ ಇಲಾಖೆಯಿಂದ 100ದಿನಗಳ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಮಾಜದ ಎಲ್ಲಾ ವರ್ಗದ ಜನರ ಸಹಕಾರ ಇದಕ್ಕೆ ಅತ್ಯಗತ್ಯವಾಗಿದೆ. ಎಂದು ಜೆ ಎನ್ ಕೋಟೆ ಆಯುಷ್ಮಾನ್ ಆಯುರ್ವೇದ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ|| ವಿಜಯಲಕ್ಷ್ಮಿ ಪಿ ಅಭಿಪ್ರಾಯ ಪಟ್ಟಿದ್ದಾರೆ.

**ಗಾಳಿಯ ಮೂಲಕ ಹರಡುವ ರೋಗ**

ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜೆ ಎನ್ ಕೋಟೆ ಉಪಾರೋಗ್ಯ ಕೇಂದ್ರ ಸಹಕಾರದಲ್ಲಿ ಆಯುಷ್ಮಾನ್ ಆಯುರ್ವೇದ ಕೇಂದ್ರ ಜೆ ಎನ್ ಕೋಟೆ ವತಿಯಿಂದ ದಿನಾಂಕ: 23/1/2025ರ ಗುರುವಾರ ಗ್ರಾಮದಲ್ಲಿ ಕ್ಷಯರೋಗ ನಿರ್ಮೂಲನ ಜನಜಾಗೃತಿ ಜಾಥ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ನಿಕ್ಷಯ ಯೋಜನೆ ಭಾರತದಲ್ಲಿ ಕ್ಷಯರೋಗವನ್ನು ನಿರ್ಮೂಲನೆ ಮಾಡುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ಆರಂಭಿಸಿರುವ ಒಂದು ವ್ಯಾಪಕವಾದ ಅಭಿಯಾನವಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶಗಳು ಕ್ಷಯರೋಗಿಗಳಿಗೆ ಉಚಿತ ಚಿಕಿತ್ಸೆ, ಪೋಷಣೆ ಮತ್ತು ಸಾಮಾಜಿಕ ಬೆಂಬಲವನ್ನು ಒದಗಿಸುವುದು ಕ್ಷಯರೋಗದ ಹರಡುವಿಕೆಯನ್ನು ತಡೆಯುವುದು. ಕ್ಷಯರೋಗಿಗಳ ಮರಣ ದರವನ್ನು ಕಡಿಮೆ ಮಾಡುವುದು.

ಕ್ಷಯರೋಗಿಗಳ ಜೀವನದ ಗುಣಮಟ್ಟವನ್ನು ಸುಧಾರಿಸುವುದು. ಸಮಾಜದಲ್ಲಿ ಕ್ಷಯರೋಗದ ಬಗ್ಗೆ ಜಾಗೃತಿ ಮೂಡಿಸುವುದು. ಸಾರ್ವಜನಿಕರು ಯೋಜನೆಯ ಲಾಭ ಪಡೆದು ಗ್ರಾಮವನ್ನು ಕ್ಷಯ ರೋಗ ಮಕ್ತಗೊಳಸಲು ಮುಂದಾಗಬೇಕು ಎಂದು ಹೇಳಿದರು. ಇದು ಗಾಳಿಯ ಮೂಲಕ ಹರಡುತ್ತದೆ ಮತ್ತು ಯಾರಿಗೂ ಬರಬಹುದು. ಕ್ಷಯ ರೋಗಿಗಳನ್ನು ಅವರ ಕಾಯಿಲೆಯಿಂದಾಗಿ ಬೇರ್ಪಡಿಸುವುದು ಮಾನವೀಯವಲ್ಲ. ಕ್ಷಯ ರೋಗಿಗಳು ಸಾಮಾಜಿಕ ಕಳಂಕದಿಂದಾಗಿ ಮಾನಸಿಕವಾಗಿ ತೊಂದರೆಗೊಳಗಾಗಬಹುದು.

ನಿಕ್ಷಯ ಯೋಜನೆಯು ಕ್ಷಯ ರೋಗಿಗಳಿಗೆ ಉತ್ತಮ ಜೀವನ ನೀಡಲು ಸಹಾಯ ಮಾಡುತ್ತದೆ. ನಾವೆಲ್ಲರೂ ಕ್ಷಯ ರೋಗಿಗಳ ಬಗ್ಗೆ ಧನಾತ್ಮಕ ದೃಷ್ಟಿಕೋನ ಹೊಂದುವ ಮೂಲಕ ಅವರಿಗೆ ಬೆಂಬಲ ನೀಡೋಣ. ಎಂದು ಹೇಳಿದರು. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಕ್ಷಯರೋಗ ನಿರ್ಮೂಲನ ಜಾಗೃತಿ ಮೂಡಿಸುವ ಬಿತ್ತಿಪತ್ರಗಳನ್ನು ಹಿಡಿದು ಗ್ರಾಮದ ಕೇರಿಗಳಲ್ಲು ಅಂಟಿಸಿ ಕ್ಷಯರೋಗ ದೂರಮಾಡೋಣ ಕ್ಷಯರೋಗಿಯನ್ನಲ್ಲ ಎಂದು ಘೋಷಣೆ ಕೂಗುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.

ಜಾಥದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಧ್ಯಾಯಿನಿ ಶ್ರೀಮತಿ ಮಂಜುಳಾ ಕೆ ಕೆ .ಸಹ ಶಿಕ್ಷಕರಾದ ನಾಗರತ್ನಮ್ಮ, ತಬ್ಸುಮ್ ಬಾನು, ಮಂಜುಳಾ ಬಿ ಹೆಚ್ ಆಶಾ ಕಾರ್ಯಕರ್ತೆ ಶಾರದಾ ಹಾಗೂ ಇನ್ನಿತರರು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

> ಸರಿಯಾದ ಔಷಧಿ ಮತ್ತು ಚಿಕಿತ್ಸೆಯೊಂದಿಗೆ ಕ್ಷಯ ರೋಗವನ್ನು ಸಂಪೂರ್ಣ ಗುಣಪಡಿಸಬಹುದು ಇದು ಗಾಳಿಯ ಮೂಲಕ ಹರಡುವ ರೋಗವಾಗಿದ್ದು ಗಾಳಿಯ ಮೂಲಕ ಇದು ಯಾರಿಗಾದರೂ ಬರಬಹುದು. ಆದ್ದರಿಂದ ಕ್ಷಯರೋಗಕ್ಕೆ ತುತ್ತಾದವರು ಕೆಮ್ಮುವಾಗ ಯಾವಾಗಲೂ ಕರವಸ್ತ್ರವನ್ನು ಉಪಯೋಗಿಸಬೇಕು.ಹಾಗೆಯೇ ಎಲ್ಲರೂ ಕ್ಷಯ ರೋಗಿಗಳ ಬಗ್ಗೆ ಧನಾತ್ಮಕ ದೃಷ್ಟಿಕೋನ ಹೊಂದುವ ಮೂಲಕ ಅವರಿಗೆ ಬೆಂಬಲ ನೀಡಬೇಕು
> -ರಮೇಶ್, ಜೆ ಎನ್ ಕೋಟೆ ಸಮುದಾಯ ಆರೋಗ್ಯಾಧಿಕಾರಿ

> ಕ್ಷಯ ರೋಗಿಗಳ ಬಗ್ಗೆ ಸಮಾಜದ ದೃಷ್ಟಿಕೋನ ಬದಲಾಗಬೇಕು. ಇದು ಒಂದು ಸಾಂಕ್ರಾಮಿಕ ರೋಗವಾಗಿದೆ ಎಂಬುದು ನಿಜ, ಆದರೆ ಇದನ್ನು ಸಂಪೂರ್ಣವಾಗಿ ಗುಣಪಡಿಸಬಹುದು. ಸರಿಯಾದ ಔಷಧಿ ಮತ್ತು ಚಿಕಿತ್ಸೆಯೊಂದಿಗೆ ಕ್ಷಯ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು -ರವಿ ಕೆ.ಅಂಬೇಕರ್,
> ಯೋಗ ತರಬೇತುದಾರ

## ಮಿನಿ ನ್ಯೂಸ್

### ಕುಂದು ಕೊರತೆ, ದೂರುಗಳ ವಿಚಾರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿತ್ರದುರ್ಗ

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರಿಂದ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಧಿಕಾರಿಗಳು ಹಾಗೂ ಚಿತ್ರದುರ್ಗ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ಮತ್ತು ಕುಂದು ಕೊರತೆಗಳ, ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ವಿಚಾರವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಹಾಗೂ ದೂರುದಾರರು ಮತ್ತು ಎದುರುದಾರರುಗಳ ಸಭೆ ನಡೆಯಿತು.

ಈ ಸಂದಭದಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಗಾಯತ್ರಿ, ಲೋಕಾಯುಕ್ತ ಚಿತ್ರದುರ್ಗ ಪೊಲೀಸ್ ಅಧೀಕ್ಷಕ ಎನ್.ವಾಸುದೇವರಾಮ, ಡಿವೈಎಸ್‌ಪಿ ಮೃತ್ಯುಂಜಯ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

### ಬೇಟಿ ಬಚಾವೋ ಬೇಟಿ ಪಡಾವೋ ಅಭಿಯಾನ: ಜಾಗೃತಿ ಕಾರ್ಯಕ್ರಮ

• ಉದಯವಾಹಿನಿ, ಕಲಬುರಗಿ

ಜಿಲ್ಲಾಡಳಿತ ಮತ್ತು ವಿವಿಧ ಇಲಾಖೆ, ಸಂಸ್ಥೆಗಳ ಸಹಯೋಗದಲ್ಲಿಂದು ಆಯೋಜಿಸಲಾದ ಬೇಟಿ ಬಚಾವೋ ಬೇಟಿ ಪಡಾವೋ ಅಭಿಯಾನ, ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ,ಭದ್ರತೆ ಮತ್ತು ಸಬಲೀಕರಣಕ್ಕಾಗಿ ಜಾಗೃತಿ ಕಾರ್ಯಕ್ರಮ ನಗರದ ಅಪ್ಪಾ ಪಬ್ಲಿಕ್ ಶಾಲೆ ಆವರಣದ ಪೂಜ್ಯ ಡಾ.ಬಸವರಾಜಪ್ಪ ಅಪ್ಪ ಸ್ಮರಣಾರ್ಥ ಭವನದಲ್ಲಿ ಜರುಗಿತು. ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್,ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್,ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಮಂಜುಳಾ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಕುಮಾರ ರಾಠೋಡ ಅವರು ಸೇರಿದಂತೆ ಹಲವರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಸರದಾರ ವಲ್ಲಭಭಾಯಿ ಪಟೇಲ್ ವೃತ್ತದಿಂದ ಅಪ್ಪಾ ಪಬ್ಲಿಕ್ ಶಾಲೆ ಆವರಣದವರೆಗೆ ನಡೆದ ಬೈಕ್ ರ್ಯಾಲಿಯಲ್ಲಿ ದಕ್ಷಿಣಮತ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್ ಡಿ, ಜಿಪಂ ಸಿಇಒ ಭಂವರಸಿಂಗ್ ಮೀನಾ ಸೇರಿದಂತೆ ಹಲವರು ಪಾಲ್ಗೊಂಡರು.

### 4 ವರ್ಷದ ಮಗಳ ಹತ್ಯೆ 8 ತಿಂಗಳ ಬಳಿಕ ಮಲತಾಯಿ ಅರೆಸ್ಟ್

• ಉದಯವಾಹಿನಿ, ಬೆಳಗಾವಿ

ಮಗಳ ಹೊಟ್ಟೆಗೆ ಹೊಡೆದು ಹತ್ಯೆ ಮಾಡಿದ್ದ ಮಲತಾಯಿಯನ್ನು 8 ತಿಂಗಳ ಬಳಿಕ ಬೆಳಗಾವಿ ಪೊಲೀಸರು ಬಂಧಿಸಿದ್ದಾರೆ.ಬಂಧಿತ ಆರೋಪಿಯನ್ನು ಸಪ್ನಾ ನಾವಿ ಎಂದು ಗುರುತಿಸಲಾಗಿದೆ.

ಆರೋಪಿ, 4 ವರ್ಷದ ಮಗಳ ಮೇಲೆ ಹಲ್ಲೆ ಮಾಡಿ ಹತ್ಯೆಗೈದು ತಾನೇನೂ ಮಾಡಿಲ್ಲ ಎಂಬಂತೆ ಇದ್ದಳು. ಮರಣೋತ್ತರ ಪರೀಕ್ಷೆಯಲ್ಲಿ ಮಹಿಳೆಯ ಕ್ರೌರ್ಯ ಬೆಳಕಿಗೆ ಬಂದಿದ್ದು, ಮಲತಾಯಿಯ ಅಸಲಿ ಬಣ್ಣ ಬಯಲಾಗಿದೆ.

2024ರ ಮೇ ತಿಂಗಳಲ್ಲಿ ಸಮೃದ್ಧಿ ರಾಯಣ್ಣ ನಾವಿ (4) ಸಾವನ್ನಪ್ಪಿದ್ದಳು. ಮಗುವಿನ ಅಜ್ಜ ಹಾಗೂ ಅಜ್ಜಿ ಸಪ್ನಾ ನಾವಿ ವಿರುದ್ಧ ಕೊಲೆ ಆರೋಪ ಮಾಡಿದ್ದರು. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಾಗಿತ್ತು. ಬಳಿಕ ಮೃತಪಟ್ಟ ಮಗುವಿನ ಶವವನ್ನು ಬಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು. ಇದಾದ ಬೆನ್ನಲ್ಲೇ ಸಪ್ನಾ ನಾವಿ ನಿರೀಕ್ಷಣಾ ಜಾಮೀನು ಪಡೆದಿದ್ದಳು. ಸದ್ಯ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಮಗುವಿನ ಹೊಟ್ಟೆಗೆ ಹೊಡೆದು, ಅಥವಾ ಒದ್ದು ಗಾಯಗೊಳಿಸಿ ಕೊಲೆ ಎಂದು ಸಾಬೀತಾಗಿದೆ. ಈ ಹಿನ್ನೆಲೆ ನಿರೀಕ್ಷಣಾ ಜಾಮೀನನ್ನು ರದ್ದು ಮಾಡುವಂತೆ ಪೊಲೀಸರು ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಜಾಮೀನು ರದ್ದಾಗುತ್ತಿದ್ದಂತೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಯಣ್ಣ, ಸಮೃದ್ಧಿ ಹೆತ್ತ ತಾಯಿ ಸಾವಿನ ನಂತರ ಎರಡನೇ ಮದುವೆ ಆಗಿದ್ದರು ಎಂದು ತಿಳಿದು ಬಂದಿದೆ.

### ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಊರು ತೊರೆಯುತ್ತಿರುವ ಜನ

• ಉದಯವಾಹಿನಿ, ರಾಣೆಬೆನ್ನೂರು

ತಾಲ್ಲೂಕಿನಲ್ಲಿ ದಿನದಿಂದ ದಿನಕ್ಕೆ ಮೈಕ್ರೋ ಫೈನಾನ್ಸ್ ರವರ ಕಿರುಕುಳ ಹೆಚ್ಚುತ್ತಿದ್ದು, ಜನರು ಬೇಸತ್ತು ಗ್ರಾಮ ತೊರೆ ಯುವುದು ಮುಂದುವರೆದಿದೆ. ಮನೆಗಳಿಗೆ ಬೀಗ ಹಾಕಿ, ಬೇರೆ ಊರುಗಳಿಗೆ ಹೋಗುತ್ತಿದ್ದಾರೆ.

ನಗರದ ಅಡವಿ ಆಂಜನೇಯ ಬಡಾವಣೆ ಅಶೋಕನಗರ ಮತ್ತು ತಾಲ್ಲೂಕಿನ ಯರೇಕುಪ್ಪಿ, ಗುಡ್ಡದಹೊಸಳ್ಳಿ, ಹೆಡಿಯಾಲ, ಕುಸಗೂರ ಸೇರಿ ವಿವಿಧ ಗ್ರಾಮಗಳಲ್ಲಿ ಮನೆ ಖರ್ಚು ವೆಚ್ಚಗಳಿಗೆ ಹಲವರು ಸಾಲ ಪಡೆದಿದ್ದಾರೆ.

ಆದರೆ, ಈಗ ಅವರಿಗೆ ಮೈಕ್ರೋ ಫೈನಾನ್ಸ್ ಕಂಪನಿಯವರು ಹಗಲು, ರಾತ್ರಿಯೆನ್ನದೇ ಕೊಡುತ್ತಿರುವ ಕಿರುಕುಳ ತಾಳಲು ಆಗುತ್ತಿಲ್ಲ' ಎಂದು ಜನರು ಆರೋಪಿಸಿದರು.ಅಡವಿ ಅಂಜನೇಯ ಬಡಾವಣೆಯಲ್ಲಿ ಬಡವರು, ಅಲ್ಪಸಂಖ್ಯಾತರು, ಕೂಲಿ ಕಾರ್ಮಿಕರು, ಆಟೋ ಚಾಲಕರು, ಕೂದಲು, ಪಿನ್ ಮತ್ತು ಸ್ಟೇಷನರಿ ವ್ಯಾಪಾರ ಮಾಡುತ್ತ ಜೀವನ ನಡೆಸುವವರೇ ಹೆಚ್ಚು ವಾಸವಿದ್ದಾರೆ.

ಅಡವಿ ಆಂಜನೇಯ ಬಡಾವಣೆಯ ನಿವಾಸಿ ಅಮೀದಾ (ಆರಿಭಾ) ಶಿಡೇನೂರು ಮಾತನಾಡಿ, ಮನೆಯಲ್ಲಿ ಕಷ್ಟ ಇದೆ ಎಂದು ಸಾಲ ಪಡೆದಿದ್ದೆ. ಒಂದು ವಾರವೂ ಬಡ್ಡಿ ಕಟ್ಟುವುದು ತಪ್ಪಿಸಿಲ್ಲ. ನಾನು ಕೆಲಸಕ್ಕೆಂದು ಪೇಟೆಗೆ ಹೋಗಿದ್ದೆ. ಆಗ ಫೈನಾನ್ಸ್‌ನವರು ಮನೆ ಮುಂದೆ ಬಂದು ಹಣ ಕಟ್ಟಬೇಕೆಂದು ಒತ್ತಾಯಿಸಿದ್ದಾರೆ.

ಅಮ್ಮ ಬರುವವರೆಗೆ ಕಾಯಿರಿ. ಗಲಾಟೆ ಮಾಡಬೇಡಿ ಎಂದು ಮನೆಯಲ್ಲಿದ್ದ ಮಗಳು ಕೋರಿದರೂ ಫೈನಾನ್ಸ್ ಕಂಪನಿಯವರು ಸುಮ್ಮನಾಗಿಲ್ಲ. ಮನೆಯಿಂದ ಕದಲುವುದಿಲ್ಲವೆಂದು ಎಚ್ಚರಿಕೆ ನೀಡುತ್ತಾರೆ' ಎಂದು ಅಡವಿ ಆಂಜನೇಯ ಬಡಾವಣೆಯ ನಿವಾಸಿ ಅಮೀದಾ (ಆರಿಭಾ) ಶಿಡೇನೂರು ತಿಳಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ದೇಹದ ಪುನಃಶ್ಚೇತನಕ್ಕಾಗಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ನೀವು ಆಯಾಸ ಹಾಗೂ ನಿರಾಸೆಯಲ್ಲಿ ಸಿಲುಕುತ್ತೀರಿ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು.

**ವೃಷಭ** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ.

**ಮಿಥುನ** ನೀವು ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಿರದಿದ್ದಲ್ಲಿ ನಿಮಗೆ ತುಂಬಾ ದಣಿವಾದಂತೆನಿಸುತ್ತದೆ ಮತ್ತು ನಿಮಗೆ ಅಧಿಕ ವಿಶ್ರಾಂತಿ ಬೇಕಾಗುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

**ಕರ್ಕಾಟಕ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಗಡಿಬಿಡಯ ನಿರ್ಧಾರಗಳನ್ನು ಕೈಗೊಳ್ಳಬೇಡಿ – ವಿಶೇಷವಾಗಿ ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ.

**ಸಿಂಹ** ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ– ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ನಿಮ್ಮ ಸಕಾಲಿಕ ಸಹಾಯ ಇನ್ನೊಬ್ಬರ ಜೀವ ಉಳಿಸುತ್ತದೆ.

**ಕನ್ಯಾ** ನೀವು ಮನಸ್ಸಿನ ಸಮಸ್ಯೆಗಳನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ, ಜಾಣತನ ಮತ್ತು ಸಭ್ಯತೆಯನ್ನು ಬಳಸಬೇಕಾಗುತ್ತದೆ. ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು.

**ತುಲಾ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ವೃಶ್ಚಿಕ** ಆರೋಗ್ಯದ ಬಗ್ಗೆ ಚಿಂತಿಸುವುದು ಕಾಯಿಲೆಯನ್ನು ಇನ್ನಷ್ಟು ಉಲ್ಬಣಿಸಬಹುದಾದ್ದರಿಂದ ಹಾಗೆ ಮಾಡಬೇಡಿ. ಹಣಕಾಸಿನಲ್ಲಿ ಸುಧಾರಣೆ ನೀವು ಅಗತ್ಯ ವಸ್ತುಗಳನ್ನು ಖರೀದಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಧನಸ್ಸು** ಸ್ವಲ್ಪ ಮನರಂಜನೆಗಾಗಿ ನಿಮ್ಮ ಕಚೇರಿಯಿಂದ ಬೇಗನೇ ಹೊರಬರಲು ಪ್ರಯತ್ನಿಸಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

**ಮಕರ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ.

**ಕುಂಭ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ.

**ಮೀನ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ. ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ , ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

# ಕಲಬುರಗಿ ಬಂದ್‌ಗೆ ನೀರಸ ಪ್ರತಿಕ್ರಿಯೆ: ಪ್ರತಿಭಟನೆಗಷ್ಟೇ ಸೀಮಿತ

## ಬಂದ್‌ನಲ್ಲಿ ಪಾಲ್ಗೊಳ್ಳಲು ಜನರು ಉತ್ಸಾಹ ತೋರಲಿಲ್ಲ, ಅಂಗಡಿ ಮುಂಗಟ್ಟುಗಳಲ್ಲಿ ವ್ಯಾಪಾರ–ವಹಿವಾಟು ಸಹ ಸಾಮಾನ್ಯವಾಗಿತ್ತು

• **ಉದಯವಾಹಿನಿ ಕಲಬುರಗಿ**

ಜಿಲ್ಲೆಯ ಆರ್ಥಿಕ ಶಕ್ತಿಯಾಗಿರುವ ತೊಗರಿ ದರ ಹೆಚ್ಚಳ, ತೊಗರಿ ಮಂಡಳಿ ಬಲವರ್ಧನೆ ಹಾಗೂ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಣೆಗೆ ಆಗ್ರಹಿಸಿ ರೈತ ಸಂಘಟನೆಗಳ ಒಕ್ಕೂಟ ಕರೆ ನೀಡಿದ್ದ ಕಲಬುರಗಿ ಬಂದ್‌ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರತಿಭಟನಾ ಮೆರವಣಿಗೆ ಬಿಟ್ಟರೆ ಜನ ಹಾಗೂ ವಾಹನ ಸಂಚಾರ ಎಂದಿನಂತೆ ಇತ್ತು. ಬಂದ್‌ನಿಂದಾಗಿ ಅಂಗಡಿ ಮುಂಗಟ್ಟುಗಳಲ್ಲಿ ವ್ಯಾಪಾರ–ವಹಿವಾಟು ಸಹ ಸಾಮಾನ್ಯವಾಗಿತ್ತು. ಜನಜೀವನದ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಬಂದ್‌ನಲ್ಲಿ ಪಾಲ್ಗೊಳ್ಳಲು ಜನರೂ ಉತ್ಸಾಹ ತೋರಲಿಲ್ಲ.ಆರೋಗ್ಯ ಸೇವೆ, ಸಾರಿಗೆ, ತರಕಾರಿ ಮಾರುಕಟ್ಟೆ, ಶಾಲಾ– ಕಾಲೇಜುಗಳು, ಸರ್ಕಾರಿ ಕಚೇರಿಗಳು, ಹೋಟೆಲ್‌ಗಳು, ಶಾಪಿಂಗ್ ಮಾಲ್‌ಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಕೇಂದ್ರ ಬಸ್ ನಿಲ್ದಾಣದಿಂದ ಸರ್ದಾರ್ ವಲ್ಲಭ ಭಾಯ್ ಪಟೇಲ್ ವೃತ್ತ. ಜಿಲ್ಲಾಧಿಕಾರಿ ಕಚೇರಿ, ಜಗತ್ ವೃತ್ತ ಮಾರ್ಗವಾಗಿ ಸೂಪರ್ ಮಾರ್ಕೆಟ್‌ರೆಗೆ ಮೆರವಣಿಗೆ ನಡೆಸಿದರು. ಪ್ರತಿಭಟನಕಾರರ ಮೆರವಣಿಗೆ ಸಮೀಪಿಸುತ್ತಿದ್ದಂತೆ ರಸ್ತೆ ಬದಿಯ ಮಳಿಗೆಗಳ ಶೆಟರ್ ಹಾಕಿ, ಮೆರವಣಿಗೆ ಮುಂದಕ್ಕೆ



ಉದಯವಾಹಿನಿ ಚಿತ್ರ

ಹೋಗುತ್ತಿದ್ದಂತೆ ಶೆಟರ್ ತೆರೆದು ವ್ಯಾಪಾರ ಮುಂದುವರೆಸಿದರು.

ಪ್ರತಿಭಟನಾ ಮೆರವಣಿಗೆ ಎಸ್‌ವಿಪಿ ವೃತ್ತಕ್ಕೆ ಬರುತ್ತಿದ್ದಂತೆ ಪೊಲೀಸರು, ರೈತ ಮುಖಂಡರು ಅಂಗಡಿಗಳನ್ನು ಮುಚ್ಚಲು ಮಾಲೀಕರಿಗೆ, ಕೆಲಸಗಾರರಿಗೆ ಮನವಿ ಮಾಡಿದರು.

ಈ ವೇಳೆ ಬಾಗಿಲು ಅರ್ಧ ತೆರೆದಿದ್ದ ಬಾಟಾ ಶೋ ರೂಂ ಕೆಲಸಗಾರರಿಗೆ ಮುಖಂಡ ಮೌಲಾಮುಲ್ಲಾ ಅವರು ಅಂಗಡಿ ಮುಚ್ಚಿಸಹಕರಿಸುವಂತೆ ಕೋರಿದರು. ಇಬ್ಬರ ನಡುವೆ ವಾಗ್ವಾದ ನಡೆಯಿತು. ಮತ್ತು ಬೀಜ ವ್ಯಾಪಾರಿಗಳ ಸಂಘ, ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಬಂದ್‌ಗೆ ಬೆಂಬಲ ನೀಡಿದ ತೊಗರಿ ಬೆಳೆಗಾರರ ಸಂಘ,

**ತೊಗರಿ ದರ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ**

ಆಹಾರ ಧಾನ್ಯಗಳ ಕೈಗಾರಿಕಾ ಸಂಸ್ಥೆ, ಅಡತ ವ್ಯಾಪಾರಿಗಳು ಮತ್ತು ಮಾಲೀಕರ ಸಂಘ, ವ್ಯಾಪಾರಸ್ಥರ ಸಂಘದ ಬಹುತೇಕ ಮಳಿಗೆಗಳು ಬಂದ್ ಆಗಿದ್ದವು.

ಕಿರಾಣ ಬಜಾರ್ ವ್ಯಾಪಾರಸ್ಥ ಸಂಘ, ದಾಲ್ ಮಿಲ್ ಸಂಘ, ಅಕ್ಕಿ ಎಪಿಎಂಸಿ ಆವರಣದಲ್ಲಿ ವಹಿವಾಟು ಸ್ಥಗಿತವಾಗಿತ್ತು. ಬಂದ್‌ಗೆ ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ , ರಾಜ್ಯ ರೈತ ಸಂಘ ಹಸಿರು ಸೇನೆ (ಕೆ.ಎಸ್.ಪುಟ್ಟಣ್ಣಯ್ಯ ಬಣ), ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ದಲಿತ ಸಂಘರ್ಷ ಸಮಿತಿ , ಕಟ್ಟಡ ಕಾರ್ಮಿಕ ಸಂಘಗಳು ಸೇರಿದಂತೆ ಹಲವು ಸಂಘಟನೆಗಳು ಬೆಂಬಲ ಸೂಚಿಸಿದ್ದವು.ಮುಂಜಾಗ್ರತಾ ಕ್ರಮವಾಗಿ ಪ್ರತಿಭಟನಾ ಮೆರವಣಿಗೆ ಸಾಗುವ ಮಾರ್ಗದ ಉದ್ದಕ್ಕೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಯಾವುದೇ ಅಹಿತಕರ ಘಟನೆಗಳು ನಡೆಯದೆ ಶಾಂತಿಯುತವಾಗಿ ಬಂದ್ ನಡೆಯಿತು.

**ಬಿಸಿಲಿಗೆ ಬಸವಳಿದ ರೈತರು:** ಕೇಂದ್ರ ಬಸ್ ನಿಲ್ದಾಣದಿಂದ ಸೂಪರ್ ಮಾರ್ಕೆಟ್‌ರೆಗೆ ಮೆರವಣಿಗೆ ನಡೆಸಿ, ಘೋಷಣೆ ಕೂಗಿದ ರೈತರು, ಮುಖಂಡರು ಬಿಸಿಲಿಗೆ ಬಸವಳಿದರು. ಮಾರ್ಕೆಟ್ ವೃತ್ತದಲ್ಲಿ ಬಹಿರಂಗ ಸಮಾವೇಶದಲ್ಲಿ ಮುಖಂಡರು ಮಾತನಾಡುತ್ತಿದ್ದರೆ ನೆರಳು ಆಶ್ರಯಿಸಿ ಸುತ್ತಲಿನ ಮಳಿಗೆಗಳತ್ತ ತೆರಳಿದ್ದು ಕೆಲವರೂ ರಸ್ತೆಯಲ್ಲಿ ಕುಳಿತದ್ದು ಕಂಡುಬಂತು.

ಬಂದ್‌ನಲ್ಲಿ ರೈತ ಮುಖಂಡರಾದ ಶರಣಬಸಪ್ಪ ಮಮಶೆಟ್ಟಿ ಭೀಮಾಶಂಕರ ಮಾಡಿಯಾಳ, ಎಸ್. ಆರ್. ಕೊಲ್ಲೂರು, ಮೌಲಾಮುಲ್ಲಾ, ಅರ್ಜುನ ಗೊಬ್ಬರು, ಮೊಬಿನ್ ಅಹಿಮದ್, ಮಹಾಂತೇಶ ಜಮಾದಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

### ರೈತ ಮುಖಂಡರ ಪ್ರಮುಖ ಬೇಡಿಕೆಗಳು

- ★ ತೊಗರಿ ಮಂಡಳಿ ದ್ವಿದಳ ಧಾನ್ಯಗಳ ಮಂಡಳಿಯಾಗಿದ್ದರಿಂದ ಅನುದಾನ ಹೆಚ್ಚಿಸಬೇಕು
- ★ ತೊಗರಿ ಬೆಳೆಗಾರರ ಸಂರಕ್ಷಣೆಗೆ ಕೆಎಂಎಫ್ ಮಾದರಿಯ ನೀತಿಯನ್ನು ಜಾರಿಗೆ ತರಬೇಕು
- ★ ತೊಗರಿ ಮಂಡಳಿಯು ರೈತರಿಂದ ತೊಗರಿ ಖರೀದಿಸಿ ಉತ್ಪನ್ನಗಳನ್ನು ತಯಾರಿಸುವಂತೆ ಆಗಬೇಕು.
- ★ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬೇಕು, ಅಕ್ಷರ ದಾಸೋಹ ಅಡಿ ತೊಗರಿ ಬೇಳೆ ಪೂರೈಸಬೇಕು
- ★ ತೊಗರಿ ಖರೀದಿಸಿ ಅದನ್ನು ಬೇಳೆ ಮಾಡಿ ಮಾರಾಟ ಮಾಡಿದರೆ ಆರ್ಥಿಕ ಸಬಲೀಕರಣ ಮಾಡಬೇಕು
- ★ ತೊಗರಿ ರಾಶಿ ಆರಂಭವಾದ ತಕ್ಷಣವೇ ಖರೀದಿ ಕೇಂದ್ರಗಳನ್ನು ತೆರೆಯಬೇಕು

# ಮಕ್ಕಳ ಉತ್ತಮ ಫಲಿತಾಂಶಕ್ಕೆ ಶಿಕ್ಷಕರು ಶ್ರಮ ವಹಿಸಿ : ಡಿಡಿಪಿಐ ಚನ್ನಬಸಪ್ಪ

• **ಉದಯವಾಹಿನಿ, ವಡಗೇರಾ**

ಶಾಲಾ ಶಿಕ್ಷಕರು ನಿರಂತರವಾಗಿ ಅಧ್ಯಯನದಲ್ಲಿ ತೊಡಗಿದಾಗ ಮಾತ್ರ ಪಾಠ ಬೋಧನೆಯಲ್ಲಿ ಯಶಸ್ವಿ ಕಾಣಲು ಸಾಧ್ಯ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ ಚನ್ನಬಸಪ್ಪ. ಮುಧೋಳ ಹೇಳಿದರು.

ವಡಗೇರಾ ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಜಿಪಂ.ತಾಪಂ.ವಡಗೇರಾ ಶಾಲಾ ಶಿಕ್ಷಣ ಇಲಾಖೆ ಹಾಗೂ ಪಿರಾಮಲ್ ಫೌಂಡೇಶನ್ ಯಾದಗಿರಿ ಸಂಯುಕ್ತ ಆಶ್ರಯದಲ್ಲಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಸಿ ಆರ್ ಪಿ .ಬಿ ಆರ್ ಸಿ ಮತ್ತು ದಂತಾಲಯ ಮೇಲ್ವಿಚಾರಕರಿಗಾಗಿ ಪ್ರಾಥಮಿಕ ಶಿಕ್ಷಣ ಗುಣಮಟ್ಟದ ಮತ್ತು ಗ್ರಂಥಾಲಯಗಳ ಬಲವರ್ಧನೆಗಾಗಿ ಆಯೋಜಿಸಿದ್ದ ಒಂದು ದಿನದ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಆದಷ್ಟು ಟಿವಿ ಮೊಬೈಲ್‌ಗಳಿಂದ ದೂರವಿರುವಂತೆ ಸಲಹೆ ನೀಡಿದರು. ವಿಶೇಷವಾಗಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನ ಹರಿಸಿ ಉತ್ತಮ ಫಲಿತಾಂಶ ಪಡೆಯಬೇಕು ಮಕ್ಕಳು ಇಂಗ್ಲಿಷ್ ವಿಷಯದ ಬಗ್ಗೆ ಭಯಪಡದೆ


ಉದಯವಾಹಿನಿ ಚಿತ್ರ

ಇಷ್ಟಪಟ್ಟು ಓದುವಂತೆ ಮಕ್ಕಳಿಗೆ ಕಿವಿ ಮಾತು ಹೇಳಿದರು. ವಡಗೇರಾ ತಾಪಂ ಇಓ ಮಲ್ಲಿಕಾರ್ಜುನ ಸಂಗ್ವಾರ ಮಾತನಾಡಿ ಶಿಕ್ಷಕರು ಸಮಯ ಪ್ರಜ್ಞೆ ಕರ್ತವ್ಯ ನಿಷ್ಠೆಯಿಂದ ಬೋಧನೆ ಮಾಡಬೇಕು ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು ಶಿಕ್ಷಕರೇ ದೇಶದ ನಿರ್ಮಾತೃಗಳು ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಜಿಲ್ಲೆಯ ಫಲಿತಾಂಶ ಹೆಚ್ಚಿಸಲು ಪ್ರಯತ್ನಿಸುವಂತೆ ಹೇಳಿದರು. ತಾಲ್ಲೂಕಿನ ಎಲ್ಲಾ ಹರಿವು ಕೇಂದ್ರ, ಗ್ರಂಥಾಲಯಗಳು ಮಕ್ಕಳಿಗಾಗಿ ಅನೇಕ ಸೌಕರ್ಯಗಳನ್ನು ಮತ್ತು ಮಕ್ಕಳ ಓದಿಗಾಗಿ ಅನುಕೂಲ ಮಾಡಿಕೊಟ್ಟಿದೆ ಅದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಲು ಶಿಕ್ಷಕರು ದಿನನಿತ್ಯ ಮಕ್ಕಳನ್ನು ಕೆಲ ಸಮಯ ಗ್ರಂಥಾಲಯಗಳಿಗೆ ಕಳುಹಿಸಿಕೊಡಬೇಕು ಅಂದಾಗ ಮಾತ್ರ ಮಕ್ಕಳಲ್ಲಿ ಓದುವ ಅಭಿರುಚಿ ಮತ್ತಷ್ಟು ಹೆಚ್ಚಾಗುತ್ತದೆ ಎಂದು ಹೇಳಿದರು ಪಿರಾಮಲ್ ಫೌಂಡೇಶನ್ ಜಿಲ್ಲಾ ವ್ಯವಸ್ಥಾಪಕರಾದ ಮಹೇಶ್ ಪ್ರಸ್ತಾವಿಕವಾಗಿ ಮಾತನಾಡಿದರು.

> ಶಿಕ್ಷಕರು ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ಮಕ್ಕಳಿಗೆ ಸಮರ್ಪಕವಾಗಿ ಒದಗಿಸಬೇಕು ಉತ್ತಮ ಫಲಿತಾಂಶ ಬರುವ ನಿಟ್ಟನಲ್ಲಿ ಶಿಕ್ಷಕರು ಶ್ರಮವಹಿಸಬೇಕು ಸರಕಾರಿ ಶಾಲೆಗಳ ಅಭಿವೃದ್ಧಿಗೆ ಶಿಕ್ಷಣ ಇಲಾಖೆ ಸದಾ ಬದ್ಧ
> –ಚನ್ನಬಸಪ್ಪ , ಡಿಡಿಪಿಐ

ಈ ಸಂದರ್ಭದಲ್ಲಿ ಅನಿಲ್ ಕುಮಾರ್ ರೆಡ್ಡಿ ,ವಿಠಲ್ ಪಾಟೀಲ್, ಮುಖ್ಯ ಗುರು ಅಯ್ಯಪ್ಪ ಬಡಿಗೇರ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ರೇಣುಕಾ ಪಾಟೀಲ್ ಸಿ ಆರ್ ಪಿ ಶಾಂತಕುಮಾರ್ ಯಾದವ, ಗ್ರಂಥಾಲಯ ಮೇಲ್ವಿಚಾರಕರಾದ ಮಾಳಿಂಗರಾಯ ಕೊಂಕಲ್, ಶಿವಪ್ಪ, ಹಣಮಂತರಾಯ ಗೋಳಪ್ಪ ,ಮೌಲನ್ ಸಾಬ್, ಅನ್ನಪೂರ್ಣ, ಸಿದ್ದರಾಮ ರೆಡ್ಡಿ, ಮರೇಪ್ಪ, ಸುಮಂಗಲ ಮಲ್ಲಿಕಾರ್ಜುನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಸುಭಾಷ್ ಚಂದ್ರ ಬೋಸ್ ಕ್ರಾಂತಿಕಾರಿ ಹೋರಾಟಗಾರ: ಲಲಿತಾಬಾಯಿ

• **ಉದಯವಾಹಿನಿ, ವಡಗೇರಾ**

ಸ್ವಾತಂತ್ರ್ಯ ಯಾರೋ ಕೊಡುವಂಥ ಸರಕಲ್ಲ ಅದನ್ನು ನಾವು ಪಡೆದುಕೊಳ್ಳಬೇಕಾದ್ದು ಎಂದು ಬ್ರಿಟಿಷರ ವಿರುದ್ಧ ಘರ್ಜಿಸಿ ಕ್ರಾಂತಿಕಾರಿ ಹೋರಾಟ ಮಾಡಿ ಸ್ವಾತಂತ್ರ್ಯ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ನಮ್ಮ ನೇತಾಜಿ ಸುಭಾಷ್ ಚಂದ್ರ ಬೋಸ್ ಎಂದು ಮುಖ್ಯ ಶಿಕ್ಷಕಿ ಲಲಿತಾ ಬಾಯಿ ನಾಟೇಕಾರ ಹೇಳಿದರು.

ಪಟ್ಟಣದ ಕಸ್ತೂರ್ ಬಾ ಗಾಂಧಿ ಬಾಲಕಿಯರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ನೇತಾಜಿ ಸುಭಾಷ್ ಚಂದ್ರ ಬೋಸ್ ರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಭಾರತದ ಸೈನ್ಯ ಬಲ ಗಡಿ ರಕ್ಷಣೆ ದೇಶದ ತಾತ್ವಿಕ ಆದರ್ಶಗಳ ಕುರಿತು ಅವರು ಅಪಾರಜ್ಞಾನವನ್ನು ಹೊಂದಿದ್ದರು. ಅವರು ದೇಶದ ಜನರ ಮನಸ್ಸಿನಲ್ಲಿ ಇಂದಿಗೂ ಅಜರಾಮರವಾಗಿ ಉಳಿದಿದ್ದಾರೆ ವಿದ್ಯಾರ್ಥಿಗಳು ದೇಶ ಅಭಿಮಾನ ಬೆಳೆಸಿಕೊಳ್ಳುವುದರ ಜೊತೆಗೆ ಸ್ವಾತಂತ್ರ ಹೋರಾಟಗಾರರನ್ನು ಗೌರವಿಸಬೇಕು ಅವರಂತೆ ಹೋರಾಟದ ಗುಣಗಳನ್ನು ವಿದ್ಯಾರ್ಥಿ


ಉದಯವಾಹಿನಿ ಚಿತ್ರ

ಜೀವನದಲ್ಲಿಯೇ ರೂಡಿಸಿಕೊಳ್ಳಬೇಕು ದೇಶಕ್ಕಾಗಿ ಪ್ರತಿಯೊಬ್ಬರು ತ್ಯಾಗ ಮನೋಭಾವ ಬೆಳೆಸಿಕೊಳ್ಳಬೇಕು ಅವರು ಯುವಕರ ಪಡೆಯನ್ನು ಕಟ್ಟಿಕೊಂಡು ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ಕೊಡಿಸುತ್ತೇನೆ ಎಂಬ ಘೋಷವಾಕ್ಯದೊಂದಿಗೆ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ನೇತಾಜಿ ಸುಭಾಷ್ ಚಂದ್ರ ಬೋಸ್ ರವರ ಕೊಡುಗೆ ಅಪಾರವಾದದ್ದು ಇಂದಿನ ಯುವ ಜನತೆ ಅವರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕುಮಾರಿ ಚಂದ್ರಕಲಾ ಆವಂಟಿ, ಕುಮಾರಿ ಅನ್ನಪೂರ್ಣ, ಶಹಾಜಾ ಬಾನು, ಶಾಂತಾ ಎನ್ .ಜಡಿ, ಶಿಲ್ಪಾ ಜಿ, ದಿಲ್ ಶಾದ್, ಚಂದ್ರಕಲಾ, ಶಾಂತಾಬಾಯಿ, ವಿದ್ಯಾರ್ಥಿಗಳು ಇದ್ದರು.

# ಕ್ರೀಡಾಕೂಟದಲ್ಲಿ ಸೋಲು ಗೆಲುವು ಸಮಾನವಾಗಿ ಸ್ವೀಕರಿಸಿ

• **ಉದಯವಾಹಿನಿ, ಚಿಂಚೋಳಿ**

ವಕೀಲರು ಮತ್ತು ನ್ಯಾಯಾಲಯ ಸಿಬ್ಬಂದಿ ವರ್ಗದವರು ಹಾಗೂ ಪೋಲಿಸರು ಸದಾ ಕೆಲಸದ ಒತ್ತಡದಲ್ಲಿರುತ್ತಾರೆ ಆಗಾಗ ಕ್ರೀಡೆಗಳು ಆಡುತ್ತಿರುವುದರಿಂದ ಮಾನಸಿಕ ದೈಹಿಕ ಶಕ್ತಿ ಹೆಚ್ಚುತ್ತದೆ ರೋಗರುಜಿನಿಗಳು ಮಾಯಾವಾಗುತ್ತವೆ ಎಂದು ಹಿರಿಯ ಶ್ರೇಣಿ ನ್ಯಾಯಾಧೀಶರಾದ ಜ್ಯೋತಿ ಶಾಂತಪ್ಪ ಕಾಳೆ ಹೇಳಿದರು.

ಪಟ್ಟಣದ ಹೊರ ವಲಯದಲ್ಲಿರುವ ತಾಲ್ಲೂಕಾ ಕ್ರೀಡಾಂಗಣದಲ್ಲಿ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಮತ್ತು ಪೋಲಿಸ್ ಇಲಾಖೆ ಹಾಗೂ ವಕೀಲರ ಸಂಘದ ಸಂಯುಕ್ತ ಆಶ್ರಯದಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಸೌಹಾರ್ದತೆಯಿಂದ ಕ್ರೀಡೆಗಳು ಏರ್ಪಡಿಸಲಾದ ಕ್ರೀಡಾಕೂಟವನ್ನು ಉಧ್ಘಾಟಿಸಿ ಮಾತನಾಡಿದ ಅವರು,ಕ್ರೀಡೆಯಲ್ಲಿ ಕ್ರೀಡಾಪಟುಗಳು ಸೋಲು ಗೆಲುವು ಸಮಾನವಾಗಿ ಸ್ವೀಕರಿಸಿಕೊಳ್ಳಬೇಕು.

ಯಾವುದೇ ಮನಸ್ತಾಪ ಮಾಡಿಕೊಳ್ಳದೆ ಸೋಲೆ ಗೆಲುವಿನ ಮೆಟ್ಟಿಲುವೆಂದು ಭಾವಿಸಿಕೊಳ್ಳಬೇಕು,ಕಬ್ಬಡ್ಡಿ


ಉದಯವಾಹಿನಿ ಚಿತ್ರ

,ಕೋಕೋ,ಬ್ಯಾಟ್ ಮಿಂಟನ್,ಕ್ರಿಕೆಟ್ ಅಂಥಹ ವಿವಿಧ ಬಗೆಯ ಕ್ರೀಡೆಗಳು ಆಡುತ್ತಿರುವುದರಿಂದ ರೋಗರುಜಿನಿಗಳು ಸಹ ದೂರ ಹೋಗುತ್ತವೆ ಎಂದರು. ಪ್ರಧಾನ ಸಿವಿಲ್ ನ್ಯಾಯಾಧೀಶರು ದತ್ತುಕುಮಾರ ಜವಳಕರ್ ಕ್ರೀಡಾಪಟುಗಳಾಗಿ ಭಾಗವಹಿಸಿದ್ದರು. ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ,ಮಡಿವಾಳಪ್ಪ ಭಾಗೋಡಿ ಸೇರಿದಂತೆ ಕ್ರೀಡಾಪಟುಗಳಾಗಿ ಭಾಗವಹಿಸಿ ದರು.

ಚಂದ್ರಶೇಟ್ಟಿ ಜಾಧವ,ರಾಜೇಂದ್ರಕುಮಾರ ವರ್ಮಾ, ಶಂಕರ ರಾಠೋಡ್, ಉಮೇಶ ಪಾಟೀಲ, ಮಾರುತಿ ಸೇರಿದಂತೆ ನ್ಯಾಯಾಲಯ ಸಿಬ್ಬಂದಿ ವರ್ಗದವರು, ವಕೀಲರು ಪೋಲಿಸರು ಇದ್ದರು.

# ವಿಜಯಪೂರ,ಇಟ್ಟಂಗಿ ಭಟ್ಟಿಯ ಕೂಲಿ ಕಾರ್ಮಿಕರ ಮೇಲೆ ಹಲ್ಲೆ ಖಂಡನೀಯ

• **ಉದಯವಾಹಿನಿ,ಚಿಂಚೋಳಿ**

ವಿಜಯಪುರ ಜಿಲ್ಲೆಯಲ್ಲಿ ಇಟ್ಟಂಗಿ ಭಟ್ಟಿಯಲ್ಲಿ ಕೂಲಿಕಾರ್ಮಿಕ ಕೆಲಸ ಮಾಡುವವರ ಮೇಲೆ ಹಲ್ಲೆ ನಡೆಸಿ ಗೂಂಡಾವರ್ತನೆ ತೋರಿದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಂಡು ಹಲ್ಲೆಗೊಳಗಾದ ಪ್ರತಿಯೊಬ್ಬರ ಕೂಲಿಕಾರ್ಮಿಕರ ಕುಟುಂಬಕ್ಕೆ 50ಲಕ್ಷ ಪರಿಹಾರ ನೀಡಬೇಕು ಎಂದು ಮಾದಿಗ ಸಮಾಜದ ಹಿರಿಯ ಮುಖಂಡ ಗೋಪಾಲರಾವ ಕಟ್ಟಿಮನಿ ಆಗ್ರಹಿಸಿದರು.

ಪಟ್ಟಣದ ತಹಶೀಲ್ ಎದುರುಗಡೆ ಮಾದಿಗ ಸಮಾಜ ಸಂಘಟನೆಗಳ ಒಕ್ಕೂಟದಿಂದ ವಿಜಯಪುರ ಜಿಲ್ಲೆಯಲ್ಲಿ ಇಟ್ಟಂಗಿ ಭಟ್ಟಿಯ ಕೂಲಿಕಾರ್ಮಿಕರ ಮೇಲೆ ನಡೆದ ಹಲ್ಲೆ ಗೂಂಡಾವರ್ತನೆ ಖಂಡಿಸಿ ಮತ್ತು ಸೂಕ್ತ ತನಿಖೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು,ಮಕರ ಸಂಕ್ರಮಣ ಹಬ್ಬದ ನಿಮಿತ್ತ ಕೂಲಿಕಾರ್ಮಿಕರು


ಉದಯವಾಹಿನಿ ಚಿತ್ರ

**ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿ: ಕಟ್ಟಿಮನಿ ಆಗ್ರಹ**

ಊರಿಗೆ ಹೋಗಿ ಬರಲು ತಡವಾಗಿದ್ದಕ್ಕೆ ಇಟ್ಟಂಗಿ ಭಟ್ಟಿಯ ಮಾಲಿಕರು ಮಕ್ಕಳು ಕೂಡಿಕೊಂಡು ಗುಂಡಾವರ್ತನೆ ಮಾಡಿ ಕೂಲಿಕಾರ್ಮಿಕರಿಗೆ ಮಾರಣಾಂತಿಕ ಹಲ್ಲೆ ನಡೆಸಿದ್ದು ಸಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ ಇದನ್ನು ಘೋರವಾಗಿ ಖಂಡಿಸುತ್ತೇವೆ.

ಹಲ್ಲೆ ಮಾಡಿರುವ ಆರೋಪಿಗಳ ಆಸ್ತಿಯನ್ನು ಮಟ್ಟುಗೋಲು ಹಾಕಿಕೊಂಡು ಹಲ್ಲೆಗೊಳಗಾದ ಕೂಲಿಕಾರ್ಮಿಕರ ಪ್ರತಿಯೊಂದು ಕುಟುಂಬಕ್ಕೆ 50ಲಕ್ಷ ರೂ.ಪರಿಹಾರ ನೀಡಬೇಕು,ನೋಂದ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕು,ಕುಟುಂಬಕ್ಕೆ ಸರ್ಕಾರಿ ನೌಕರಿ ನೀಡಬೇಕು.

ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ ಆದ ದುರ್ಘಟನೆ ನಿಷ್ಪಕ್ಷಪಾತವಾಗಿ ಸೂಕ್ತ ತನಿಖೆ ನಡೆಸಿ ಈ ಹಲ್ಲೆ ನಡೆಸಿರುವ ಎಲ್ಲಾ ಆರೋಪಿಗಳಿಗೆ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು ಒಂದು ವೇಳೆ ನಿರ್ಲಕ್ಷ್ಯ ವಹಿಸಿದರೆ ರಾಜ್ಯಾದ್ಯಂತ ಹೋರಾ ಟ ಹಮ್ಮಿಕೊಳ್ಳಲಾಗುವುದು ಎಂದರು.

ಸುನೀಲ್ ಸಲಗಾರ, ಆಕಾಶ ಕೊಳ್ಳೂರ, ಮಲ್ಲು ಕೊಡಂಬಲ್, ವಿಜಯಕುಮಾರ ರಾಜ್, ಮಚೇಂದ್ರ ಸೇರಿಕಾರ, ನಾಗರ್ಜುನ ಕಟ್ಟಿ, ಪ್ರವೀಣ ಓಂಕಾರ, ಮೋಹನ ದಂಡೀನ, ಅಶ್ವಥ್ ಕಟ್ಟಿಮನಿ, ವಿಧ್ಯಾಸಾಗರ, ಶಿವಪ್ರಕಾಶ ಕಟ್ಟಿಮನಿ, ಮೋಹನ ಐನಾಪೂರ, ಅನೀಲ ಕ್ರಾಂತಿ, ನರಸಪ್ಪಾ, ವಿವೇಕಾನಂದ ಹೋಸ್ಮನಿ, ರೇವಣಸಿದ್ದ, ಪ್ರಶಾಂತ ಕಟ್ಟಿ, ವಿಜಯಕುಮಾರ, ಸತೀಶ, ವಿನೋದ ವಾಲಿ, ನಿಶಾಂತ, ಪ್ರಶಾಂತ, ಪುಟ್ಟು ಬೀರನಳ್ಳಿ, ಸಾಗರ್ ಆನಂದಿ, ಸೇರಿದಂತೆ ಅನೇಕರಿದ್ದರು.

# ಮಸಾಜ್ ಸೆಂಟರ್ ಮೇಲೆ ದಾಳಿ ಪ್ರಕರಣ ಪ್ರಸಾದ್ ಅತ್ತಾವರ ಸಿಸಿಬಿ ವಶಕ್ಕೆ

• **ಉದಯವಾಹಿನಿ ಮಂಗಳೂರು**

ಮಂಗಳೂರಿನ ಮಸಾಜ್ ಸೆಂಟರ್ ಮೇಲೆ ರಾಮ ಸೇನೆ ಕಾರ್ಯಕರ್ತರು ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮಸೇನೆ ರಾಜ್ಯಾಧ್ಯಕ್ಷ ಪ್ರಸಾದ್ ಅತ್ತಾವರ ಅವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅನೈತಿಕ ಚಟುವಟಿಕೆ ನಡೆಯುತ್ತಿದೆ ಎಂಬ ಆರೋಪದಲ್ಲಿ ರಾಮ ಸೇನೆ ಕಾರ್ಯಕರ್ತರು ಮಂಗಳೂರಿನ ಬಿಜೈ ಕೆ ಎಸ್ ಆರ್ ಟಿಸಿ ನಿಲ್ದಾಣದ ಬಳಿಯ ಕಲರ್ಸ್ ಮಸಾಜ್ ಸೆಂಟರ್ ಮೇಲೆ ದಿಢೀರ್ ದಾಳಿ ನಡೆಸಿ ಅಲ್ಲಿನ ಕಿಡಕಿ ಗಾಜುಗಳನ್ನು ಪುಡಿಗೈದು, ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮಂಗಳೂರು ಪೊಲೀಸರು, ಪ್ರಸಾದ್ ಅತ್ತಾವರ ಅವರನ್ನು ವಶಕ್ಕೆ ಪಡೆದಿದ್ದಾರೆ. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಸಾದ್ ಅತ್ತಾವರ, ಮಸಾಜ್ ಸೆಂಟರ್ ನಲ್ಲಿ ಡ್ರಗ್ಸ್ ಕೊಟ್ಟು ವೇಶ್ಯಾವಾಟಿಕೆ ನಡೆಸಲಾಗುತ್ತಿತ್ತು. 16–17 ವರ್ಷದ ಹೆಣ್ಣುಮಕ್ಕಳನ್ನು ಈ ದಂಧೆಗೆ ಬಳಸಿಕೊಳ್ಳಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ನಮ್ಮ ಕಾರ್ಯಕರ್ತರು ದಾಳಿ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ.

# ನರೇಗಾ ಕಾರ್ಮಿಕರಿದ್ದ ವಾಹನ ಪಲ್ಟಿ 25 ಕಾರ್ಮಿಕರಿಗೆ ಗಾಯ, ಮಹಿಳೆ ಗಂಭೀರ

• **ಉದಯವಾಹಿನಿ ಬೆಳಗಾವಿ**

ಹುಕ್ಕೇರಿ ತಾಲ್ಲೂಕಿನ ಹೊಸುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನರೇಗಾ ಕಾರ್ಮಿಕರನ್ನು ತುಂಬಿಕೊಂಡು ಕೆಲಸಕ್ಕೆ ಹೊರಟಿದ್ದ ಗೂಡ್ಸ್ ವಾಹನ ಪಲ್ಟಿಯಾಗಿ, 25 ಕಾರ್ಮಿಕರು ಗಾಯಗೊಂಡಿದ್ದಾರೆ. ಒಬ್ಬ ಮಹಿಳೆ ಸ್ಥಿತಿ ಗಂಭೀರವಾಗಿದೆ. ಯಮಕನಮರಡಿ ಗ್ರಾಮದಿಂದ ಹಿಡಕಲ್ ಡ್ಯಾಮ್ ಗೆ ನರೇಗಾ ಕೆಲಸಕ್ಕೆ 30ಕ್ಕೂ ಅಧಿಕ ಜನ ಹೊರಟಿದ್ದರು. ಅಡ್ಡಬಂದ ಬುಲೆಟ್ ವಾಹನ ತಪ್ಪಿಸಲು ಹೋಗಿ ಚಾಲಕ ಗೂಡ್ಸ್ ವಾಹನವನ್ನು ಎಡಕ್ಕೆ ತಿರುಗಿಸಿದ. ಈ ವೇಳೆ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಯಿತು. ಗಾಯಾಳುಗಳನ್ನು ಬೀಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿರುವ ಮಹಿಳೆಯನ್ನು ಹೆಚ್ಚಿನ ಚಿಕಿತ್ಸೆಗೆ ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿದೆ. ಯಾರಿಗೂ ಪ್ರಾಣಾಪಾಯ ಆಗಿಲ್ಲ.

# ಸೋಲಿನ ಸವಾಲು ಯಶಸ್ಸಿಗೆ ದಾರಿ

• **ಉದಯವಾಹಿನಿ, ಮಂಗಳೂರು**



ಬದುಕಿನಲ್ಲಿ ಎದುರಾಗುವ ಕಷ್ಟವು ಮನುಷ್ಯನಲ್ಲಿ ಛಲಗಾರಿಕೆ, ಸಾಧನೆಯ ಹುಮ್ಮಸ್ಸು ಬೆಳೆಸುತ್ತದೆ. ಕಷ್ಟ ಬಂದಾಗ ಎದೆಗುಂದದೆ, ಅದನ್ನು ಸವಾಲಾಗಿ ಸ್ವೀಕರಿಸಿದರೆ ಸಕಾರಾತ್ಮಕ ಪ್ರತಿಫಲ ದೊರೆಯುತ್ತದೆ ಎಂದು ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ಸಿಇಒ ಕೃಷ್ಣ ಜಿ. ಪಾಲೆಮಾರ್ ಹೇಳಿದರು.

ಮಂಗಳೂರು ಪ್ರೆಸ್ ಕ್ಲಬ್ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ ನಡೆದ ಗೌರವ ಅತಿಥಿ' ಕಾರ್ಯಕ್ರಮದಲ್ಲಿ ಅವರು ತಮ್ಮ ಜೀವನಾನುಭವ ಹಂಚಿಕೊಂಡರು.

'ಚಿಕ್ಕವನಿದ್ದಾಗ ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಊಟವಿಲ್ಲದೆ, ಮಲಗಿರುವ ದಿನಗಳು ಅದೆಷ್ಟೋ ಶಾಲೆಯ ಶುಲ್ಕ ಪಾವತಿಸಲು ಹಣವಿರಲಿಲ್ಲ. ಸೇಲ್ಸ್ ಮನ್ ಆಗಿ, ಎಲೆಕ್ಟ್ರಿಕ್ ಗುತ್ತಿಗೆದಾರನಾಗಿ ಕೆಲಸ ಮಾಡಿದ್ದೆ. ಭೂ ವ್ಯವಹಾರಕ್ಕೆ ಕೈ ಹಾಕಿ, ಮೂರು ಬಾರಿ ವ್ಯಾಪಾರದಲ್ಲಿ ಸೋತಿದ್ದೇನೆ. ಆದರೆ, ಅದೇ ಸೋಲು ನನ್ನನ್ನು ಇನ್ನಷ್ಟು ಗಟ್ಟಿಗೊಳಿಸಿ, ಹೊಸ ಅನ್ವೇಷಣೆಯ ಹಾದಿಗೆ ನೂಕಿತು' ಎಂದರು. 'ಶಾಲೆಗೆ ಹೋಗುತ್ತಿದ್ದ ವೇಳೆ ಮೋರ್ಗನ್ಸ್ ಗೇಟ್‌ನ ಗೇರುಬೀಜ ಕಾರ್ಖಾನೆಯೊಂದರಲ್ಲಿ ಕಾರ್ಮಿಕನಾಗಿ ದುಡಿದಿದ್ದೆ, ನಂತರ ಇದೇ ಆಸ್ತಿಯನ್ನು ಖರೀದಿಸಬಹುದೆಂದು ಕನಸಿನಲ್ಲೂ ಯೋಚಿಸಿರಲಿಲ್ಲ. ರಾಜಕಾರಣಿಯಾಗಿ ಹಣ ಕಳೆದುಕೊಂಡಿದ್ದೇನೆ, ಸಕ್ರಿಯ ರಾಜಕಾರಣದಿಂದ ದೂರ ಸರಿದು ಉದ್ಯಮಿಯಾದ ಮೇಲೆ ಸಂಪತ್ತುಗಳಿಸುತ್ತಿದ್ದೇನೆ' ಎಂದರು.

# ಪರಸ್ಪರ ಹೊಡೆದಾಟ: ಮೂವರ ಬಂಧನ

• **ಉದಯವಾಹಿನಿ ಸಿದ್ದಾಪುರ**

ದೇವಾಲಯದಲ್ಲಿ ಪಾತ್ರೆ ತೆಗೆಯುತ್ತಿರುವ ವಿಚಾರದಲ್ಲಿ ಗಲಾಟೆ ನಡೆದು ದೇವಾಲಯದ ನಿರ್ದೇಶಕರ ಮೇಲೆ ಹಲ್ಲೆ ನಡೆಸಿದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಸಿದ್ದಾಪುರದ ಎಂ.ಜಿ ರಸ್ತೆಯ ಶ್ರೀ ಮುತ್ತಪ್ಪ ಭಗವತಿ ದೇವಾಲಯದಲ್ಲಿ ಸಿದ್ದಾಪುರದ ನಿವಾಸಿ ಪ್ರವೀಣ್ ಹಾಗೂ ನಾಲ್ವರು ಕಾರ್ಯಕ್ರಮಕ್ಕೆ ಎಂದು ದೇವಾಲಯದ ಪಾತ್ರೆಗಳನ್ನು ತೆಗೆಯುತ್ತಿದ್ದು, ನಿರ್ದೇಶಕರಾದ ಅನಿಲ್ ಕುಮಾರ್ ಪ್ರಶ್ನಿಸಿದ್ದಾರೆ.

ಸ್ಥಳಕ್ಕೆ ಕಾರ್ಯದರ್ಶಿ ಶಿಜು ಹಾಗೂ ನಿರ್ದೇಶಕ ಆರ್. ಸುಬ್ರಮಣಿ ಆಗಮಿಸಿದ್ದು, ಈ ವೇಳೆ ಮಾತಿನ ಚಕಮಕಿ ನಡೆದಿದೆ. ಬಳಿಕ ಸುಬ್ರಮಣಿ ಅವರ ತಲೆಗೆ ಕತ್ತಿಯಿಂದ ಕಡಿದಿರುವುದಾಗಿ ಹಾಗೂ ಅನಿಲ್ ಕುಮಾರ್ ಕೈಗೆ ಸೌಟಿನಿಂದ ಹೊಡೆದಿರುವುದಾಗಿ ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು ಪ್ರವೀಣ್ ಹಾಗೂ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿ, ಮೂವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರು.

ನ್ಯಾಯಾಲಯ ಮೂವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಸುಬ್ರಮಣಿ ತಲೆಗೆ ಹಾಗೂ ಅನಿಲ್ ಕುಮಾರ್ ಕೈಗೆ ಗಾಯವಾಗಿದೆ. ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದರು.

# ಜನಸ್ನೇಹಿಯಾಗದ ತಾಲ್ಲೂಕು ಆಡಳಿತ ಸೌಧ

## ಆಡಳಿತ ಸೌಧದ ಕಟ್ಟಡ 5 ಕೋಟಿ ವೆಚ್ಚದಲ್ಲಿ ನಿರ್ಮಾಣ, ಆದರೆ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಒಂದೇ ಒಂದು ಕುರ್ಚಿಯೂ ಇಲ್ಲ

• **ಉದಯವಾಹಿನಿ ಸಾಗರ**

ಇಲ್ಲಿನ ತಾಲ್ಲೂಕು ಆಡಳಿತ ಸೌಧದ ಕಟ್ಟಡ 5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಆದರೆ, ಇಲ್ಲಿಗೆ ಬರುವ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಒಂದೇ ಒಂದು ಕುರ್ಚಿಯೂ ಇಲ್ಲ. ತಹಶೀಲ್ದಾರ್ ಕೊಠಡಿ ಮೊದಲ ಮಹಡಿಯಲ್ಲಿದೆ. ಕಟ್ಟಡದ ಲಿಫ್ಟ್ ವಾರದಲ್ಲಿ ನಾಲ್ಕು ದಿನ ಕೆಟ್ಟಿರುತ್ತದೆ. ವೃದ್ಧರು, ಅಂಗವಿಕಲರು ತಹಶೀಲ್ದಾರ್ ಅವರನ್ನು ಭೇಟಿ ಮಾಡಲು ಪ್ರಯಾಸ ಪಡಬೇಕಿದೆ.

ಪ್ರತಿಯೊಂದು ಸರ್ಕಾರಿ ಕಚೇರಿಗೆ ಅಂಗವಿಕಲರು ಗಾಲಿ ಕುರ್ಚಿಯ ಮೂಲಕ ಬರಲು ಅನುಕೂಲ ಆಗುವಂತೆ ರಾಂಪ್ ನಿರ್ಮಿಸಬೇಕು ಎಂಬ ನಿಯಮವಿದೆ. ಆದರೆ ಇಲ್ಲಿ ಆ ವ್ಯವಸ್ಥೆ ಇಲ್ಲ. ನೂತನ ಕಟ್ಟಡಕ್ಕೆ ತಾಲ್ಲೂಕು ಕಚೇರಿ ವರ್ಗಾವಣೆಗೊಂಡು ವರ್ಷ ಕಳೆದಿದ್ದರೂ 'ಭೂಮಿ' ಕೇಂದ್ರ ಇನ್ನೂ ಹಳೆಯ ಕಟ್ಟಡದಲ್ಲೇ ಇದೆ. ಖಾತೆ ಬದಲಾವಣೆ ಸೇರಿದಂತೆ ಪ್ರಮುಖ ಕೆಲಸಗಳಿಗೆ ಸಾರ್ವಜನಿಕರನ್ನು ಹೊಸ ಕಟ್ಟಡದಿಂದ ಹಳೆಯ ಕಟ್ಟಡಕ್ಕೆ, ಹಳೆಯ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಅಲೆಸಲಾಗುತ್ತಿದೆ ಎಂಬುದು ಸಾರ್ವಜನಿಕರ ಆರೋಪ. ಕಳೆದ ವರ್ಷ ತಾಲ್ಲೂಕಿನ ಹಲವು ಕಂದಾಯ ಗ್ರಾಮಗಳನ್ನು ಒಡೆದು ಅಕ್ಕಪಕ್ಕದ ಗ್ರಾಮಗಳಿಗೆ ಸೇರಿಸಲಾಗಿದೆ.

**ಪೀಠೋಪಕರಣ ಖರೀದಿಗೆ ಟೆಂಡರ್**

ಆದರೆ ಹೀಗೆ ಹೊಸ ಗ್ರಾಮಕ್ಕೆ ಸೇರಿಸಲಾದ ಪ್ರದೇಶದ ಸರ್ವೆ ನಂಬರ್‌ಗಳಿಗೆ ಸಾಫ್ಟ್‌ವೇರ್ ಸಮಸ್ಯೆಯಿಂದ ಹೊಸ ಸಂಖ್ಯೆ ಕೊಡಲು ಸಾಧ್ಯವಾಗುತ್ತಿಲ್ಲ.

ಒಂದೆ ಸರ್ವೇ ನಂಬರ್‌ನಲ್ಲಿ ಹೆಚ್ಚು ಜನರ ಹೆಸರು ಇದ್ದರೆ ತಮಗೆ ಹೆಚ್ಚಿನ ಕೆಲಸದ ಹೊರೆಯಾಗುತ್ತದೆ ಎನ್ನುವ ಕಾರಣಕ್ಕೆ ಸಿಬ್ಬಂದಿ ಆ ಕೆಲಸವನ್ನೇ ಮಾಡುತ್ತಿಲ್ಲ. ತಾಲ್ಲೂಕು ಕಚೇರಿಯಿಂದ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರಿಗೆ ವರದಿ ಕೇಳಿ ಕಳುಹಿಸುವ ಕಡತಗಳು 4 ತಿಂಗಳಾದರೂ ಮರಳಿ ಬರುತ್ತಿಲ್ಲ.

ತಮ್ಮ ಕಡತ ಏನಾಯಿತು? ಎಂದು ಜನರೇ ಹುಡುಕಿ ಮರಳಿ ತಾಲ್ಲೂಕು ಕಚೇರಿಗೆ ತರಿಸಲು ಪರದಾಡಬೇಕಾಗಿದೆ ಎಂದು ದೇಸಿ ಸೇವಾ ಬ್ರಿಗೇಡ್ ಅಧ್ಯಕ್ಷ ಶ್ರೀಧರ ಮೂರ್ತಿ ದೂರುತ್ತಾರೆ.


ಉದಯವಾಹಿನಿ ಚಿತ್ರ

> ತಾಲ್ಲೂಕು ಕಚೇರಿಯ ನೂತನ ಕಟ್ಟಡದ ಪೀಠೋಪಕರಣ ಖರೀದಿಗೆ ಟೆಂಡರ್ ಪ್ರಕ್ರಿಯೆ ನಡೆದಿದೆ. ಅದು ಮುಗಿದ ನಂತರ ಅಗತ್ಯವಿರುವ ಕುರ್ಚಿ ಟೇಬಲ್ ಪೂರೈಸಲಾಗುವುದು
> –ಚಂದ್ರಶೇಖರ್ ನಾಯ್ಕ್, ತಹಶೀಲ್ದಾರ್

ಪ್ರತಿ ತಿಂಗಳು ತಾಲ್ಲೂಕು ಕಚೇರಿಯಿಂದ ಎಷ್ಟು ಕಡತಗಳನ್ನು ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರಿಗೆ ಕಳುಹಿಸಲಾಗುತ್ತಿದೆ ಅಲ್ಲಿಂದ ಎಷ್ಟು ಕಡತಗಳು ಯಾವ ಅವಧಿಯೊಳಗೆ ಮರಳಿ ತಾಲ್ಲೂಕು ಕಚೇರಿಗೆ ಬಂದಿವೆ ಎನ್ನುವ ಬಗ್ಗೆ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಅವರು ಒತ್ತಾಯಿಸುತ್ತಾರೆ.

ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ತಮ್ಮ ಕೇಂದ್ರ ಸ್ಥಾನದಲ್ಲಿರದೇ ನಗರದ ವಿವಿಧೆಡೆ ಖಾಸಗಿ ಕಟ್ಟಡಗಳಲ್ಲಿ ತಮ್ಮದೇ ಕಚೇರಿ ಮಾಡಿಕೊಂಡಿದ್ದಾರೆ. ಇದರಿಂದ ಜನರ ಕೆಲಸಗಳು ಆಗುತ್ತಿಲ್ಲ. ಹೋಬಳಿಗಳಲ್ಲಿನ ನಾಡಕಚೇರಿಯ ಉಪ ತಹಶೀಲ್ದಾರ್ ಅವರೂ ಕೇಂದ್ರ ಸ್ಥಾನದಲ್ಲಿರದ ಕಾರಣ ನಿಗದಿತ ಸಮಯಕ್ಕೆ ಕಚೇರಿಯ ಬಾಗಿಲನ್ನೇ ತೆಗೆಯುತ್ತಿಲ್ಲ.

ಕೆಲವೆಡೆ ಮಧ್ಯಾಹ್ನ 12 ಗಂಟೆ ನಂತರ ಅಧಿಕಾರಿಗಳು ಕಚೇರಿಗೆ ಬರುತ್ತಾರೆ ಎಂಬುದು ಜನರ ಆರೋಪ. ಜನಸ್ನೇಹಿ ಆಡಳಿತ ದೊರೆಯದ ಬಗ್ಗೆ ಕಳೆದ ತಿಂಗಳು ಶಾಸಕ ಗೋಪಾಲಕೃಷ್ಣ ಬೇಳೂರು ಅವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಲ್ಲೂಕು ಆಡಳಿತ ಸೌಧದ ಕಚೇರಿಯ ಅವ್ಯವಸ್ಥೆ ವಿಷಯ ಪ್ರಮುಖವಾಗಿ ಚರ್ಚೆಯಾಗಿತ್ತು.

ಈ ಕಚೇರಿಯಲ್ಲಿನ ಅವ್ಯವಸ್ಥೆಗಳನ್ನು ಶೀಘ್ರ ಸರಿಪಡಿಸಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರು. ಆದರೂ ಈವರೆಗೆ ಅ ಕುರಿತು ಕ್ರಮವಾಗಿಲ್ಲ.

ಜನಪ್ರತಿನಿಧಿಗಳು ಈ ಅವ್ಯವಸ್ಥೆಯನ್ನು ಗಂಭೀರವಾಗಿ ಪರಿಗಣಿಸಿ ಸಕಾಲದಲ್ಲಿ ಸಾರ್ವಜನಿಕರ ಕೆಲಸ ಆಗುವಂತೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

### ಗ್ರಾಮಸ್ಥರು ಪರದಾಟ

ಹೊಸ ಗ್ರಾಮಕ್ಕೆ ವರ್ಗಾವಣೆಯಾದ ಕಾರಣ ಹಳೆಯ ಪಹಣಿ ದೊರಕುತ್ತಿಲ್ಲ. ಸಾಫ್ಟ್‌ವೇರ್ ಸಮಸ್ಯೆಯಿಂದಾಗಿ ಹೊಸ ಸಂಖ್ಯೆಯ ಪಹಣಿ ಕೂಡ ಲಭ್ಯವಾಗದೆ ಗ್ರಾಮಸ್ಥರು ಪರದಾಡುವಂತಾಗಿದೆ. ಪಹಣಿ ಇಂಡೀಕರಣಕ್ಕೆ ಸಂಬಂಧಿಸಿದಂತೆ ಸಣ್ಣ ಸಣ್ಣ ಸರ್ವೇ ನಂಬರ್‌ಗಳ ಇಂಡೀಕರಣವನ್ನು ಮಾತ್ರ ಕೈಗೊಳ್ಳಲಾಗುತ್ತಿದೆ.

# ಅಕ್ರಮ ವಲಸೆಯನ್ನು ಭಾರತ ಬೆಂಬಲಿಸುವುದಿಲ್ಲ: ಜೈಶಂಕರ್

## ಟ್ರಂಪ್ ಪೌರತ್ವ ನೀತಿ ಬಗ್ಗೆ ಜೈಶಂಕರ್ ಹೇಳಿದ್ದೇನು? ಭಾರತದ ಸ್ಪಷ್ಟ ನಿಲುವು ಖಚಿತಪಡಿಸಿದ ವಿದೇಶಾಂಗ ಸಚಿವ

**ವಾಷಿಂಗ್ಟನ್:** ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜನ್ಮಸಿದ್ಧ ಪೌರತ್ವ ನೀತಿಯಲ್ಲಿ ಬದಲಾವಣೆಗೆ ಮುಂದಾಗಿದ್ದು, ಈ ಬೆಳವಣಿಗೆಗಳನ್ನು ಇಡೀ ಜಗತ್ತು ಕುತೂಹಲದಿಂದ ನೋಡುತ್ತಿದೆ. ಈ ವಿಚಾರವಾಗಿ ಮಾತನಾಡಿರುವ ಭಾರತದ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್, ಈ ವಿಷಯದ ಬಗ್ಗೆ ಭಾರತದ ನಿಲುವು 'ಸ್ಥಿರ', 'ತಾತ್ವಿಕ'ವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.


ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಜೈಶಂಕರ್, ಅಮೆರಿಕವೂ ಸೇರಿದಂತೆ ವಿದೇಶಗಳಲ್ಲಿ ಕಾನೂನು ಬಾಹಿರವಾಗಿ ವಾಸಿಸುತ್ತಿರುವ ಭಾರತೀಯ ಪ್ರಜೆಗಳ ಕಾನೂನುಬದ್ಧ ವಾಪಸಾತಿಗೆ ನವದೆಹಲಿ ಮುಕ್ತವಾಗಿದೆ ಎಂದು ಹೇಳಿದ್ದಾರೆ. ಅಮೆರಿಕದಲ್ಲಿ ಕಾನೂನುಬದ್ಧವಾಗಿ ನೆಲೆಸಿರದ ಯಾರೇ ಆಗಲಿ ಅವರು ಭಾರತೀಯ ಪ್ರಜೆಗಳೆಂದು ಖಚಿತವಾದರೆ ಅಂತಹವರ ಕಾನೂನುಬದ್ಧ ವಾಪಸಾತಿಗೆ ಭಾರತದ ಸಮ್ಮತಿ ಇದೆ ಎಂದು ಅಮೆರಿಕದ ನೂತನ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರಿಗೆ ಹೇಳಿದ್ದಾಗಿ ಜೈಶಂಕರ್ ಮಾಹಿತಿ ನೀಡಿದ್ದಾರೆ. ಟ್ರಪ್ ಆಡಳಿತದ ವಲಸೆ ಮತ್ತು ಪೌರತ್ವ ನೀತಿಯ ಕುರಿತು ಇದೀಗ ಎಲ್ಲೆಡೆ ಚರ್ಚೆಯಾಗುತ್ತಿದೆ. ಇದರ ಪರಿಣಾಮಗಳ ಸೂಕ್ಷ್ಮತೆ ಬಗ್ಗೆ ನಮಗೆ ಅರಿವಿದೆ. ಆದರೆ ಈ ವಿಚಾರವಾಗಿ ನಮ್ಮ ನಿಲುವು ಸ್ಥಿರವಾಗಿದೆ. ಕಾನೂನುಬಾಹಿರ ವಾಸಿಗಳ ಬಗ್ಗೆ ನಮ್ಮ ನಿಲುವು ಏನು ಎಂಬುದನ್ನು ಈಗಾಗಲೇ ಅಮೆರಿಕಕ್ಕೆ ನಾವು ಸ್ಪಷ್ಟಪಡಿಸಿದ್ದೇವೆ ಎಂದು ವಿದೇಶಾಂಗ ಸಚಿವರು ತಿಳಿಸಿದರು. ಭಾರತವು ಉಭಯ ದೇಶಗಳ ನಡುವಿನ ಕಾನೂನು ಚಲನಶೀಲತೆಗೆ ಹೆಚ್ಚು ಬೆಂಬಲ ನೀಡುತ್ತಿದೆ.

ಅದೇ ರೀತಿ ಭಾರತೀಯ ಪ್ರತಿಭೆಗಳಿಗೆ ಜಾಗತಿಕ ಮಟ್ಟದಲ್ಲಿ ಉತ್ತಮ ಅವಕಾಶ ದೊರೆಯಲಿ ಎಂದು ಬಯಸುತ್ತದೆ ಇದೇ ವೇಳೆ ಭಾರತವು ಅಕ್ರಮ ವಲಸೆಯನ್ನು ದೃಢವಾಗಿ ವಿರೋಧಿಸುತ್ತದೆ. ಅಕ್ರಮ ವಲಸೆಯು ಹಲವಾರು ಕಾನೂನು ಬಾಹಿರ ಚಟುವಟಿಕೆಗಳಿಗೆ ಕಾರಣವಾಗುತ್ತದೆ ಎಂದು ಜೈಶಂಕರ್ ಅಭಿಪ್ರಾಯಪಟ್ಟಿದ್ದಾರೆ. ಒಂದು ಸರ್ಕಾರವಾಗಿ ನಾವು ನಿಸ್ಸಂಶಯವಾಗಿ ಕಾನೂನು ಚಲನಶೀಲತೆಯನ್ನು ಬೆಂಬಲಿಸುತ್ತೇವೆ. ಆದರೆ ಅಕ್ರಮ ವಲಸೆಯನ್ನು ಭಾರತ ಎಂದಿಗೂ ಬೆಂಬಲಿಸುವುದಿಲ್ಲ, ಭಾರತದ ಈ ನಿಲುವು ಅಮೆರಿಕವೂ ಸೇರಿದಂತೆ ಜಗತ್ತಿನ ಎಲ್ಲಾ ದೇಶಗಳಿಗೂ ಅನ್ವಯವಾಗುತ್ತದೆ. ಎಂದು ಜೈಶಂಕರ್ ಸ್ಪಷ್ಟಪಡಿಸಿದರು.

ಡಾ.ಎಸ್. ಜೈಶಂಕರ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಉದ್ಘಾಟನಾ ಸಮಾರಂಭದಲ್ಲಿ, ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಶೇಷ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇದೇ ವೇಳೆ ಟ್ರಂಪ್ ಅವರಿಗೆ ಪ್ರಧಾನಿ ಮೋದಿ ಅವರು ಬರೆದ ಪತ್ರವನ್ನೂ ಜೈಶಂಕರ್ ಹಸ್ತಾಂತರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಡೊನಾಲ್ಡ್ ಟ್ರಂಪ್ ಅವರು ಕಳೆದ ಜನವರಿ 20(ಸೋಮವಾರ)ರಂದು 47ನೇ ಯುಎಸ್ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು.

**ಚಲನಶೀಲತೆಗೆ ಹೆಚ್ಚು ಬೆಂಬಲ**



### ಕಾನೂನುಬದ್ಧ ವಾಪಸಾತಿ

**ಅಮೆರಿಕದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿರುವ ಜನ್ಮಸಿದ್ಧ ಪೌರತ್ವ ನೀತಿ ಮತ್ತು ಅಕ್ರಮ ವಲಸೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಭಾರತದ ವಿದೇಶಾಂಗ ಸಚಿವ ಡ.ಸ್. ಜೈಶಂಕರ್, ಅಮೆರಿಕವೂ ಸೇರಿದಂತೆ ವಿದೇಶಗಳಲ್ಲಿ ಕಾನೂನುಬಾಹಿರವಾಗಿ ವಾಸಿಸುತ್ತಿರುವ ಭಾರತೀಯ ಪ್ರಜೆಗಳ ಕಾನೂನುಬದ್ಧ ವಾಪಸಾತಿಗೆ ನವದೆಹಲಿ ಮುಕ್ತವಾಗಿದೆ ಎಂದು ಹೇಳಿದ್ದಾರೆ. ಭಾರತ ಅಕ್ರಮ ವಲಸೆಯನ್ನು ಎಂದಿಗೂ ಬೆಂಬಲಿಸುವುದಿಲ್ಲ ಎಂದು ಜೈಶಂಕರ್ ಇದೇ ವೇಳೆ ಸ್ಪಷ್ಟಪಡಿಸಿದ್ದಾರೆ.**

- **ವಾಷಿಂಗ್ಟನ್ ಡಿಸಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಭಾರತದ ವಿದೇಶಾಂಗ ಸಚಿವ**
- **ಕಾನೂನುಬಾಹಿರ ಭಾರತೀಯ ಪ್ರಜೆಗಳ ವಾಪಸಾತಿಗೆ ಸಿದ್ಧ ಎಂದ ಎಸ್.ಜೈಶಂಕರ್**
- **ಭಾರತದ ನಿಲುವು 'ಸ್ಥಿರ' ಮತ್ತು 'ತಾತ್ವಿಕ' ಎಂದ ವಿದೇಶಾಂಗ ಸಚಿವ**

# ಸ್ಮಶಾನದಲ್ಲಿ ಹೂತಿದ್ದ ಶವಗಳ ರುಂಡಗಳೇ ಮಾಯ



**ಪಾಟ್ನಾ:** ಸ್ಮಶಾನದಲ್ಲಿ ಹೂಳಲಾಗಿದ್ದ ಮೃತದೇಹಗಳ ತಲೆಗಳು ಮಾತ್ರ ನಿಗೂಢವಾಗಿ ಕಾಣೆಯಾಗಿರುವ ಅಚ್ಚರಿಯ ಬೆಳವಣಿಗೆ ಬಿಹಾರದಲ್ಲಿ ನಡೆದಿದೆ.

ಮೃತದೇಹಗಳ ತಲೆಯನ್ನು ಕತ್ತರಿಸಿ ಕಳ್ಳಸಾಗಣೆ ಮಾಡುತ್ತಿರುವ ಸಾಧ್ಯತೆಗಳಿವೆ ಎಂದು ಸ್ಥಳೀಯರು ಶಂಕೆ ವ್ಯಕ್ತಪಡಿಸಿದ್ದಾರೆ. ಸ್ಮಶಾನದಲ್ಲಿ ಸಮಾಧಿಯನ್ನು ಅಗೆದಿರುವುದು ಕಂಡು ಬಂದು ಪರಿಶೀಲಿಸಿದಾಗ ಶವಗಳ ರುಂಡ ಇಲ್ಲದಿರುವುದು ಬೆಳಕಿಗೆ ಬಂದಿದೆ. ಒಂದು ಬಾರಿಯಲ್ಲ ಐದು ಬಾರಿ ಇದೇ ರಿತಿಯ ಪ್ರಕರಣಗಳು ನಡೆದಿವೆ. ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಪೊಲೀಸ್ ವರಿಷ್ಠಾಧಿಕಾರಿ ಎಸ್‌ಡಿಪಿಒಗೆ ತನಿಖೆಯನ್ನು ಹಸ್ತಾಂತರಿಸಿದ್ದಾರೆ. ಘಟನೆ ನಡೆದ ಸ್ಥಳವನ್ನು ಪರಿಶೀಲನೆ ನಡೆಸಲಾಗಿದ್ದು, ಜನರಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸಮಾಧಿಯಿಂದ ಮೃತದೇಹಗಳ ತಲೆಗಳು ಮಾಯವಾಗುತ್ತಿರುವುದರಿಂದ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಗ್ರಾಮದಲ್ಲಿ ಹಳೆಯ ಸ್ಮಶಾನವಿದೆ. ಇಲ್ಲಿ ಮುಸ್ಲಿಂ ಸಮುದಾಯದವರ ಶವಗಳನ್ನು ಹೂಳಲಾಗುತ್ತದೆ. ಕಳೆದ ಸೋಮವಾರ, ಕಳ್ಳ ಸಾಗಾಣಿಕೆದಾರರು ಇಲ್ಲಿನ ಸಮಾಧಿಯಲ್ಲಿ ಹೂತಿಟ್ಟಿದ್ದ ಮಹಿಳೆಯ ತಲೆಯನ್ನು ತೆಗೆದುಕೊಂಡು ಹೋಗಿದ್ದರು ಈ ಶವ ಬದ್ರು ಎಂಬುವರ ತಾಯಿಯದ್ದು, 6 ತಿಂಗಳ ಹಿಂದೆ ಬದ್ರು ತನ್ನ ತಾಯಿ ಯನ್ನು ಇದೇ ಸಮಾಧಿಯಲ್ಲಿ ಹೂಳಿದ್ದರು. ಕಳ್ಳಸಾಗಣೆದಾರರು ಈ ಸಶಾನದಿಂದ ಸಮಾಧಿ ಗಳನ್ನು ಅಗೆದು, ಮುಖ್ತಾರ್ ಅವರ ಅತ್ತೆ, ಮೊಹಿದ್ ಅವರ ಪತ್ನಿ, ಮೊಹಿದ್ ಆಶಿಕ್ ಅಲಿ ಅವರ ಪತ್ನಿಯ ಶಿರಚ್ಛೇದ ಮಾಡಿ ಅದರೊಂದಿಗೆ ಪರಾರಿಯಾಗಿದ್ದಾರೆ. ಆದರೆ, ಇದು ಮಾಂತ್ರಿಕರ ಕೈವಾಡ, ಅವರಿಂದಲೇ ಇಂತಹ ಘಟನೆಗಳು ನಡೆಯುತ್ತಿವೆ ಎನ್ನುತ್ತಾರೆ ಕೆಲ ಗ್ರಾಮಸ್ಥರು.

ಈ ಘಟನೆಯಲ್ಲಿ ಮಾನವ ಕಳ್ಳಸಾಗಣೆ ಗ್ಯಾಂಗ್‌ನ ಕೈವಾಡವಿದೆ ಎಂದು ಜನರು ಶಂಕಿಸಿದ್ದಾರೆ. ಸಮಾಧಿಯನ್ನು ಅತ್ಯಂತ ಎಚ್ಚರಿಕೆಯಿಂದ ಅಗೆದು ನಂತರ ಬಿದಿರಿನ ಬತ್ತಿಗಳಿಂದ ಮುಚ್ಚಿ ಅದರ ಮೇಲೆ ಮಣ್ಣನ್ನು ಸುರಿಯಲಾಗುತ್ತದೆ. ಸ್ಮಶಾನದಲ್ಲಿ ನಿರ್ಮಿಸಲಾಗಿರುವ ಗಡಿ ಗೋಡೆಯನ್ನು ಯಾರೋ ಪದೇ ಪದೇ ಒಡೆಯುತ್ತಿದ್ದಾರೆ, ಮೂರರಿಂದ ನಾಲ್ಕು ಗ್ರಾಮಗಳ ಮುಸ್ಲಿಂ ಸಮುದಾಯದ ಜನರು ಮತ ದೇಹಗಳನ್ನು ಹೂಳಲು ಈ ಸಶಾನಕ್ಕೆ ಬರುತ್ತಾರೆ, ಈ ಬಗ್ಗೆ ತನಿಖೆ ನಡೆಸುವಂತೆ ಕಹಲ್‌ಗಾಂವ್ ಎಸ್‌ಡಿಪಿಒಗೆ ಸೂಚಿಸಲಾಗಿದೆ ಎಂದು ಭಾಗಲ್ಪುರ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಹದಯ್ ಕಾಂತ್ ಹೇಳಿದ್ದಾರೆ.

# ಒಳಗೊಳ್ಳುವಿಕೆಯೇ ಭಾರತದ ಆರ್ಥಿಕತೆ ಆಧಾರಸ್ತಂಭ



**ದಾವೋಸ್:** ಉತ್ಪಾದನೆ, ಸೇವೆಗಳು, ಕಾನೂನುಗಳ ಸರಳೀಕರಣದ ಜೊತೆಗೆ ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿಯೇ ಭಾರತದ ಆರ್ಥಿಕತೆಯ ಮೂಲಾಧಾರ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಹೇಳಿದ್ದಾರೆ. ಇಲ್ಲಿ ನಡೆಯು ತ್ತಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಮಾ ವೇಶದಲ್ಲಿ ಗೋಷ್ಠಿಯೊಂದರಲ್ಲಿ ಮಾತನಾಡಿದ ಅವರು, ಎಲ್ಲರನ್ನು ಒಳಗೊಳ್ಳುವ ಪ್ರಗತಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಅವಧಿಗೆ ಆಯ್ಕೆಯಾಗಲು ಪ್ರಮುಖ ಕಾರಣ ಎಂದು ಹೇಳಿದ್ದಾರೆ.

ಭಾರತವು ಬರುವ ದಿನಗಳಲ್ಲಿ ಹಣದುಬ್ಬರವನ್ನು ನಿಯಂತ್ರಣದಲ್ಲಿ ಇಡುವ ಜೊತೆಗೆ ಆರ್ಥಿಕ ಪ್ರಗತಿ ದರವನ್ನು ಶೇ 6 – 8ರಷ್ಟು ನಿರ್ವಹಣೆ ಮಾಡಲಿದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಯಾವುದೇ ಕ್ಷೇತ್ರ ತೆಗೆದು ಕೊಂಡರೂ ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಇನ್ನೊಂದೆಡೆ ಉದ್ಯಮ ಸ್ನೇಹಿ ನೀತಿಗಳನ್ನು ಹೊಂದಿದೆ. ಇದೇ ಕಾರಣಕ್ಕೆ, ಇಡೀ ವಿಶ್ವದ ಪಾಲಿಗೆ ಭಾರತ ನಂಬಿಕಸ್ಥ ದೇಶವೆನಿಸಿದ್ದು, ಅನೇಕ ಕಂಪನಿಗಳು ತಮ್ಮ ಕಾರ್ಖಾನೆಗಳನ್ನು ಭಾರತಕ್ಕೆ ಸ್ಥಳಾಂತರ ಮಾಡುತ್ತಿವೆ' ಎಂದರು.

**ಭಾರತದ ಸುವರ್ಣಯುಗ ಆರಂಭವಾಗಿದೆ:** ಭಾರತದ ಸುವರ್ಣಯುಗ ಆರಂಭವಾಗಿದೆ. ಅಭಿವೃದ್ಧಿ ವಿಚಾರವಾಗಿ ದೇಶದ ಎಲ್ಲಾ ರಾಜ್ಯಗಳ ನಡುವೆ ಸ್ಪರ್ಧೆ ಇದೆ ಎಲ್ಲವೂ ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತಿವೆ' ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿದರು.

ಭಾರತದ ನಿಯೋಗದೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 1967ರಿಂದಲೂ ನಾನು ವಿಶ್ವ ಆರ್ಥಿಕ ವೇದಿಕೆ ಸಮಾವೇಶದಲ್ಲಿ ಪಾಲ್ಗೊಳ್ಳುತ್ತಾ ಬಂದಿದ್ದೇನೆ. ಇದೇ ಮೊದಲ ಬಾರಿಗೆ ಭಾರತ ಒಂದು ತಂಡವಾಗಿ ವಿಶ್ವದೆದುರು ತನ್ನನ್ನು ಪ್ರಸ್ತುತಪಡಿಸುತ್ತಿದೆ' ಎಂದರು. ಎಲ್ಲಾ ರಾಜ್ಯಗಳು ಒಟ್ಟಿಗೆ ಅಭಿವೃದ್ಧಿ ಹೊಂದುವುದು ಮುಖ್ಯ. ಭಾರತದಲ್ಲಿ ಈಗ ಈ ಕಾರ್ಯ ನಡೆಯುತ್ತಿದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದರು.

# ಹಿಂದೂ ದೇಗುಲಕ್ಕೆ ಮುಸ್ಲಿಂ ವ್ಯಕ್ತಿ ಅಧ್ಯಕ್ಷ



**ಬಹರಾಇಚ್:** ಕೋಮುಗಲಭೆ, ಸಂಘರ್ಷ, ದಾಳಿ ಘಟನೆಗಳಿಂದಲೇ ಸುದ್ದಿಗೆ ಗ್ರಾಸವಾಗುತ್ತಿದ್ದ ಉತ್ತರ ಪ್ರದೇಶದ ನೆಲದಿಂದ ಈಗ ಕೋಮುಸೌಹಾರ್ದದ ಸುದ್ದಿ ಹೊರಬಿದ್ದಿದೆ. ಅವರು ಮುಸ್ಲಿಂ. 18 ವರ್ಷಗಳಿಂದ ಹಿಂದೂ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರಾಗಿದ್ದಾರೆ. ದೇಗುಲದ ಆಸ್ತಿ ರಕ್ಷಿಸುವ ಕಾಯಕ ಕೈಗೊಂಡಿದ್ದಾರೆ. ಸೌಹಾರ್ದಕ್ಕೆ ಉದಾಹರಣೆ ಆಗಿದ್ದಾರೆ. ಅವರ ಹೆಸರು ಮೊಹಮ್ಮದ್ ಅಲಿ. ಜಿಲ್ಲಾ ಕೇಂದ್ರದಿಂದ 27ಕಿ.ಮೀ. ದೂರದ ಜೈತಂಪುರ್ ಬಜಾರ್‌ನಲ್ಲಿ ಇರುವ ವೃದ್ಧಿ ಮಾತೇಶ್ವರಿಮಠ ಗುರುದೇವಿ ದೇವಸ್ಥಾನದ ಆಡಳಿತ ಮಂಡಳಿಗೆ ಇವರೇ ಅಧ್ಯಕ್ಷರು. ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಮುಸ್ಲಿಮರೂ ದೇಗುಲವನ್ನು ಪೂಜ್ಯ ಭಾವದಿಂದ ನೋಡುತ್ತಾರೆ. 58 ವರ್ಷದ ವಯಸ್ಸಿನ ಅಲಿ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ರೋಜಾ ಪಾಲಿಸುತ್ತಾರೆ. ಜೊತೆಗೆ ಗುರು ದೇವಿ ಮಾತೆ, ಹನುಮಂತನನ್ನೂ ಆರಾಧಿಸುತ್ತಾರೆ. ಹಿಂದೂಗಳಷ್ಟೇ ಅಲ್ಲದೆ, ಅನೇಕ ಮುಸ್ಲಿಂ ಮಹಿಳೆಯರು ಇಲ್ಲಿಗೆ ಭೇಟಿ ನೀಡುತ್ತಾರೆ. ಈ ದೇಗುಲವು ಧಾರ್ಮಿಕ ಪ್ರವಾಸೋದ್ಯಮದ ಭಾಗವಾಗಿದೆ ಎಂದು ಜಿಲ್ಲಾ ಪ್ರವಾಸೋದ್ಯಮ ಅಧಿಕಾರಿ ಶ್ರೀವಾತ್ಸವ ತಿಳಿಸಿದರು.

# ಅಮೆರಿಕಾ ಕಾಳ್ಗಿಚ್ಚು: ಸಾವಿರಾರು ಮಂದಿ ಬಾಧಿತ

**ಲಾಸ್ ಏಂಜಲೀಸ್:** ಅಮೆರಿಕಾ ಲಾಸ್ ಏಂಜಲೀಸ್ ಕೌಂಟಿಯಲ್ಲಿ ಕಾಣಿಸಿಕೊಂಡ ಕಾಳ್ಗಿಚ್ಚು ದೇಶದ ಇತಿಹಾಸದಲ್ಲಿ ಅತಿ ಹೆಚ್ಚು ಭೂ ಪ್ರದೇಶ ಹಾನಿಯಾಗಿದ್ದು ಸಾವಿರಾರು ಮಂದಿ ಬಾಧಿತರಾಗಿದ್ದಾರೆ. ಚಳಿಗಾಲ ಮತ್ತು ಹಿಮದ ನಡುವೆಯೂ ಕಾಳ್ಗಿಚ್ಚು ಸ್ಫೋಟಗೊಂಡಿದೆ, ಇದರ ಪರಿಣಾಮ ಅಮೆರಿಕಾದ ಇತಿಹಾಸದಲ್ಲಿ ಅತ್ಯಂತ ವಿನಾಶಕಾರಿ ಕಾಳ್ಗಿಚ್ಚು ಎಂದು ಹೇಳಲಾಗಿದೆ.

ಲಾಸ್ ಏಂಜಲೀಸ್ ನಗರದ ವಾಯುವ್ಯಕ್ಕೆ ಸುಮಾರು 45 ಮೈಲುಗಳಷ್ಟು ದೂರದಲ್ಲಿ ಕಾಣಿಸಿ ಕೊಂಡ ಕಾಳ್ಗಿಚ್ಚು ಹಲವಾರು ವಸತಿ ಪ್ರದೇಶಗಳು, ಶಾಲೆಗಳ ಗಡಿಯಲ್ಲಿರುವ ಪರ್ವತ ಪ್ರದೇಶದ ಕ್ಯಾಸ್ಟೈಕ್ ಸರೋವರದ ಬಳಿ ಹೊತ್ತಿ ಉರಿದಿದೆ. ಕಾಡಿನ ಅಂಚಿನಲ್ಲಿರುವ ಮನೆ,ಕಟ್ಟಡ ಸೇರಿದಂತೆ ಇನ್ನಿತರೆ ಪ್ರದೇಶಗಳಲ್ಲಿ ಬೆಂಕಿ ಕಾಣಿಸಿಕೊಂಡು ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ . ಹಾನಿಯ ಅಂದಾಜು ಮಾಡುವ ಕೆಲಸ ನಡೆಯುತ್ತಿದೆ. ಸದ್ಯಕ್ಕೆ ಎಷ್ಟು ಹಾನಿ ಆಗಿರಬಹುದು ಎನ್ನುವುದನ್ನು ನಿಖರಾಗಿ ಹೇಳಲು ಸಾದ್ಯವಾಗಿಲ್ಲ. ಸದ್ಯ ಬೆಂಕಿ ನಂದಿಸುವ ಕೆಲಸ ನಡೆಯುತ್ತಿದೆ ಎಂದು ಅವರು ಮಾಹಿತಿ ಹಂಚಹಾನಿಯಾಗಿದೆ. ಕಾಳ್ಗಿಚ್ಚು ಸುಮಾರು 9,200 ಎಕರೆಗೂ ಹೆಚ್ಚು ಬೆಂಕಿ ಕಾಣಿಸಿಕೊಂಡಿದೆ ಇದರ ಪರಿಣಾನ, ಗಾಳಿ, ಒಣ ಹುಲ್ಲು ಬೆಂಕಿಗೆ ಆಹುತಿಯಾಗಿದೆ. ಯಾವುದೇ ಮನೆಗಳು, ವ್ಯಾಪಾರಗಳಿಗೆ ಹಾನಿಯಾಗಿಲ್ಲ, ಅಗ್ನಿಶಾಮಕ ಅಧಿಕಾರಿಗಳು ಬೆಂಕಿಯನ್ನು ನಿಯಂತ್ರಣಕ್ಕೆ ತರುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ತಿಂಗಳ ಆರಂಭದಲ್ಲಿ ಲಾಸ್ ಏಂಜಲೀಸ್ ಪ್ರದೇಶದಲ್ಲಿ ಅನೇಕ ನೆರೆಹೊರೆಗಳನ್ನು ನಾಶಪಡಿಸಿದೆ ಇನ್ನೂ ಉರಿಯುತ್ತಿರುವ ಎರಡು ಕಾಳ್ಗಿಚ್ಚು ನಡುವೆ ಮತ್ತೊಂದು ಕಾಳ್ಗಿಚ್ಚು ಕಾಣಿಸಿಕೊಂಡು ಹಾನಿಯಾಗಿದೆ ಬೆಂಕಿಯ ಸಮೀಪವಿರುವ ನಿವಾಸಿಗಳು ತಮ್ಮ ಮನೆಗಳು ಮತ್ತು ತೋಟಗಳನ್ನು ರಕ್ಷಿಸಿಕೊಳ್ಳಲು ಹರಸಾಹಸ ನಡೆಸಿದ್ದಾರೆ



**ಆರೆಂಜ್ ಅಲರ್ಟ್ ಘೋಷಣೆ:** ವಿಮಾನದ ಮೂಲ ನೀರು ಹಾಕುವ ಮೂಲಕ ಬೆಂಕಿಯ ಜ್ವಾಲೆಯ ನಿವಾರಿಸುವ ಕೆಲಸ ಸಾಗಿದೆ .ಈ ಹಿನ್ನಲೆಯಲ್ಲಿ ಎಲ್ಲೆಡೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಪ್ರದೇಶದಲ್ಲಿ ರೆಡ್ ಅಲರ್ಟ್ ಘೋಷಿಸುವ ಸಾಧ್ಯತೆಯನ್ನು ಅಗ್ನಿ ಶಾಮಕ ಸಿಬ್ಬಂದಿ ವ್ಯಕ್ತಪಡಿಸಿದ್ದು ಬಲವಾದ ಗಾಳಿ, ಶುಷ್ಕ, ಕಡಿಮೆ-ತೇವಾಂಶದ ಪರಿಸ್ಥಿತಿಗಳಿಂದ ಹೆಚ್ಚಿನ ಬೆಂಕಿಯ ಅಪಾಯ ಹೆಚ್ಚಾಗುವ ಭೀತಿ ತಲೆದೋರಿದೆ. ಪ್ರದೇಶದಲ್ಲಿ ಗಾಳಿಯು ಸುಮಾರು 20 ರಿಂದ 30 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸುತ್ತಿದೆ. ಬೆಂಕಿ ನಂದಿಸಲು ಅಗ್ನಿಶಾಮಕ ಮತ್ತು ವಾಯು ಸಿಬ್ಬಂದಿಗೆ ಕಾರ್ಯನಿರ್ವಹಿಸಲು ಕಷ್ಟವಾಗುತ್ತದೆ.

ಸೂರ್ಯಾ ಸ್ತವಾಗುತ್ತಿದ್ದಂತೆ ಬೆಂಕಿಯು ಬೆಳೆಯುತ್ತಲೇ ಇತ್ತು, ಆದರೆ ಲಾಸ್ ಏಂಜ ಲೀಸ್ ಕೌಂಟಿಯ ಅಗ್ನಿ ಶಾಮಕ ಮುಖ್ಯಸ್ಥ ಆಂಥೋನಿ ಮರ್ರೋನ್ ತಿಳಿಸಿದ್ದಾರೆ

**ಈ ಪ್ರದೇಶದಲ್ಲಿ ಸುಮಾರು 31,000 ಜನರು ಕಡ್ಡಾಯವಾಗಿ ಸ್ಥಳಾಂತರಿಸುವ ಆದೇಶದಲ್ಲಿದ್ದಾರೆ ಮತ್ತು ಇನ್ನೂ 23,000 ಜನರು ಪಲಾಯನ ಮಾಡಬೇಕಾಗಬಹುದು ಎಂದು ಎಚ್ಚರಿಕೆ ನೀಡಲಾಗಿದೆ ಎಂದು ಲಾಸ್ ಏಂಜಲೀಸ್ ಕೌಂಟಿ ಶೆರಿಫ್ ರಾಬರ್ಟ್ ಲೂನಾ ಹೇಳಿದ್ದಾರೆ.**

# ಮೌಂಟ್ ಎವರೆಸ್ಟ್ ಶಿಖರವನ್ನು ಏರುವ ಶುಲ್ಕ ಶೇ.36ರಷ್ಟು ಹೆಚ್ಚಳ



**ಕಠ್ಮಂಡು:** ನೇಪಾಳ ಸರ್ಕಾರ ಮೌಂಟ್ ಎವರೆಸ್ಟ್ ಶಿಖರವನ್ನು ಏರಲು ಪರವಾನಗಿ ಶುಲ್ಕವನ್ನು ಶೇಕಡಾ 36 ರಷ್ಟು ಹೆಚ್ಚಿಸಿದೆ.ವಿಶ್ವದ ಅತಿ ಎತ್ತರದ ಶಿಖರದಲ್ಲಿ ಕಸ ಮಾಲಿನ್ಯವನ್ನು ನಿಯಂತ್ರಿಸುವ ಗುರಿಯಡಿ ಹಲವಾರು ಕ್ರಮಗಳನ್ನು ಜಾರಿಗೆ ತರಲು ಮುಂದಾಗಿದ್ದು , ಪ್ರಸ್ತುತ ಪರಿಷ್ಕೃತ ಪರ್ವತಾರೋಹಣ ನಿಯಮಗಳ ಅಡಿಯಲ್ಲಿ, ವಸಂತ ಋತುವಿನಲ್ಲಿ (ಮಾರ್ಚ್-ಮೇ) ಸಾಮಾನ್ಯ ದಕ್ಷಿಣ ಮಾರ್ಗದಿಂದ ಎವರೆಸ್ಟ್ ಏರುವ ವಿದೇಶಿಯರಿಗೆ ರಾಯಲ್ಟಿ ಶುಲ್ಕ ವನ್ನು ಪ್ರಸ್ತುತ ಪ್ರತಿ ವ್ಯಕ್ತಿ 11,000 ರಿಂದ 15,000 ಗೆ ಹೆಚ್ಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೀತಕಾಲದ (ಸೆಪ್ಟೆಂಬರ್-ನವೆಂಬರ್)ಲ್ಲೂ ಈಗಿರುವ ಶುಲ್ಕದ 5,500 ರಿಂದ 7,500 ಗೆ ಏರಿದೆ. ಅದೇ ಸಮಯದಲ್ಲಿ, ಚಳಿಗಾಲ (ಡಿಸೆಂಬರ್-ಫೆಬ್ರವರಿ) ಮತ್ತು ಮಾನ್ಸೂನ್ (ಜೂನ್-ಆಗಸ್ಟ್) ಋತುಗಳಲ್ಲಿ ಪ್ರತಿ ವ್ಯಕ್ತಿಯ ಪರವಾನಗಿ ವೆಚ್ಚವು 2,750 ರಿಂದ 3,750 ಕ್ಕೆ ಏರಿದೆ. ಈ ಕುರಿತು ಈಗಾಗಲೇ ಸಂಪುಟ ನಿರ್ಧಾರ ತೆಗೆದುಕೊಳ್ಳಲಾಗಿದೆ, ಆದರೆ ಅಧಿಕೃತ ಘೋಷಣೆ ಇನ್ನೂ ಬರಬೇಕಿದೆ ಎಂದು ಪ್ರವಾಸೋದ್ಯಮ ಮಂಡಳಿಯ ನಿರ್ದೇಶಕಿ ಆರತಿ ನ್ಯೂಪಾನೆ ಹೇಳಿದ್ದಾರೆ. ಕಳೆದ 2015 ರಂದು ಕೊನೆಯ ರಾಯಲ್ಟಿ ಶುಲ್ಕ ಪರಿಷ್ಕರಣೆಯನ್ನು ಮಾಡಲಾಗಿತ್ತು ಆಗ ಸರ್ಕಾರವು ಸಾಮಾನ್ಯ ಮಾರ್ಗದಿಂದ ವಸಂತ ಋತುವಿಗೆ ಪ್ರತಿ ಪರ್ವತಾರೋಹಿಗಳಿಗೆ 11,000 ಏಕರೂಪದ ಶುಲ್ಕಕ್ಕೆ ಬದಲಾಯಿಸಿತು. ಈ ಹಿಂದೆ 75 ದಿನಗಳವರೆಗೆ ಮಾನ್ಯವಾಗಿದ್ದ ಕ್ಲೈಂಬಿಂಗ್ ಪರವಾನಗಿಗಳು ಈಗ 55 ದಿನಗಳಿಗೆ ಸೀಮಿತವಾಗಿರುತ್ತದೆ. ಕ್ಲೈಂಬಿಂಗ್ ಚಟುವಟಿಕೆಗಳನ್ನು ಸುಗಮಗೊಳಿಸುವ ಗುರಿಯನ್ನು ಕಡಿಮೆ ಮಾಡಲಾಗಿದೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ.ಮಲಿನ ಮುಕ್ತಕೂ ಕ್ರಮಕ್ಕೈಗೊಳ್ಳಲಾಗಿದೆ. ಹೊಸ ನಿಯಮಗಳ ಪ್ರಕಾರ, ಮುಂಬರುವ ವಸಂತ ಋತುವಿನಿಂದ, ಎವರೆಸ್ಟ್ ಪರ್ವತಾರೋಹಿಗಳು ತಮ ಮಲವನ್ನು ಸರಿಯಾದ ವಿಲೇವಾರಿಗಾಗಿ ಬೇಸ್ ಕ್ಯಾಂಪ್‌ಗೆ ತರಬೇಕಾಗುತ್ತದೆ. ಪರ್ವತಾರೋಹಿಗಳು ಮೇಲ್ಭಾಗದ ಪ್ರದೇಶಗಳಲ್ಲಿ ತ್ಯಾಜ್ಯವನ್ನು ಸಂಗ್ರಹಿಸಲು ಜೈವಿಕ ವಿಘಟನೀಯ ಚೀಲಗಳನ್ನು ಒಯ್ಯಬೇಕು.ಕೆಲವೇ ಪರ್ವತಾರೋಹಿಗಳು ಶಿಖರದಿಂದ ತ್ಯಾಜ್ಯವನ್ನು ಸಾಗಿಸಲು ಜೈವಿಕ ವಿಘಟನೀಯ ಚೀಲಗಳನ್ನು ಬಳಸುತ್ತಾರೆ ಎಂದು ವರದಿ ಸೇರಿಸಲಾಗಿದೆ. ಇಂತಹ ಅಭ್ಯಾಸಗಳು ಪ್ರದೇಶದ ನೈಸರ್ಗಿಕ ಸೌಂದರ್ಯವನ್ನು ಹಾಳು ಮಾಡಿವೆ ಮತ್ತು ಸ್ಥಳೀಯ ಸಮುದಾಯಗಳಿಗೆ ಆರೋಗ್ಯದ ಅಪಾಯಗಳನ್ನು ಸೃಷ್ಟಿಸಿವೆ. ಹೊಸ ನಿಯಮಗಳ ಪ್ರಕಾರ, ಪ್ರವಾಸೋದ್ಯಮ ಇಲಾಖೆ ನೀಡಿದ ಪರವಾನಗಿ ದಾಖಲೆಯಲ್ಲಿ ಪಟ್ಟಿ ಮಾಡದ ವಸ್ತುಗಳನ್ನು ಆರೋಹಿಗಳು ಸಾಗಿಸುವುದನ್ನು ನಿಷೇಧಿಸಲಾಗಿದೆ.

**8848.86 ಮೀಟರ್ ಎತ್ತರದ ಶಿಖರವನ್ನು ಏರಲು ಹೊಸ ಶುಲ್ಕಗಳು ಸೆಪ್ಟೆಂಬರ್ 1, 2025 ರಿಂದ ಜಾರಿಗೆ ಬರಲಿವೆ, ನೇಪಾಳ ಗೆಜೆಟ್‌ನಲ್ಲಿ ಪ್ರಕಟವಾದ ನಂತರ ಸಂಪುಟವು ಅನುಮೋದಿಸಿದ ಪರಿಷ್ಕೃತ ನಿಯಮಗಳು ಜಾರಿಗೆ ಬರಲಿವೆ. ಆದಾಗ್ಯೂ, ಎವರೆಸ್ಟ್ ಏರಲು ಬಯಸುವ ನೇಪಾಳಿ ಪರ್ವತಾರೋಹಿಗಳಿಗೆ ಶರತ್ಕಾಲದಲ್ಲಿ ಪ್ರಸ್ತುತ ರೂ. 75,000 ರಿಂದ ರೂ. 150,000 ಕ್ಕೆ ರಾಯ ಧನವನ್ನು ಎರಡು ಪಟ್ಟು ಹೆಚ್ಚಿಸಲಾಗುವುದು ಎಂದು ಅವರು ಹೇಳಿದರು.**

# ಭದ್ರತಾ ಲೋಪ ಸೇನಾ ಮುಖ್ಯಸ್ಥ ಹುದ್ದೆಗೆ ಹರ್ಜಿ ರಾಜೀನಾಮೆ



**ಜೆರುಸಲೆಮ್:** 2023ರ ಅಕ್ಟೋಬರ್ 7ರಂದು ಗಾಜಾದ ಪ್ಯಾಲೆಸ್ಟೀನಿಯನ್ ಹಮಾಸ್ ಬಂದೂಕುಧಾರಿಗಳು ಇಸ್ರೇಲ್ ಮೇಲೆ ಗಡಿಯಾಚೆಗಿನ ದಾಳಿ ನಡೆಸಿದ ವೇಳೆ ಉಂಟಾದ ಬೃಹತ್ ಭದ್ರತಾ ಲೋಪದ ಜವಾಬ್ದಾರಿ ಹೊತ್ತು ಇಸ್ರೇಲ್ ಸೇನಾ ಮುಖ್ಯಸ್ಥ ಹರ್ಜಿ ಹಲೇವಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಪ್ರಕಟಿಸಿದ್ದಾರೆ. ಇಸ್ರೇಲ್‌ನ ಮಿಟ್ಜ್ ಪೆರಾಮೋನ್ ಬಳಿಯ ಸೇನಾ ನೆಲೆಯಲ್ಲಿ ನಡೆದ 70 ನೇ ಸೇನಾ ಯುದ್ಧ ಅಧಿಕಾರಿಗಳ ಸಮಾರೋಪ ಸಮಾರಂಭದಲ್ಲಿ ಅವರು ಈ ನಿರ್ಧಾರ ಪ್ರಕಟಿಸಿದ್ದು ಮಾರ್ಚ್ 6 ರಂದು ರಾಜೀನಾಮೆ ನೀಡುವುದಾಗಿ ತಿಳಿಸಿದ್ದಾರೆ. ಇಸ್ರೇಲ್ ಇತಿಹಾಸದಲ್ಲಿ ಒಂದೇ ದಿನದ ಹಿನ್ನಲೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಒತ್ತಡ ಎದುರಿಸಿದ ಮೊದಲ ಸೇನಾ ಮುಖ್ಯಸ್ಥ ಹರ್ಜಿ ಹಲೇವಿ ಎಂದು ಹೇಳಲಾಗಿದೆ. ಈ ಕುರಿತು ಮಾತನಾಡಿದ ಅವರು 2023ರ ಅಕ್ಟೋಬರ್ 7 ರಂದು ಇಸ್ರೇಲ್ ರಕ್ಷಣಾ ಪಡೆಗಳ ವಿಚಾರಣೆ ಪೂರ್ಣಗೊಳಿಸುವುದಾಗಿ ಮತ್ತು ಭದ್ರತಾ ಸವಾಲುಗಳಿಗೆ ಐಡಿಎಫ್‌ನ ಸಿದ್ಧತೆ ಬಲಪಡಿಸುವುದಾಗಿ ಕೈಗೊಂಡ ಕ್ರಮ ಎಂದು ಅವರು ತಿಳಿಸಿದ್ದಾರೆ. ಅ. 7 ರ ಬಗ್ಗೆ ಸಾರ್ವಜನಿಕರ ಆಕ್ರೋಶದ ಹೊರತಾಗಿಯೂ, ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಸರ್ಕಾರ ಭದ್ರತಾ ಉಲ್ಲಂಘನೆಗೆ ತನ್ನದೇ ಆದ ಜವಾಬ್ದಾರಿಯ ಬಗ್ಗೆ ರಾಜ್ಯ ತನಿಖೆ ನಡೆಸುವುದನ್ನು ವಿರೋಸಿದಿದೆ ಇದರ ಪರಿಣಾಮವಾಗಿ 1,200 ಇಸ್ರೇಲಿಗಳು ಸಾವನ್ನಪ್ಪಿದರು ಮತ್ತು ಸುಮಾರು 250 ಒತ್ತೆಯಾಳುಗಳನ್ನು ತೆಗೆದುಕೊಳ್ಳಲಾಗಿದೆ.

ಅಕ್ಟೋಬರ್ 7 ರ ಬೆಳಿಗ್ಗೆ, ಇಸ್ರೇಲ್ ನಾಗರಿಕರನ್ನು ರಕ್ಷಿಸುವ ತನ್ನ ಕಾರ್ಯಾಚರಣೆಯಲ್ಲಿ ಐಡಿಎಫ್ ವಿಫಲವಾಯಿತು ಎಂದು ಹಲೆವಿ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್‌ಗೆ ಬರೆದ ರಾಜೀನಾಮೆ ಪತ್ರದಲ್ಲಿ ಬರೆದಿದ್ದಾರೆ. ಮಾನವ ಜೀವಗಳು, ದೇಹ, ಆತ್ಮದಲ್ಲಿ ಅಪಹರಿಸಲ್ಪಟ್ಟ ಮತ್ತು ಗಾಯಗೊಂಡವರ ವಿಷಯದಲ್ಲಿ ಇಸ್ರೇಲ್ ಭಾರೀ ಬೆಲೆಯನ್ನು ಪಾವತಿಸಿದೆ ಈ ಭದ್ರತಾ ವೈಫಲ್ಯದ ನನ್ನ ಜವಾಬ್ದಾರಿ ಪ್ರತಿದಿನ, ಗಂಟೆಯಿಂದ ಗಂಟೆಗೆ ನನ್ನೊಂದಿಗೆ ಇರುತ್ತದೆ ಮತ್ತು ಜೀವನದುದ್ದಕ್ಕೂ ಹಾಗೆಯೇ ಇರುತ್ತದೆ ಎಂದು ತಿಳಿಸಿದ್ದಾರೆ.

ಅ. 7ರ ವೈಫಲ್ಯಗಳ ಕುರಿತು ಹಲವಾರು ಹಿರಿಯ ಮಿಲಿಟರಿ ಅಧಿಕಾರಿಗಳು ಈಗಾಗಲೇ ರಾಜೀನಾಮೆ ನೀಡಿದ್ದಾರೆ ಮತ್ತು ಮಿಲಿಟರಿಯ ದಕ್ಷಿಣ ಕಮಾಂಡ್‌ನ ಮುಖ್ಯಸ್ಥ ಮೇಜರ್-ಜನರಲ್ ಯಾರೋನ್ ಫಿಂಕೆಲ್‌ಮನ್ ಕೂಡ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

# ನಾಲ್ಕು ವರ್ಷಕ್ಕೆ 600 ಬಿಲಿಯನ್ ಬಂಡವಾಳ ಹೂಡಿಕೆ ಮಾತುಕತೆ

## ಟ್ರಂಪ್ ಆಡಳಿತದ ಅವಧಿಯಲ್ಲಿ ಅಭೂತಪೂರ್ವ ಆರ್ಥಿಕ ಸಮೃದ್ಧಿಯನ್ನು ರಚಿಸಬಹುದು ಎಂದು ಭರವಸೆ



**ಸೌದಿ ಅರೇಬಿಯಾ ಹೂಡಿಕೆಗೆ ಪ್ಲ್ಯಾನ್**

**ಸೌದಿ ಅರೇಬಿಯಾ:** ಮುಂದಿನ ನಾಲ್ಕು ವರ್ಷದಲ್ಲಿ ಅಮೆರಿಕದ ಜೊತೆಗೆ ಬಂಡವಾಳ ಹೂಡಿಕೆ ವಿಸ್ತರಣೆ ಹಾಗೂ ವ್ಯವಹಾರ ವೃದ್ಧಿಸಲು ಸೌದಿ ಅರೇಬಿಯಾವು 600 ಬಿಲಿಯನ್ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಸೌದಿ ಅರೇಬಿಯಾ ರಾಜ ಮಹಮ್ಮದ್ ಬಿನ್ ಸಲ್ಮಾನ್ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗೆ ಮಾತುಕತೆ ನಡೆಸಿದ್ದಾರೆಂದು ಸೌದಿಯ ನ್ಯೂಸ್ ಏಜೆನ್ಸಿ ಗುರುವಾರ ಮುಂಜಾನೆ ಪ್ರಕಟ ಮಾಡಿದೆ. ಇಬ್ಬರು ನಾಯಕರ ನಡುವಿನ ದೂರವಾಣಿ ಕರೆಯಲ್ಲಿ, ಸೌದಿ ದೊರೆ ಟ್ರಂಪ್ ಆಡಳಿತದ ಅವಧಿಯಲ್ಲಿ ನಿರೀಕ್ಷಿತ ಸುಧಾರಣೆಗಳು , ಅಭೂತಪೂರ್ವ ಆರ್ಥಿಕ ಸಮೃದ್ಧಿಯನ್ನು ರಚಿಸಬಹುದು ಎಂದು ಹೇಳಿದ್ದಾರೆ ಎಂಬುದಾಗಿ ರಾಜ್ಯ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಸೌದಿ ಅರೇಬಿಯಾ ತನ್ನ ಬೃಹತ್ ಮೊತ್ತದ ಹೂಡಿಕೆ ಮೂಲಕ ಸದ್ಯದ ಪರಿಸ್ಥಿತಿಗಳ ಲಾಭ ಪಡೆಯಲು ಬಯಸುತ್ತದೆ ಎಂದು ವರದಿ ಹೇಳಿದೆ. ಇದು 600 ಬಿಲಿಯನ್ ಬಂಡವಾಳದ ಮೂಲವನ್ನು ವಿವರಿಸಿಲ್ಲ. ಅಲ್ಲದೆ ಈ ಬಂಡವಾಳವು ಸಾರ್ವಜನಿಕ ಅಥವಾ ಖಾಸಗಿ ಖರ್ಚು ಅಥವಾ ಹಣವನ್ನು ಹೇಗೆ ನಿಯೋಜಿಸಲಾಗುವುದು ಎಂಬುದನ್ನು ಕೂಡಾ ವಿವರಿಸಿಲ್ಲ.

ಹೆಚ್ಚುವರಿ ಅವಕಾಶಗಳು ಬಂದರೆ ಹೂಡಿಕೆಯು ಇನ್ನಷ್ಟು ಹೆಚ್ಚಾಗಬಹುದು ಎಂದು ಬಿನ್ ಸಲ್ಮಾನ್ ಟ್ರಂಪ್‌ಗೆ ಹೇಳಿದ್ದಾಗಿ ಸಂಸ್ಥೆ ಉಲ್ಲೇಖಿಸಿದೆ. ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ ಸೌದಿ ಅರೇಬಿಯಾ ಸೇರಿದಂತೆ ಗಲ್ಫ್ ರಾಷ್ಟ್ರಗಳೊಂದಿಗೆ ನಿಕಟ ಸಂಬಂಧವನ್ನು ಬೆಳೆಸಿದ್ದರು. ಟ್ರಂಪ್ ಅಧಿಕಾರವನ್ನು ತೊರೆದ ನಂತರ ಟ್ರಂಪ್ ಅವರ ಅಳಿಯ ಮತ್ತು ಮಾಜಿ ಸಹಾಯಕ ಜೇರೆಡ್ ಕುಶ್ನರ್ ಸ್ಥಾಪಿಸಿದ ಸಂಸ್ಥೆಯಲ್ಲಿ ದೇಶವು 2 ಬಿಲಿಯನ್ ಹೂಡಿಕೆ ಮಾಡಿದೆ. ರಿಯಾದ್ ತನ್ನ ಮೊದಲ ಅವಧಿಯಲ್ಲಿ ಮಾಡಿದಂತೆಯೇ 500 ಶತಕೋಟಿ ಮೌಲ್ಯದ ಅಮೇರಿಕನ್ ಉತ್ಪನ್ನಗಳನ್ನು ಖರೀದಿಸಲು ಒಪ್ಪಿಕೊಂಡರೆ ಸೌದಿ ಅರೇಬಿಯಾವನ್ನು ವಿದೇಶಿ ಭೇಟಿಗಾಗಿ ತನ್ನ ಮೊದಲ ತಾಣವನ್ನಾಗಿ ಪರಿಗಣಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಅಧಿಕಾರ ಸ್ವೀಕಾರದ ಬಳಿಕ ಹೇಳಿದ್ದರು.

ಕಳೆದ ಬಾರಿ ಸೌದಿ ಅರೇಬಿಯಾದೊಂದಿಗೆ ನಾನು ಅದನ್ನು ಮಾಡಿದ್ದೇನೆ ಏಕೆಂದರೆ ಅವರು ನಮ್ಮ 450 ಬಿಲಿಯನ್ ಮೌಲ್ಯದ ಉತ್ಪನ್ನಗಳನ್ನು ಖರೀದಿಸಲು ಒಪ್ಪಿಕೊಂಡಿದ್ದರು. ಈ ಬಾರಿಯೂ ನಾನು ಅದನ್ನು ಮಾಡುತ್ತೇನೆ ಆದರೆ ನೀವು ಅಮೆರಿಕನ್ ಉತ್ಪನ್ನವನ್ನು ಖರೀದಿಸಬೇಕು ಎಂದು 2017 ಗಲ್ಫ್ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದನ್ನು ಉಲ್ಲೇಖಿಸಿ ಟ್ರಂಪ್ ಮಾತನಾಡಿದ್ದಾರೆ.

### ಆರ್ಥಿಕ ಸಂಧಾನ ಯೋಜನೆ

**ಸೌದಿ ಅರೇಬಿಯಾ ಮುಂದಿನ ನಾಲ್ಕು ವರ್ಷದಲ್ಲಿ ಅಮೆರಿಕದಲ್ಲಿ 600 ಬಿಲಿಯನ್ ಬಂಡವಾಳ ಹೂಡಿಕೆ ಬಗ್ಗೆ ಮಾತುಕತೆ ನಡೆಸಿದೆ ಎಂದು ಸೌದಿ ಮಾಧ್ಯಮಗಳು ವರದಿ ಮಾಡಿದೆ. ಸೌದಿ ಅರೇಬಿಯಾ ರಾಜ ಮಹಮ್ಮದ್ ಬಿನ್ ಸಲ್ಮಾನ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವೆ ದೂರವಾಣಿ ಮಾತುಕತೆ ನಡೆದಿದೆ. ಅಮೆರಿಕ ಮತ್ತು ಸೌದಿ ನಡುವೆ ಆರ್ಥಿಕ ಸಂಧಾನ ವೃದ್ಧಿಸುವ ಯೋಜನೆ ಇದಾಗಲಿದೆ.**

- **ಬೃಹತ್ ಹೂಡಿಕೆ ಬಗ್ಗೆ ಸೌದಿ ಅರೇಬಿಯಾ ರಾಜ ಮಹಮ್ಮದ್ ಬಿನ್ ಸಲ್ಮಾನ್ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗೆ ಮಾತುಕತೆ**
- **ಅಮೇರಿಕನ್ ಉತ್ಪನ್ನಗಳನ್ನು ಖರೀದಿಸಿದರೆ ಟ್ರಂಪ್ ಸೌದಿ ಅರೇಬಿಯಾಕ್ಕೆ ಭೇಟಿ ನೀಡುವ ಭರವಸೆ**

## ಮಿನಿ ನ್ಯೂಸ್

### ಪಾಕ್ ಜತೆಗಿನ ವ್ಯಾಪಾರ ಪುನರಾರಂಭದ ಮಾತುಕತೆ ನಡೆದಿಲ್ಲ; ಜೈಶಂಕರ್

**ವಾಷಿಂಗ್ಟನ್:** ಭಾರತದೊಂದಿಗೆ ವ್ಯಾಪಾರ ಪುನರಾರಂಭದ ಬಗ್ಗೆ ಪಾಕಿಸ್ತಾನದೊಂದಿಗೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಹೇಳಿದ್ದಾರೆ. ಕಳೆದ ವರ್ಷದ ನಂತರ, ವ್ಯಾಪಾರದ ಬಗ್ಗೆ ಪಾಕಿಸ್ತಾನದೊಂದಿಗೆ ಯಾವುದೇ ಮಾತುಕತೆ ನಡೆದಿಲ್ಲ, ಅಥವಾ ಅವರ ಕಡೆಯಿಂದ ಯಾವುದೇ ಉಪಕ್ರಮವೂ ಬಂದಿಲ್ಲ ಎಂದು ಜೈಶಂಕರ್ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಭಾರತವು ಪಾಕಿಸ್ತಾನದೊಂದಿಗಿನ ವ್ಯಾಪಾರವನ್ನು ಎಂದಿಗೂ ನಿಲ್ಲಿಸಿಲ್ಲ ಮತ್ತು ಈ ನಿಟ್ಟಿನಲ್ಲಿ ಪಾಕಿಸ್ತಾನ ಸರ್ಕಾರವು 2019 ರಲ್ಲಿ ನಿರ್ಧಾರವನ್ನು ತೆಗೆದುಕೊಂಡಿದೆ ಎಂದು ಅವರು ಹೇಳಿದರು. ಮೊದಲಿನಿಂದಲೂ, ಭಾರತವು ಅತ್ಯಂತ ಒಲವು ಹೊಂದಿರುವ ರಾಷ್ಟ್ರದ ಸ್ಥಾನಮಾನವನ್ನು ಪಡೆಯಬೇಕು ಎಂಬುದು ನಮ ಆಸಕ್ತಿಯಾಗಿತ್ತು. ನಾವು ಪಾಕಿಸ್ತಾನಕ್ಕೆ ಎಂಎಫ್‌ಎನ್ ಸ್ಥಾನಮಾನವನ್ನು ನೀಡುತ್ತಿದ್ದೆವು. ಆದರೆ ಅವರು ನಮಗೆ ಅದೇ ಸ್ಥಾನಮಾನವನ್ನು ನೀಡಲಿಲ್ಲ ಎಂದು ಜೈಶಂಕರ್ ಹೇಳಿದರು.

ಇಮ್ರಾನ್ ಖಾನ್ ನೇತೃತ್ವದ ಆಗಿನ ಪಾಕಿಸ್ತಾನ ಸರ್ಕಾರವು ತನ್ನ ಸಂವಿಧಾನದ 370 ನೇ ವಿಧಿಯನ್ನು ರದ್ದುಗೊಳಿಸಿದ ಭಾರತಕ್ಕೆ ಪ್ರತೀಕಾರವಾಗಿ ಆಗಸ್ಟ್ 2019 ರಲ್ಲಿ ಎಲ್ಲಾ ದ್ವಿಪಕ್ಷೀಯ ವ್ಯಾಪಾರವನ್ನು ಸ್ಥಗಿತಗೊಳಿಸಿತು, ಇದು ಹಿಂದಿನ ರಾಜ್ಯವಾದ ಜಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿತು. ಇಸ್ಲಾಮಾಬಾದ್ ಕೂಡ ನವದೆಹಲಿಯೊಂದಿಗಿನ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಡೌನ್‌ಗ್ರೇಡ್ ಮಾಡಿತ್ತು ಎಂದು ಅವರು ಹೇಳಿದ್ದಾರೆ.

### ಸುಭಾಷ್ ಚಂದ್ರ ಬೋಸ್ ಜನ್ಮದಿನ, ಶ್ರದ್ಧಾಂಜಲಿ ಸಲ್ಲಿಸಿದ ಪ್ರಧಾನಿ

**ನವದೆಹಲಿ:** ದೇಶ ಭಕ್ತ ಸುಭಾಷ್ ಚಂದ್ರ ಬೋಸ್ ಅವರ ಜನ್ಮ ದಿನಾಚರಣೆಯಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಚಂದ್ರಬೋಸ್ ಅವರ ಜನದಿನದಂದು, ಭಾರತದ ಸ್ವಾತಂತ್ರ್ಯ ಚಳುವಳಿಗೆ ಅವರ ಕೊಡುಗೆ ಅಪ್ರತಿಮವಾಗಿದೆ ಎಂದು ಅವರು ಹೇಳಿದರು.

ಬ್ರಿಟಿಷರ ವಿರುದ್ಧ ಹೋರಾಡಲು ಆಜಾದ್ ಹಿಂದ್ ಫೌಜ್ ಅನ್ನು ಮುನ್ನಡೆಸಿದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಬೋಸ್ ಅವರನ್ನು ನೆನಪಿಸಿಕೊಂಡ ಮೋದಿ, ಅವರು ಧೈರ್ಯವನ್ನು ಬಿಂಬಿಸಿದ್ದಾರೆ ಎಂದು x ಮಾಡಿದ್ದಾರೆ. ಅವರು ಊಹಿಸಿದ ಭಾರತವನ್ನು ನಿರ್ಮಿಸಲು ನಾವು ಕೆಲಸ ಮಾಡುತ್ತಿರುವಾಗ ಅವರ ದಷ್ಟಿಕೋನವು ನಮ್ಮನ್ನು ಪ್ರೇರೇಪಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಬೋಸ್ ಅವರ ಜನ ವಾರ್ಷಿಕೋತ್ಸವವನ್ನು ಪರಾಕ್ರಮ್ ದಿವಸ್ ಎಂದು ಸರಿಪಸಲಾಗುತ್ತದೆ. 1897 ರಲ್ಲಿ ಜನಿಸಿದ ಬೋಸ್ ಅವರು ವರ್ಚಸ್ವಿ ಮತ್ತು ಜನಪ್ರಿಯ ನಾಯಕರಾಗಿದ್ದರು, ಅವರು ಕಾಂಗ್ರೆಸ್‌ನ ಅಧ್ಯಕ್ಷರಾಗುವ ಸಾಧ್ಯತೆ ಇತ್ತು. ಆದರೆ ಭಾರತದ ವಸಾಹತುಶಾಹಿ ಆಡಳಿತಗಾರರ ವಿರುದ್ಧ ಹೋರಾಡಲು ಮಿಲಿಟರಿಯನ್ನು ಹೆಚ್ಚಿಸುವುದು ಸೇರಿದಂತೆ ಹೆಚ್ಚು ದಢವಾದ ಅವರ ಪ್ರತಿಪಾದನೆಗಾಗಿ ಅವರು ಪಕ್ಷದಿಂದ ಹೊರಗುಳಿದರು.

### ಜಲಗಾಂವ್ ರೈಲು ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆ

**ಜಲಗಾಂವ್:** ರೈಲು ಹಳಿ ಮೇಲೆ ತಲೆಯಿಲ್ಲದ ದೇಹ ಪತ್ತೆಯಾಗುವುದರೊಂದಿಗೆ ಜಲಗಾಂವ್ ರೈಲು ಅಪಘಾತದಲ್ಲಿ ಮತರ ಸಂಖ್ಯೆ 13 ಕ್ಕೆ ಏರಿದೆ. 13 ಮಂದಿಯಲ್ಲಿ, ನಾವು ಅವರ ಆಧಾರ್ ಕಾರ್ಡ್‌ಗಳಿಂದ ಎರಡು ಸೇರಿದಂತೆ ಎಂಟು ದೇಹಗಳನ್ನು ಗುರುತಿಸಿದ್ದೇವೆ ಎಂದು ವಿಶೇಷ ಪೊಲೀಸ್ ಮಹಾನಿರೀಕ್ಷಕ ದತ್ತಾತ್ರಯ ಕರಾಳೆ ಪಿಟಿಐಗೆ ತಿಳಿಸಿದರು. ಗುರುತಿಸಲಾದ ಎಂಟು ಮೃತರಲ್ಲಿ ನಾಲ್ವರು ನೇಪಾಳದವರು ಸೇರಿದ್ದಾರೆ ಎಂದು ಜಲಗಾಂವ್ ಜಿಲ್ಲಾ ಮಾಹಿತಿ ಅಧಿಕಾರಿ ಯುವರಾಜ್ ಪಾಟೀಲ್ ಪಿಟಿಐಗೆ ತಿಳಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡ 15 ಜನರಲ್ಲಿ 10 ಜನರು ಪ್ರಸ್ತುತ ಚಿಕಿತ್ಸೆ ಪಡೆಯುತ್ತಿದ್ದಾರೆ ಒಂಬತ್ತು ಮಂದಿ ಪಚೋರಾ ಸಿವಿಲ್ ಆಸ್ಪತ್ರೆಯಲ್ಲಿ ಮತ್ತು ಒಬ್ಬರು ಜಲಗಾಂವ್ ನಗರದ ವೈದ್ಯಕೀಯ ಸೌಲಭ್ಯದಲ್ಲಿ ಸಣ್ಣ ಗಾಯಗಳಿಂದ ಬಳಲುತ್ತಿದ್ದ ಇತರರನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ಹೇಳಿದರು.

ಏತನಧ್ಯೆ, ಲಕ್ನೋ-ಮುಂಬೈ ಪುಷ್ಪಕ್ ಎಕ್ಸ್‌ಪ್ರೆಸ್ ಗುರುವಾರ ಮುಂಜಾನೆ 1.20 ರ ಸುಮಾರಿಗೆ ಮಹಾರಾಷ್ಟ್ರ ರಾಜಧಾನಿಯ ಅಂತಿಮ ತಾಣವಾದ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ (ಸಿಎಸ್‌ಎಂಟಿ) ಅನ್ನು ತಲುಪಿದೆ ಎಂದು ರೈಲ್ವೆ ವಕ್ತಾರರು ತಿಳಿಸಿದ್ದಾರೆ. ಕೇಂದ್ರ ರೈಲ್ವೇಯ ಪ್ರಧಾನ ವ್ಯವಸ್ಥಾಪಕರು ಮತ್ತು ಇತರ ಹಿರಿಯ ಅಧಿಕಾರಿಗಳು ಸಹ ರಾತ್ರಿ ಅಪಘಾತ ಸ್ಥಳಕ್ಕೆ ತಲುಪಿ ಸ್ಥಳವನ್ನು ಪರಿಶೀಲಿಸಿದರು ಎಂದು ಅವರು ಹೇಳಿದರು. ಗಾಯಾಳುಗಳನ್ನು ಚಿಕಿತ್ಸೆಗಾಗಿ ಕರೆದೊಯ್ಯುವ ಆಸ್ಪತ್ರೆಗಳಿಗೂ ಭೇಟಿ ನೀಡಿದರು. ನಿನ್ನೆ ಸಂಜೆ ಪುಷ್ಪಕ್ ಎಕ್ಸ್‌ಪ್ರೆಸ್‌ನಲ್ಲಿದ್ದ ಪ್ರಯಾಣಿಕರು ಬೆಂಕಿಯ ಭಯದಿಂದ ಪಕ್ಕದ ಹಳಿಗಳ ಮೇಲೆ ಧಾವಿಸಿ ಮುಂದೆ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್‌ನಿಂದ ಓಡಿದಾಗ ಈ ದುರಂತ ಸಂಭವಿಸಿದೆ.

### ಪತ್ನಿಯನ್ನು ಕೊಂದು ಕುಕ್ಕರ್‌ನಲ್ಲಿ ಬೇಯಿಸಿದ ಪಾಪಿ ಪತಿ

**ಹೈದರಾಬಾದ್:** ವ್ಯಕ್ತಿಯೊಬ್ಬ ತನ್ನ ಹೆಂಡತಿಯನ್ನು ಕೊಂದು ದೇಹವನ್ನು ಹಲವು ತುಂಡುಗಳನ್ನಾಗಿ ಕತ್ತರಿಸಿ ಪ್ರೆಶರ್ ಕುಕ್ಕರ್‌ನಲ್ಲಿ ಬೇಯಿಸಿರುವ ಪೈಶಾಚಿಕ ಕೃತ್ಯ ಹೈದರಾಬಾದ್‌ನಲ್ಲಿ ನಡೆದಿದೆ. 45 ವರ್ಷದ ಗುರುಮೂರ್ತಿ ಎಂಬಾತ ತನ್ನ ಪತ್ನಿ ನಾಪತ್ತೆಯಾದ ನಂತರ ಪೊಲೀಸ್ ತನಿಖೆ ಸಂದರ್ಭದಲ್ಲಿ ಬೆಚ್ಚಿ ಬೀಳಿಸುವ ಸತ್ಯ ಬಾಯಿಬಿಟ್ಟಿದ್ದಾನೆ.ವೆಂಕಟ ಮಾಧವಿ (35) ಜನವರಿ 16 ರಂದು ನಾಪತ್ತೆಯಾಗಿದ್ದಾರೆ ಎಂದು ಮನೆಯವರು ದೂರು ನೀಡಿದ್ದರು. ಪೊಲೀಸರು ತನಿಖೆ ಆರಂಭಿಸಿದಾಗ, ಅವರಿಗೆ ಗಂಡನ ಮೇಲೆ ಅನುಮಾನವಿತ್ತು. ಆತನನ್ನು ವಿಚಾರಣೆಗೆ ಒಳಪಡಿಸಿದಾಗ ವ್ಯಕ್ತಿ ತಪ್ಪೊಪ್ಪಿಕೊಂಡಿದ್ದಾನೆ. ಗುರುಮೂರ್ತಿ ಬಾತ್ ರೂಮಲ್ಲಿ ದೇಹವನ್ನು ಕತ್ತರಿಸಿ ಒತ್ತಡದ ಕುಕ್ಕರ್‌ನಲ್ಲಿ ಆಕೆಯ ದೇಹದ ಭಾಗಗಳನ್ನು ಕುದಿಸಿದನು. ನಂತರ ಎಲುಬುಗಳನ್ನು ಬೇರ್ಪಡಿಸಿ ಅವುಗಳನ್ನು ಪುಡಿಮಾಡಿ ಮತ್ತೆ ಕುದಿಸಿದರು. ಮೂರು ದಿನಗಳ ಕಾಲ ಮಾಂಸ ಮತ್ತು ಮೂಳೆಗಳನ್ನು ಹಲವು ಸುತ್ತಿನ ಕಾಲ ಬೇಯಿಸಿದ ನಂತರ, ವ್ಯಕ್ತಿ ಅವುಗಳನ್ನು ಪ್ಯಾಕ್ ಮಾಡಿ ಮೀರಪೇಟ್ ಸರೋವರಕ್ಕೆ ಎಸೆದಿದ್ದಾನೆ ಎಂದು ವರದಿಯಾಗಿದೆ.

ಗುರುಮೂರ್ತಿ, ಮಾಜಿ ಸೈನಿಕ, ಪ್ರಸ್ತುತ ರಕ್ಷಣಾ ಸಂಶೋಧನೆ ಮತ್ತು ಅಭಿವದ್ಧಿ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ಉದ್ಯೋಗಿಯಾಗಿದ್ದಾರೆ. ದಂಪತಿಗಳು ಇಬ್ಬರು ಮಕ್ಕಳಿಗೆ ಪೋಷಕರಾಗಿದ್ದಾರೆ. ವರದಿಗಳ ಪ್ರಕಾರ, ಇಬ್ಬರೂ ಆಗಾಗ್ಗೆ ಜಗಳವಾಡುತ್ತಿದ್ದರು. ಆಪಾದಿತ ಕೊಲೆ ಏಕೆ ಮತ್ತು ಹೇಗೆ ನಡೆದಿದೆ ಎಂಬುದು ಸ್ಪಷ್ಟವಾಗಿಲ್ಲ, ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

